ಸಂಪುಟ: 05 ಸಂಚಿಕೆ: 253 ಪುಟಗಳು: 08 ಗುರುವಾರ 27 ನವೆಂಬರ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಶಿಕ್ಷಣದ ಉದ್ದೇಶವು ವ್ಯಕ್ತಿಯ ಪರಿಪೂರ್ಣತೆಯಾಗಿದೆ ಹೊರತು ಜೀವನಕ್ಕಾಗಿ ಉದ್ಯೋಗವನ್ನು ಪಡೆಯುವುದಲ್ಲ.

# ಡಿಕೆಶಿಯನ್ನು ಭೇಟಿ ಮಾಡಿದ್ದು ನಿಜ, ಆದರೆ ನಾಯಕತ್ವ ಬದಲಾವಣೆ ಚರ್ಚೆ ಆಗಿಲ್ಲ

## ■ ಭೇಟಿಯಲ್ಲಿ ನಾಯಕತ್ವ ಬದಲಾವಣೆ ಬಗ್ಗೆ ಚರ್ಚೆ ಮಾಡಿಲ್ಲ ■ ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟನೆ



• ಉದಯವಾಹಿನಿ, ಬೆಂಗಳೂರು

ಕೆಪಿಸಿಸಿ ಅಧ್ಯಕ್ಷ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದು ನಿಜ. ಆದರೆ, ನಾಯಕತ್ವ ಬದಲಾವಣೆಯ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ ಎಂದು ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದರು. ಬೆಂಗಳೂರಿನಲ್ಲಿ ಈ ಕುರಿತಾಗಿ ಅವರು ಮಾತನಾಡಿ, ಭೇಟಿಯ ಸಂದರ್ಭದಲ್ಲಿ ಪಕ್ಷ ಸಂಘಟನೆ ಹಾಗೂ ಮುಂದಿನ ಚುನಾವಣೆಯ ಬಗ್ಗೆ ಚರ್ಚೆ ಆಗಿದೆ ಎಂದು ಹೇಳಿದರು.

ಮೂರನೇ ಆಯ್ಕೆ ವಿಚಾರವಾಗಿ ಮಾತನಾಡಿ, ''ಅಧ್ಯಕ್ಷರ ಭೇಟಿ ಸಿಮೀತವಾಗಿ ಮಾತಾಡುತ್ತೇನೆ. ಮೂರನೇ ಆಯ್ಕೆಯಂತಹ ಸನ್ನಿವೇಶ ಬಂದಿಲ್ಲ. ಸನ್ನಿವೇಶ ಬರದೆ ಕೋಟ್ ಹೋಲಿಸಿಕೊಳ್ಳಬಹುದು.

ಇವಾಗಲೇ ಹೊಲಿಸಿಕೊಂಡರೆ ಕೋಟ್ ಹಾಕಿಕೊಳ್ಳಲು ಆಗದೆ, ಬಿಚ್ಚಲು ಆಗದೆ ಆಗಬಾರದು. ಅಂತಹ ಸನ್ನಿವೇಶ ಬಂದಿಲ್ಲ'' ಎಂದು ಸ್ಪಷ್ಟಪಡಿಸಿದರು.

ಪಕ್ಷದ ಅಧ್ಯಕ್ಷರನ್ನು ಹಲವು ಮಾಡಿ ಭೇಟಿ ಮಾಡಿದ್ದೇನೆ. ಕಚೇರಿಯಲ್ಲಿ ಭೇಟಿಯಾಗಿದ್ದವು ಅಷ್ಟೇ ಅಲ್ಲದೆ, ಅವರ ಮನೆಯಲ್ಲಿ ಭೇಟಿಯಾಗಿದ್ದೇವೆ ಎಂದು ತಿಳಿಸಿದರು.

### ಖರ್ಗೆಯನ್ನು ಭೇಟಿ ಮಾಡ್ತೇನೆ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡುತ್ತೇನೆ. ಈ ನಿಟ್ಟಿನಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರ ಸಮಯ ಕೇಳುತ್ತೇನೆ. ಸಮಯ ಸಿಕ್ಕರೆ ಭೇಟಿ ಮಾಡಿ ನನ್ನ ಅಭಿಪ್ರಾಯ ಹೇಳುತ್ತೇನೆ ಎಂದರು. ಸಿಎಂ ಸ್ಥಾನಕ್ಕೆ ನಾನೂ ಆಕಾಂಕ್ಷಿ ಎಂಬ ಡಾ. ಜಿ ಪರಮೇಶ್ವರ್ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿ, ಇದರಲ್ಲಿ ತಪ್ಪೇನಿದೆ ಅವರು ಎಂಟು ವರ್ಷ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಆದರೆ ಹೈಕಮಾಂಡ್ ತೀರ್ಮಾನ ಮಾಡಬೇಕು ಎಂದರು.

ಎಲ್ಲರೂ ಒಗ್ಗಟ್ಟನಿಂದ ಇರಬೇಕು, ಪಕ್ಷದಿಂದ ಒಗ್ಗಟ್ಟಿನಿಂದ ಇರುವುದು ಅಷ್ಟೇ ನಮ್ಮ ಉದ್ದೇಶ. ಡಿಕೆಶಿಯನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಪಕ್ಷ ಸಂಘಟನೆ, ಮುಂದಿನ ಎಲೆಕ್ಷನ್ ಬಗ್ಗೆ ಚರ್ಚೆ ಆಗಿದೆ ಎಂದರು. ಡಿಕೆ ಶಿವಕುಮಾರ್ ಅವರು ಎಲ್ಲಾ ಸಚಿವರನ್ನು ಹಾಗೂ ಶಾಸಕರನ್ನು ಭೇಟಿ ಮಾಡುತ್ತಿದ್ದಾರೆ. ಕೊನೆಯವನು ನಾನೇ ಇರಬೇಕು. ನನಗಿರುವ ಮಾಹಿತಿ ಪ್ರಕಾರ ನಾನೇ ಕೊನೆಯವನು ಇರಬೇಕು. ಈ ಹಿಂದೆ ಸಾಕಷ್ಟು ಬಾರಿ ಅವರು ಭೇಟಿಯಾಗಿದ್ದಾರೆ. ಅಷ್ಟೇ ಅಲ್ಲದೆ, ಡಿಕೆ ಸುರೇಶ್ ಕೂಡಾ ಈ ಹಿಂದೆ ಭೇಟಿಯಾಗಿದ್ದರು. ನಾವು ಅವರ ಮನೆಗೆ ಹೋಗಿ ಬಂದಿದ್ದೇವೆ ಎಂದರು.

**ಡಿಕೆಶಿ ಅವರಿಗೆ ಸಿಎಂ ಆಗುವ ಆಸೆ ಸಹಜ**

ಡಿಕೆ ಶಿವಕುಮಾರ್ ಅವರಿಗೆ ಸಿಎಂ ಆಗಬೇಕು ಎಂದು ಆಸೆ ಇರುತ್ತದೆ. ಮೊದಲನೇ ದಿನದಿಂದಲೂ ಅವರು ಸಿಎಂ ಸ್ಥಾನ ಕ್ಲೇಮ್ ಮಾಡಿದ್ದಾರೆ. ಆದರೆ, ಹೈಕಮಾಂಡ್ ಸಿದ್ದರಾಮಯ್ಯ ಸಿಎಂ ಎಂದು ತೀರ್ಮಾನ ಮಾಡಿದೆ. ಈಗಲೂ ಹೈಕಮಾಂಡ್ ತೀರ್ಮಾನ ಮಾಡಬೇಕು ಎಂದರು.

## ಮತಗಳ್ಳತನ ಮಾಡಿ ಸಿಕ್ಕಿಬಿದ್ದು ತುರ್ತು ಪರಿಸ್ಥಿತಿ ಹೇರಿದ್ದ ಇಂದಿರಾಗಾಂಧಿ

• ಉದಯವಾಹಿನಿ, ಬೆಂಗಳೂರು

1975ರಲ್ಲಿ ಮತಗಳ್ಳತನ ಮಾಡಿ ಸಿಕ್ಕಿಬಿದ್ದ ಇಂದಿರಾಗಾಂಧಿಯವರು ತನ್ನ ಅಧಿಕಾರ ಉಳಿಸಿಕೊಳ್ಳಲು ದೇಶಕ್ಕೆ ತುರ್ತು ಪರಿಸ್ಥಿತಿ ಹೇರಿದ್ದರು. ಯಾವ ಕೋರ್ಟುಗಳೂ ಪ್ರಶ್ನೆ ಮಾಡದಂತೆ ನೋಡಿಕೊಂಡಿದ್ದರು. ನ್ಯಾಯಾಲಯಗಳೇ ತಟಸ್ಥವಾಗಿ ಇರುವಂತೆ ಮಾಡಲಾಗಿತ್ತು ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಆಕ್ಷೇಪಿಸಿದ್ದಾರೆ. ಇಂಥ ಅನಾಹುತಗಳನ್ನು ಮಾಡಿದ ಕಾಂಗ್ರೆಸ್ ಪಕ್ಷವು ಮತಗಳ್ಳತನದ ಮಾತನಾಡುತ್ತಿದೆ.

ನಾವು ಸಂವಿಧಾನದ ವಿರೋಧಿಗಳು ಎನ್ನುತ್ತಿದೆ ಎಂದು ಟೀಕಿಸಿದರು. ಕಾಂಗ್ರೆಸ್ ಮೊದಲು ಸಂವಿಧಾನದ ಕೊಲೆ ಮಾಡುತ್ತದೆ. ತನಿಖೆ ಮಾಡಿದಾಗ ಕಾಂಗ್ರೆಸ್ಸೇ ಬಂಧನಕ್ಕೆ ಒಳಗಾಗುತ್ತದೆ ಎಂದು ಅವರು ವಿಶ್ಲೇಷಿಸಿದರು. ಮತಗಳ್ಳತನದ ಮಾತನಾಡುತ್ತಾರೆ; ಕೋರ್ಟಿಗೆ ಹೋಗುವುದಿಲ್ಲ. ಯಾಕೆಂದರೆ ರಾಹುಲ್ ಗಾಂಧಿ ಬಂಧನಕ್ಕೆ ಒಳಗಾಗುತ್ತಾರೆ ಎಂಬುದೇ ಇದಕ್ಕೆ ಕಾರಣ ಎಂದು ತಿಳಿಸಿದರು. ಇಂಥ ಕಳ್ಳ ಕಾಂಗ್ರೆಸ್ ಕೈಯಲ್ಲಿ ದೇಶ ಬದುಕುತ್ತಿದೆಯಲ್ಲವೇ ಬೇಕೇ ಇದು ಎಂದು ಕೇಳಿದರು.

## ಕೃಷ್ಣಮೃಗಗಳ ಸಾವು; ವರದಿ ನೀಡುವಂತೆ ಪ್ರಾಧಿಕಾರ ನಿರ್ದೇಶನ

• ಉದಯವಾಹಿನಿ, ಬೆಂಗಳೂರು

ಬೆಳಗಾವಿ ಸಮೀಪದ ಭೂತರಾಮನ ಹಟ್ಟಿಯಲ್ಲಿರುವ ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ 31 ಕೃಷ್ಣಮೃಗಗಳು ಮೃತಪಟ್ಟಿರುವ ಬಗ್ಗೆ 15 ದಿನಗಳಲ್ಲಿ ಸಮಗ್ರ ವರದಿ ಸಲ್ಲಿಸಬೇಕು ಎಂದು ಕೇಂದ್ರ ಮೃಗಾಲಯ ಪ್ರಾಧಿಕಾರ ನಿರ್ದೇಶನ ನೀಡಿದೆ. ಅರಣ್ಯ ಇಲಾಖೆಯ ಮುಖ್ಯ ವನ್ಯಜೀವಿ ವಾರ್ಡನ್ (ಪಿಸಿಸಿಎಫ್) ಅವರಿಗೆ ಬುಧವಾರ ಪತ್ರ ಬರೆದಿರುವ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಡಾ.ವಿ.ಕೆಮೆಂಟ್ ಬೆನ್, 'ಈ ಘಟನೆಯ ಬಗ್ಗೆ ಸ್ವತಂತ್ರ ತನಿಖೆಗೆ ಆಗ್ರಹಿಸಿ ಪ್ರಾಧಿಕಾರಕ್ಕೆ ದೂರು ಸಲ್ಲಿಕೆಯಾಗಿದೆ. ಹೀಗಾಗಿ, ಕೃಷ್ಣಮೃಗಗಳ ಸಾವಿನ ನೈಜ ಕಾರಣಗಳ ಬಗ್ಗೆ ಸಮಗ್ರ ವರದಿ ಸಲ್ಲಿಸಬೇಕು' ಎಂದು ಸೂಚಿಸಿದ್ದಾರೆ. ಈ ಘಟನೆ ಬಗ್ಗೆ ಪ್ರಾಧಿಕಾರಕ್ಕೆ ಇದೇ 18ರಂದು ದೂರು ನೀಡಿದ್ದ ಪ್ರಮೋದ್ ಎಂ.ವಿ ಎಂಬುವರು, ಗಳಲೆ ರೋಗದಿಂದ (ಇಂಡೀಡ್ ಹೆಮರೈಜಿಕ್ ಸೆಪ್ಟಿಸಿಮಿಯಾ) ಕೃಷ್ಣಮೃಗಗಳು ಸತ್ತಿವೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಅಧಿಕಾರಿಗಳ ನಿರ್ಲಕ್ಷ್ಯವೇ ಈ ಘಟನೆಗೆ ಕಾರಣ. ಈ ಬಗ್ಗೆ ಸಮಗ್ರ ತನಿಖೆ ಆಗಬೇಕು' ಎಂದು ಆಗ್ರಹಿಸಿದ್ದರು.

## ಸರ್ಕಾರಕ್ಕೆ ಅನ್ನದಾತನ ಬದುಕಿಗಿಂತ ಅಧಿಕಾರವೇ ಮುಖ್ಯವಾಯಿತೇ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಸಿಎಂ ಬದಲಾವಣೆ ಚರ್ಚೆ ಜೋರಾಗಿದೆ. ಈ ನಡುವೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಸರ್ಕಾರದ ವಿರುದ್ಧ ಕಿಡಿಕಾರಿದ್ದು, ಹೃದಯಹೀನ ಸರ್ಕಾರಕ್ಕೆ ಅನ್ನದಾತನ ಬದುಕಿಗಿಂತ ಅಧಿಕಾರವೇ ಮುಖ್ಯವಾಯಿತೇ ಎಂದು ಪ್ರಶ್ನಿಸಿದ್ದಾರೆ.

ಈ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಅವರೇ, ನಿಮ್ಮ ಹೃದಯಹೀನ ಸರ್ಕಾರಕ್ಕೆ ಅನ್ನದಾತನ ಬದುಕಿಗಿಂತ ಅಧಿಕಾರವೇ ಮುಖ್ಯವಾಯಿತೇ, ಕುರ್ಚಿ ಕಿತ್ತಾಟದಲ್ಲಿ ಅನ್ನದಾತರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದೇಕೆ. ಕರ್ನಾಟಕದ ಇತಿಹಾಸದಲ್ಲಿ ರೈತರ ನೋವಿಗೆ ಸ್ಪಂದಿಸದ ಈ ರೀತಿಯ ಸಂವೇದನಾರಹಿತ ಸರ್ಕಾರ ಕಂಡಿರಲಿಲ್ಲ ಎಂದು ವ್ಯಂಗ್ಯವಾಡಿದ್ದಾರೆ. ಕೊಟ್ಟ ಮಾತಿನಂತೆ ಅನ್ನದಾತರ ಸಂಕಷ್ಟಕ್ಕೆ ಸ್ಪಂದಿಸಿ, ಸೂಕ್ತ ಪರಿಹಾರ ನೀಡಬೇಕಿದ್ದ ಕಾಂಗ್ರೆಸ್ ಸರ್ಕಾರ ಇಂದು ರೈತರ ಸಮಸ್ಯೆಗಳನ್ನು ನಿರ್ಲಕ್ಷಿಸಿದೆ. ರೈತರ ಬದುಕು ನಾಶವಾದರೂ ಪರವಾಗಿಲ್ಲ, ನಮ್ಮ ಕುರ್ಚಿಯು ಭದ್ರವಾಗಿರಲಿ ಎನ್ನುವಂತಿದೆ. ಸಿದ್ದರಾಮಯ್ಯ ಸರ್ಕಾರದ ನಡೆ ಎಂದು ಟೀಕಿಸಿದ್ದಾರೆ.

# ಸಮಾನತೆ ನ್ಯಾಯದ ಸಂಗಮ ಸಂವಿಧಾನ ಸಂಭ್ರಮ






## ಸಂವಿಧಾನದ ನಿರ್ಮಾತೃಗಳನ್ನು ಗೌರವಿಸುವ ದಿನ ಸಂವಿಧಾನ ಬಲಪಡಿಸೋಣ

• ಉದಯವಾಹಿನಿ, ದೆಹಲಿ

ಬುಧವಾರ ನ.26, ಭಾರತೀಯ ಸಂವಿಧಾನದ ಅಂಗೀಕಾರದ 76ನೇ ವಾರ್ಷಿಕೋತ್ಸವವನ್ನು ಸಂವಿಧಾನ್ ದಿವಸ್ ಎಂದೂ ಕರೆಯುತ್ತಾರೆ. ಭಾರತವು ಸಂವಿಧಾನ ದಿನವನ್ನು ಆಚರಿಸಿದೆ.

1. ಪ್ರತಿ ವರ್ಷ ನ.26ರಂದು ಸಂವಿಧಾನ ದಿನ ಆಚರಣೆ. ಈ ದಿನಾಂಕವು 1949 ರಲ್ಲಿ ಭಾರತದ ಸಂವಿಧಾನವನ್ನು ಅಂಗೀಕರಿಸಿದ ದಿನವಾಗಿದೆ.
2. ಈ ವರ್ಷದ ಸಂವಿಧಾನ ದಿನಾಚರಣೆಯ ಥೀಮ್ "ನಮ್ಮ ಸಂವಿಧಾನ – ನಮ್ಮ ಸ್ವಾಭಿಮಾನ" ಎಂಬುದಾಗಿದ್ದು, ಹಲವು ಕಾರ್ಯಕ್ರಮಗಳು ಜರುಗಲಿವೆ
3. ದೇಶಾದ್ಯಂತ ಶಾಲೆಗಳು, ಸಂಸ್ಥೆಗಳು ಮತ್ತು ಪಂಚಾಯತ್‌ಗಳಲ್ಲಿ ಸಂವಿಧಾನದ ಪೀಠಿಕೆಯ ಸಾಮೂಹಿಕ ಓದುವಿಕೆಯನ್ನು ಹಮ್ಮಿಕೊಳ್ಳಲಾಗುತ್ತದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹಳೆಯ ಸಂಸತ್ತಿನ ಕಟ್ಟಡದ ಐತಿಹಾಸಿಕ ಸೆಂಟ್ರಲ್ ಹಾಲ್‌ನಲ್ಲಿ ಆಚರಣೆಗಳ ನೇತೃತ್ವ ವಹಿಸಿದ್ದರು. ಕಾರ್ಯಕ್ರಮದಲ್ಲಿ ನವೆಂಬರ್ 26, 1949ರಂದು ಸಂವಿಧಾನದ ಅಂಗೀಕಾರಕ್ಕೆ ಗೌರವ ಸಲ್ಲಿಸಲಾಯಿತು. ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಮೂಲ ಮೌಲ್ಯಗಳನ್ನು ಎತ್ತಿ ತೋರಿಸಿತು. ಈ ದಿನದ ಸ್ಮರಣಾರ್ಥ ಸಂವಿಧಾನ ದಾಖಲೆ ಮೊದಲ ಬಾರಿಗೆ ಬೋಡೋ ಮತ್ತು ಕಾಶ್ಮೀರಿ ಸೇರಿದಂತೆ ಒಂಬತ್ತು ಭಾಷೆಗಳಲ್ಲಿ ಬುಧವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಬಿಡುಗಡೆ ಮಾಡಿದರು. ಬುಧವಾರ ನಡೆದ ಕಾರ್ಯಕ್ರಮದಲ್ಲಿ ಕಲಾವಿದ ನಂದಿಲಾಲ್ ಬೋಸ್ ಮತ್ತು ಅವರ ತಂಡದಿಂದ 'ಭಾರತೀಯ ಸಂವಿಧಾನದಲ್ಲಿ ಕಲೆ ಮತ್ತು ಕ್ಯಾಲಿಗ್ರಫಿ' ಕುರಿತು ಪ್ರದರ್ಶನವನ್ನು ಅನಾವರಣಗೊಳಿಸಲಾಯಿತು. ಮೊದಲ ಬಾರಿಗೆ ಬೋಡೋ ಮತ್ತು ಕಾಶ್ಮೀರಿ ಭಾಷೆಗಳನ್ನು ಸಂವಿಧಾನದಲ್ಲಿ ಅಳವಡಿಸಲಾಗುತ್ತಿದೆ ಎಂದರು.

ಮಲಯಾಳಂ, ಮರಾಠಿ, ನೇಪಾಳಿ, ಪಂಜಾಬಿ, ತೆಲುಗು, ಒರಿಯಾ ಮತ್ತು ಅಸ್ಸಾಮಿ ಭಾಷೆಗಳಲ್ಲಿ ನವೀಕರಿಸಿದ ಅನುವಾದಗಳು ಸಹ ಬುಧವಾರ ಬಿಡುಗಡೆಗೊಂಡವು.

**ಜಗತ್ತಿನಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಭಾರತದ ಸಂವಿಧಾನ**

**ಮೋದಿ ಕರೆ:** ಸಂವಿಧಾನ ಪ್ರಜಾಪ್ರಭುತ್ವದ ಬಲವಾದ ಅಡಿಪಾಯ. ನಮ್ಮ ಕಾರ್ಯಗಳ ಮೂಲಕ ಮೌಲ್ಯಗಳನ್ನು ಬಲಪಡಿಸೋಣ ಎಂದು ಪ್ರಧಾನಿ ಮೋದಿ ಕರೆ ನೀಡಿದರು. ಸಂವಿಧಾನ ದಿನಾಚರಣೆ ಅಂಗವಾಗಿ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಬುಧವಾರ ಸಂವಿಧಾನ ನಿರ್ಮಾತೃಗಳನ್ನು ಗೌರವಿಸುವ ದಿನ. ಎಲ್ಲರಿಗೂ ಸಂವಿಧಾನ ದಿನಾಚರಣೆ ಶುಭಾಶಯಗಳು ಎಂದು ಹೇಳಿದ್ದಾರೆ. ಸಂವಿಧಾನವನ್ನು ರೂಪಿಸಿದ ಎಲ್ಲರಿಗೂ ನನ್ನ ನಮನಗಳು ಎಂದು ಹೇಳಿರುವ ಅವರು, ಸ್ವತಂತ್ರ ಭಾರತಕ್ಕೆ ಸಂವಿಧಾನ ರೂಪಿಸಲು ರಚನಾ ಸಭೆ ಸ್ಥಾಪನೆಯಾಗಿದ್ದು 1946ರಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ರವರ ನೇತೃತ್ವದಲ್ಲಿ ನೂರಾರು ಮಂದಿ ಸುಮಾರು 3 ವರ್ಷ ಶ್ರಮಿಸಿ ಸಂವಿಧಾನ ರಚಿಸಿದರು. ಸಂವಿಧಾನ ರಚನಾ ಸಭೆಯು 1949ರ ನವೆಂಬರ್ 26ರಂದು ಸಂವಿಧಾನವನ್ನು ಅಂಗೀಕರಿಸುತ ದೇಶದಲ್ಲಿ ಸಂವಿಧಾನವು 1950, ಜನವರಿ 26 ರಿಂದ ಜಾರಿಗೆ ಬಂತು ಎಂದು ಅವರು ಹೇಳಿ, ಸಂವಿಧಾನ ರಚನಾ ದಿನವಾದ ನವೆಂಬರ್ 26ನ್ನು ದೇಶದ ಎಲ್ಲೆಡೆ ಸಂವಿಧಾನ ದಿನಾಚರಣೆಯಾಗಿ ಆಚರಿಸಲಾಗುತ್ತಿದೆ ಎಂದಿದ್ದಾರೆ. ಭಾರತದ ನೂರಾರು ಜಾತಿ, ಹತ್ತಾರು ಧರ್ಮ, ವೈವಿಧ್ಯಮಯ ಸಂಸ್ಕೃತಿ, ಆಚರಣೆಗಳಿಂದ ಕಂಡಿರುವ ದೇಶಕ್ಕೆ ಸಂವಿಧಾನವನ್ನು ರೂಪಿಸುವುದು ಅತ್ಯಂತ ಸವಾಲಿನ ಕೆಲಸವಾಗಿತ್ತು. ಭಾರತವು ಇಂದು ಜಾಗತಿಕ ಮಟ್ಟದಲ್ಲಿ ಗಮನಾರ್ಹ ಸ್ಥಾನ ಪಡೆದಿದ್ದರೆ ಅದಕ್ಕೆ ಕಾರಣ ನಮ್ಮ ಸಶಕ್ತವಾದ ಸಂವಿಧಾನ. ಅದು ದೇಶದ ಆಡಳಿತ ಮತ್ತು ಜನರ ಚಿಂತನೆಯ ಚಾಲಕ ಶಕ್ತಿಯಾಗಿದೆ ಎಂದಿದ್ದಾರೆ.

### ಸಂವಿಧಾನ ದಿನದ ಐತಿಹಾಸಿಕ ಮಹತ್ವ

ಸಂವಿಧಾನವು ಜನವರಿ 26, 1950ರಂದು ಜಾರಿಗೆ ಬಂದು ಭಾರತವನ್ನು ಸಾರ್ವಭೌಮ ಗಣರಾಜ್ಯವೆಂದು ಘೋಷಿಸಿತು. ಈ ದಿನವನ್ನು ನಾವು ಗಣರಾಜ್ಯೋತ್ಸವ ಎಂದು ಆಚರಿಸುತ್ತೇವೆ. ಸಂವಿಧಾನದ ಮಹತ್ವ, ಅದರ ರಚನಾಕಾರರು ಮತ್ತು ಆಧುನಿಕ ಭಾರತಕ್ಕೆ ಅದರ ಪ್ರಸ್ತುತತೆಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಭಾರತ ಸರ್ಕಾರವು 2015ರಲ್ಲಿ ನವೆಂಬರ್ 26 ಅನ್ನು ಅಧಿಕೃತವಾಗಿ ಸಂವಿಧಾನ ದಿನ ಎಂದು ಘೋಷಿಸಿತು. ಬುಧವಾರ, ನವೆಂಬರ್ 26, 2025 ರಂದು ಈ ದಿನವನ್ನು ಆಚರಿಸಲಾಗುತ್ತಿದೆ.

### ಸಂವಿಧಾನದ ಮೌಲ್ಯಗಳ ಅರಿವು

ಭಾರತದ ಪ್ರಜೆಗಳಲ್ಲಿ ಸಂವಿಧಾನದಲ್ಲಿರುವ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದಂತಹ ಮೂಲಭೂತ ಮೌಲ್ಯಗಳ ಬಗ್ಗೆ ಜಾಗೃತಿ ಮೂಡಿಸುವುದು. ನಾಗರಿಕರಿಗೆ ಅವರ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ನೆನಪಿಸುವುದು. ಅಂಬೇಡ್ಕರ್‌ಗೆ ಗೌರವ ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಅಂಬೇಡ್ಕರ್ ಅವರ ಅಪ್ರತಿಮ ಕೊಡುಗೆಯನ್ನು ಸ್ಮರಿಸುವುದು ಮತ್ತು ಅವರಿಗೆ ಗೌರವ ಸಲ್ಲಿಸುವುದು. ದೇಶಾದ್ಯಂತ ಇರುವ ಎಲ್ಲಾ ಸಚಿವಾಲಯಗಳು, ಸರ್ಕಾರಿ ಕಛೇರಿಗಳು, ರಾಜ್ಯ ಸರ್ಕಾರಗಳು ಮತ್ತು ಸ್ಥಳೀಯ ಸಂಸ್ಥೆಗಳು ಈ ಸಂದರ್ಭವನ್ನು ಸ್ಮರಿಸುವ ಕಾರ್ಯಕ್ರಮಗಳನ್ನು ಆಯೋಜಿಸುತ್ತವೆ.

## ಭಾರತದ ಸಂವಿಧಾನ ಅಂಗೀಕಾರ ದಿನ 9 ಭಾಷೆಗಳಲ್ಲಿ ಬಿಡುಗಡೆ

### ರಾಜ್ಯದಲ್ಲೂ ಸಂವಿಧಾನ ದಿನಾಚರಣೆ

ರಾಜ್ಯದಲ್ಲೂ ಸಂವಿಧಾನ ದಿನಾಚರಣೆ ಕಾರ್ಯಕ್ರಮ ನಡೆದಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಸೇರಿದಂತೆ ಹಲವು ಸಚಿವರು, ಗಣ್ಯರು ಬೆಂಗಳೂರಿನ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಸಂವಿಧಾನ ರಕ್ಷಣೆಯ ಅಗತ್ಯತೆಯನ್ನು ಪ್ರತಿಪಾದಿಸಿದರು. ಈ ಕಾರ್ಯಕ್ರಮಕ್ಕೂ ಮೊದಲ ವಿಧಾನಸೌಧದ ಪೂರ್ವದ್ವಾರದಲ್ಲಿರುವ ಭವ್ಯ ಮೆಟ್ಟಿಲುಗಳ ಮುಂಭಾಗದಲ್ಲಿ ಆರಂಭಗೊಂಡ ಕಾಲ್ನಡಿಗೆ ಜಾತಾಕ್ಕೆ ಸಮಾಜ ಕಲ್ಯಾಣ ಸಚಿವ ಮಹದೇವಪ್ಪ ಚಾಲನೆ ನೀಡಿದರು. ನೂರಾರು ವಿದ್ಯಾರ್ಥಿಗಳು ಯುವಕ ಯುವತಿಯರು, ರಾಷ್ಟ್ರ ಧ್ವಜ ಹಿಡಿದು ಸಂವಿಧಾನ ಪ್ರತಿಗಳನ್ನು ಪ್ರದರ್ಶಿಸಿ ವಿಧಾನಸೌಧದಿಂದ ಅಂಬೇಡ್ಕರ್ ಭವನದವರೆಗೂ ಕಾಲ್ನಡಿಗೆ ಜಾಥ ಸಂವಿಧಾನದ ಆಶಯಗಳ ಭಿತ್ತಿಪತ್ರಗಳನ್ನು ಜಾಥಾದಲ್ಲಿ ಪ್ರದರ್ಶಿಸಲಾಯಿತು.

# ಸ್ಮಶಾನ ಹೊರತು ಪಡಿಸಿ ಇತರೆಡೆ ಅನುಮತಿ ಇಲ್ಲದೇ ಅಂತ್ಯಕ್ರಿಯೆ ಮಾಡುವಂತಿಲ್ಲ

• ಉದಯವಾಹಿನಿ, ಬೆಂಗಳೂರು

ಗೊತ್ತುಪಡಿಸಿದ (ಸ್ಮಶಾನ) ಸ್ಥಳ ಹೊರತುಪಡಿಸಿ ಇತರೆ ಜಾಗದಲ್ಲಿ ಅನುಮತಿ ಇಲ್ಲದೆ ಮೃತದೇಹಗಳನ್ನು ಸಮಾಧಿ ಮಾಡುವುದಕ್ಕೆ ಅವಕಾಶವಿಲ್ಲ' ಎಂದು ಹೈಕೋರ್ಟ್ ಮೌಖಿಕವಾಗಿ ಹೇಳಿದೆ.

ತಮ್ಮ ಒಪ್ಪಿಗೆಯಿಲ್ಲದೆ ಸೊಸೆ ಶವವನ್ನು ಮನೆ ಬಳಿ ಹೂಳಲಾಗಿದ್ದು, ಸಮಾಧಿ ಬೇರೆಡೆಗೆ ಸ್ಥಳಾಂತರಿಸುವಂತೆ ನಿರ್ದೇಶನ ನೀಡಲು ಕೋರಿ ಬಂಗಾರಪೇಟೆಯ ತುರಾಂಡಹಳ್ಳಿಯ ಎಚ್.ಗೋಪಾಲಗೌಡ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ಪೀಠ, ಈ ಸೂಚನೆ ನೀಡಿ ವಿಚಾರಣೆ ಮುಂದೂಡಿದೆ.




**ಅಂತ್ಯಕ್ರಿಯೆ ಮಾಡುವುದಕ್ಕೆ ಅವಕಾಶವಿಲ್ಲ**

''ಮೃತದೇಹಗಳನ್ನು ಎಲ್ಲೆಂದರಲ್ಲಿ ಸಮಾಧಿ ಮಾಡುವುದು ಅತ್ಯಂತ ಸೂಕ್ಷ್ಮ ವಿಷಯವಾಗಿದೆ. ಅಲ್ಲದೆ, ಈ ಪ್ರಕರಣ ಒಂದು ಶವ ಸಮಾಧಿ ಮಾಡುವುದು ಮಾತ್ರವಲ್ಲ. ಅಂತಹ ಚಟುವಟಿಕೆಗಳಿಗೆ ಅವಕಾಶ ನೀಡಿದಲ್ಲಿ ಗಂಭೀರ ಪರಿಣಾಮ ಬೀರಲಿದೆ. ಅಲ್ಲದೆ, ಎಲ್ಲೆಂದರಲ್ಲಿ ಸಮಾಧಿ ಮಾಡುವುದಕ್ಕೆ ಅವಕಾಶ ಸಿಕ್ಕಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಗೆ ಕಾರಣವಾಗಲಿದೆ,'' ಎಂದು ನ್ಯಾಯಾಲಯ ತಿಳಿಸಿದೆ.


**ಯಾರನ್ನೂ ಅಂತ್ಯಕ್ರಿಯೆ ಮಾಡುವುದಕ್ಕೆ ಅವಕಾಶವಿಲ್ಲ:** ''ಸಮಾಧಿ ಸ್ಥಳ ಹೊರತುಪಡಿಸಿ ಬೇರೆ ಸ್ಥಳದಲ್ಲಿ ಶವ ಹೂಳಲು ಅವಕಾಶವಿಲ್ಲ. ಅದಕ್ಕೆ ಅವಕಾಶ ನೀಡಿದಲ್ಲಿ ಮುಂದೊಂದು ದಿನ ಕೊಲೆ ಪ್ರಕರಣಗಳಲ್ಲಿಯೂ ಮುಂದುವರೆಯುವ ಸಾಧ್ಯತೆಯಿರಲಿದೆ. ಜತೆಗೆ, ಇದರಿಂದ ಎದುರಾಗುವ ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳಬೇಕು. ಇಂತಹ ಕೃತ್ಯಗಳಿಗೆ ಅನುಮತಿ ನೀಡಿದಲ್ಲಿ ಬೇರೊಬ್ಬ ವ್ಯಕ್ತಿ ಮತ್ತೊಬ್ಬರ ಆಸ್ತಿಯಲ್ಲಿ ಶವ ಹೂಳುವುದಕ್ಕೆ ಕಾರಣವಾಗಲಿದೆ. ಆದ್ದರಿಂದ ಗೊತ್ತುಪಡಿಸಿದ ಸ್ಮಶಾನದಲ್ಲಿ ಮಾತ್ರ ದಹನ ಮಾಡಬೇಕು. ಅದನ್ನು ಹೊರತುಪಡಿಸಿ ಇತರೆಡೆಗಳಲ್ಲಿ ಯಾರನ್ನೂ ಅಂತ್ಯಕ್ರಿಯೆ ಮಾಡುವುದಕ್ಕೆ ಅವಕಾಶವಿಲ್ಲ,'' ಎಂದು ನ್ಯಾಯಪೀಠ ಹೇಳಿದೆ.

ಇದಕ್ಕೂ ಮುನ್ನ ವಿಚಾರಣೆ ವೇಳೆ ಸರಕಾರಿ ವಕೀಲರು, ''ಇದೊಂದು ವರದಕ್ಷಿಣೆ ಕಿರುಕುಳ ಆರೋಪದ ವಿಶೇಷ ಪ್ರಕರಣವಾಗಿದೆ. ಮೃತರು ಅರ್ಜಿದಾರರ ಸೊಸೆಯಾಗಿದ್ದಾರೆ. ಪ್ರಕರಣ ಸಂಬಂಧ ಆಕ್ಷೇಪಣೆ ಸಲ್ಲಿಸಬೇಕಾಗಿದ್ದು, ಕಾಲಾವಕಾಶ ನೀಡಬೇಕು,'' ಎಂದು ಕೋರಿದರು.

# ಸಮಯ ಕೇಳಿದ ಡಿಕೆಶಿಗೆ ರಾಹುಲ್ ಗಾಂಧಿಯಿಂದ ಬಂದ ವಾಟ್ಸಪ್ ಮೆಸೇಜ್

## ■ ರಾಜ್ಯದಲ್ಲಿ ನಾಯಕತ್ವ ಜಟಾಪಟಿ ತೀವ್ರ ■ ಸ್ವಲ್ಪ ಕಾಯಿರಿ ನಾನು ನಿಮಗೆ ಫೋನ್ ಕರೆ ಮಾಡುತ್ತೇನೆ

• ಉದಯವಾಹಿನಿ, ಬೆಂಗಳೂರು



ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಜಟಾಪಟಿ ತೀವ್ರಗೊಂಡಿದೆ. ಸಿಎಂ ಸ್ಥಾನದ ಮೇಲೆ ಕಣ್ಣಿಟ್ಟಿರುವ ಡಿಕೆ ಶಿವಕುಮಾರ್ ಹೈಕಮಾಂಡ್ ನಾಯಕರನ್ನು ಒಲಿಸುವ ಪ್ರಯತ್ನ ನಡೆಸುತ್ತಿದ್ದಾರೆ. ದೆಹಲಿಗೆ ಸರಣಿ ಭೇಟಿಗಳನ್ನು ಕೊಟ್ಟಿದ್ದ ಡಿಕೆಶಿಗೆ ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ಭೇಟಿಗೆ ಅವಕಾಶ ಸಿಕ್ಕಿರಲಿಲ್ಲ.

ಆದರೆ ಸಿಎಂ ಸಿದ್ದರಾಮಯ್ಯ ಅವರಿಗೆ ಈ ಅವಕಾಶ ಸಿಕ್ಕಿತ್ತು. ರಾಹುಲ್ ಗಾಂಧಿ ಜೊತೆಗೆ ಅವರು ಚರ್ಚೆಯನ್ನು ನಡೆಸಿದ್ದರು. ಆದರೆ ಇದೀಗ ಡಿಕೆ ಶಿವಕುಮಾರ್ ಅವರು ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಲು ಸಮಯಾವಕಾಶ ಕೋರಿದ್ದಾರೆ. ಆದರೆ ರಾಹುಲ್ ಗಾಂಧಿಯಿಂದ ಇನ್ನೂ ಸಮಯ ನಿಗದಿಯಾಗಿಲ್ಲ. ಮೂಲಗಳ ಪ್ರಕಾರ ರಾಜ್ಯದ ರಾಜಕೀಯ ಬೆಳವಣಿಗೆ ಹಾಗೂ ಸ್ಥಿತಿಗತಿಯ ಬಗ್ಗೆ ಚರ್ಚೆ ಮಾಡುವ ಉದ್ದೇಶದಿಂದ ರಾಹುಲ್ ಗಾಂಧಿ ಅವರ ಬಳಿ ಭೇಟಿಗೆ ಸಮಯಾವಕಾಶ ಕೋರಿದ್ದರು. ಆದರೆ ಈವರೆಗೆ ಸಿಕ್ಕಿರಲಿಲ್ಲ. ಇದೀಗ ರಾಹುಲ್ ಗಾಂಧಿ ಅವರು ಡಿಕೆ ಶಿವಕುಮಾರ್ ಗೆ ವಾಟ್ಸಪ್ ಮೂಲಕ ಪ್ರತಿಕ್ರಿಯೆ ನೀಡಿ ''ಕಾಯಿರಿ, ನಾನು ನಿಮಗೆ ಕರೆ ಮಾಡುತ್ತೇನೆ'' ಎಂದು ಪ್ರತಿಕ್ರಿಯೆ ನೀಡಿದ್ದಾರೆಂದು ಉಲ್ಲೇಖಿಸಲಾಗಿದೆ. ಡಿಸೆಂಬರ್ 1 ರಿಂದ ಸಂಸತ್ ಅಧಿವೇಶನ ಆರಂಭಗೊಳ್ಳಲಿದೆ. ಅದಕ್ಕೂ ಮೊದಲೇ ರಾಜ್ಯದ ನಾಯಕತ್ವ ಗೊಂದಲಕ್ಕೆ ಬ್ರೇಕ್ ಹಾಕುವುದು ಹೈಕಮಾಂಡ್ ಮುಂದೆ ಇರುವ ಸವಾಲಾಗಿದೆ. ಈ ನಿಟ್ಟಿನಲ್ಲಿ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರು ಸಕ್ರಿಯವಾಗಿದ್ದಾರೆ. ರಾಜ್ಯದ ಕಾಂಗ್ರೆಸ್ ನಾಯಕರ ಜತೆಗೆ ಚರ್ಚೆಯನ್ನು ನಡೆಸಿದ್ದಾರೆ.



ಹಿರಿಯ ಕಾಂಗ್ರೆಸ್ ನಾಯಕ ಬಿಕೆ ಹರಿಪ್ರಸಾದ್ ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ಅವರು ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ. ಪ್ರಿಯಾಂಕ್ ಖರ್ಗೆ ಅವರು ವೋಟ್ ಚೋರಿ ಕುರಿತಾಗಿ ಕೆಲವೊಂದು ವಿಚಾರಗಳ ಬಗ್ಗೆ ರಾಹುಲ್ ಗಾಂಧಿ ಜೊತೆಗೆ ಚರ್ಚೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಶರತ್ ಬಚ್ಚೇಗೌಡ ಕೂಡಾ ಇದ್ದರು. ಇದಾದ ಬಳಿಕ ಸುಮಾರು 20 ನಿಮಿಷಗಳ ಕಾಲ ಒನ್ ಟು ಒನ್ ಮಾತುಕತೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯದ ರಾಜಕೀಯ ಬೆಳವಣಿಗೆಗಳ ಬಗ್ಗೆಯೂ ಚರ್ಚೆ ಆಗಿದೆ ಎಂಬ ಮಾಹಿತಿ ಇದೆ. ಇನ್ನು ಪ್ರಿಯಾಂಕ್ ಖರ್ಗೆ ಅವರು ರಾಜ್ಯಕ್ಕೆ ಆಗಮಿಸುತ್ತಿದ್ದಂತೆ ಸಿಎಂ ಸಿದ್ದರಾಮಯ್ಯ ಅವರ ಕಚೇರಿಯಿಂದಲೂ ಫೋನ್ ಕರೆ ಮಾಡಿ ಕರೆಸಿಕೊಳ್ಳಲಾಗಿದೆ. ಬಳಿಕ ಸಿದ್ದರಾಮಯ್ಯ ಅವರ ಜೊತೆಗೆ ಪ್ರಿಯಾಂಕ್ ಮಾತನಾಡಿದ್ದಾರೆ. ಇದಾದ ಬಳಿಕ ಡಿಕೆ ಶಿವಕುಮಾರ್ ಅವರನ್ನು ಪ್ರಿಯಾಂಕ್ ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ ಎಂಬ ಮಾಹಿತಿ ಇದೆ.

### ಬಹಿರಂಗ ಹೇಳಿಕೆಯಿಂದ ಹೈಕಮಾಂಡ್ ಬೇಸರ

ಸಿಎಂ ಸಿದ್ದರಾಮಯ್ಯ ಅವರು ನಾನೇ 5 ವರ್ಷ ಸಿಎಂ ಹಾಗೂ ಎರಡು ಬಜೆಟ್ ನಾನೇ ಮಂಡಿಸುತ್ತೇನೆ ಎಂದು ಹೇಳಿಕೆ ನೀಡಿದ್ದರು. ಸಿದ್ದರಾಮಯ್ಯ ಅವರ ಈ ಹೇಳಿಕೆಯಿಂದ ಹೈಕಮಾಂಡ್ ನಾಯಕರು ಬೇಸರಗೊಂಡಿದ್ದಾರೆ ಎಂಬ ಮಾಹಿತಿಯೂ ಇದೆ. ಸಿದ್ದರಾಮಯ್ಯ ಹೇಳಿಕೆ ಹೈಕಮಾಂಡ್ ಗಮನಕ್ಕೆ ಬಂದಿದ್ದು, ಇಂತಹ ಹೇಳಿಕೆಯಿಂದ ಮತ್ತಷ್ಟು ಗೊಂದಲ ಸೃಷ್ಟಿಯಾಲಿದೆ ಎಂಬ ಆತಂಕವನ್ನು ಹೈಕಮಾಂಡ್ ನಾಯಕರು ವ್ಯಕ್ತಪಡಿಸಿದ್ದಾರೆ ಎಂಬ ಮಾಹಿತಿಯೂ ಇದೆ.



**29 ಕ್ಕೆ ಡಿಕೆಶಿ ದೆಹಲಿಗೆ:** ನವೆಂಬರ್ 29 ರಂದು ಡಿಕೆ ಶಿವಕುಮಾರ್ ಅವರು ದೆಹಲಿಗೆ ತೆರಳಿದ್ದಾರೆ ಎಂಬ ಮಾಹಿತಿ ಇದೆ. ಆದರೆ ಈ ಬಗ್ಗೆ ಅಧಿಕೃತ ನಿರ್ಧಾರ ಇನ್ನೂ ಆಗಿಲ್ಲ. ರಾಹುಲ್ ಗಾಂಧಿ ಹಾಗೂ ಸೋನಿಯಾ ಗಾಂಧಿ ಅವರ ಭೇಟಿಗೆ ಸಮಯ ನಿಗದಿಯಾದರೆ ಡಿಕೆಶಿ 29 ರಂದು ದೆಹಲಿಗೆ ತೆರಳುವ ಸಾಧ್ಯತೆ ದಟ್ಟವಾಗಿದೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹12,791/Gram24ct ₹11,725/Gram22ct | ಬೆಳ್ಳಿ: ₹169.00/Gram

## ಸಂವಿಧಾನ, ಪ್ರಜಾಪ್ರಭುತ್ವ ವಿರೋಧಿ ವರ್ತನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಾಮರಾಜನಗರ

ರಾಜ್ಯ ದಲಿತ ಸಂಘರ್ಷ ಸಮಿತಿ ವತಿಯಿಂದ ಜಿಲ್ಲಾಡಳಿತ ಭವನದ ಮುಂಭಾಗ ಆರ್‌ಎಸ್‌ಎಸ್ ಸಂಘಟನೆಯ ವಿರುದ್ಧ ಪ್ರತಿಭಟನೆ ನಡೆಸಲಾಯಿತು. ಸಂವಿಧಾನ, ಪ್ರಜಾಪ್ರಭುತ್ವ, ಒಕ್ಕೂಟ ವ್ಯವಸ್ಥೆ ಗಂಡಾಂತರದಲ್ಲಿದ್ದು, ಸರ್ವಾಧಿಕಾರ ಪ್ರಜಾಪ್ರಭುತ್ವದ ಮುಖವಾಡ ಧರಿಸಿದೆ ಎಂದು ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ ಅಭಿಪ್ರಾಯಪಟ್ಟರು. ದೇಶದಲ್ಲಿ ಕೋಮುವಾದ, ಮನುವಾದ, ಜಾತಿವಾದ ಹೆಚ್ಚಾಗಿದ್ದು ದ್ವೇಷ, ಪ್ರತೀಕಾರ, ಮತ್ಸರ, ಹಿಂಸೆಯ ವಿಷವನ್ನು ಬಿತ್ತಿ ಸಾಮಾಜಿಕ ಸ್ವಾಸ್ಥ್ಯವನ್ನು ಹಾಳುಮಾಡಲಾಗುತ್ತಿದೆ ಎಂದರು. ಆರ್‌ಎಸ್‌ಎಸ್ ಸಂಘಟನೆಯು ಮತೀಯವಾದಿ, ರಾಷ್ಟ್ರವಿರೋಧಿ, ಸಂವಿಧಾನ-ಪ್ರಜಾಪ್ರಭುತ್ವ ವಿರೋಧಿಯಾಗಿ ವರ್ತಿಸುತ್ತದೆ. ಶತಮಾನೋತ್ಸವ ಸಂದರ್ಭದಲ್ಲಿ ಮನುಧರ್ಮಶಾಸ್ತ್ರವನ್ನು ಭಾರತದ ಕಾನೂನಾಗಿಸಲು ಸಂಚು ರೂಪಿಸುತ್ತಿದೆ ಎಂದು ಆರೋಪಿಸಿದರು. ಆರ್‌ಎಸ್‌ಎಸ್ ಸಂಘಟನೆಯನ್ನು ವಿರೋಧಿಸಿದ್ದಕ್ಕೆ ಪ್ರತಿಯಾಗಿ ಸಚಿವ ಪ್ರಿಯಾಂಕ್ ಖರ್ಗೆ, ಅವರ ಕುಟುಂಬ ಸದಸ್ಯರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ನಿಂದನಾ ಬರಹ ಹಾಕಲಾಗುತ್ತಿದ್ದು ಜೀವ ಬೆದರಿಕೆಯೊಡ್ಡಲಾಗುತ್ತಿದೆ. ದಲಿತ ಸಮುದಾಯಕ್ಕೆ ಸೇರಿರುವ ಪ್ರಿಯಾಂಕ್ ಖರ್ಗೆಯ ರಾಜಕೀಯ ಏಳಿಗೆ ಸಹಿಸದ ಮನುವಾದಿಗಳು ಅವಮಾನಿಸುತ್ತಿದ್ದಾರೆ ಎಂದು ಟೀಕಿಸಿದರು. ಮನುವಾದಿಗಳ ಧೋರಣೆ ದಲಿತ ಸಮುದಾಯಗಳ ವಿರೋಧಿಯಾಗಿದ್ದು ಆರ್.ಎಸ್.ಎಸ್ ಸಂಘಟನೆ ಪ್ರಿಯಾಂಕ್ ಖರ್ಗೆ ವಿರುದ್ಧ ಹೇಳಿಕೆ ಹಿಂಪಡೆಯದಿದ್ದರೆ ರಾಜ್ಯದಾದ್ಯಂತ ಹೋರಾಟ ಮಾಡುವುದಾಗಿ ಶಿವಣ್ಣ ಎಚ್ಚರಿಸಿದರು. ಬಳಿಕ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರಿಗೆ ಮನವಿ ಸಲ್ಲಿಸಲಾಯಿತು.

## ಕಡಿವಾಣ ಹಾಕುವ ಶಕ್ತಿಯಿದ್ದರೆ ಅದು ಸಂವಿಧಾನಕ್ಕೆ ಮಾತ್ರ

■ ಬಾಬಾ ಸಾಹೇಬರು ನೀಡಿದ ಶ್ರೇಷ್ಠ ಸಂವಿಧಾನ ಸರ್ವರಿಗೂ ಸಮಬಾಳು; ಸಮಪಾಲು ನೀಡಿದೆ

• ಉದಯವಾಹಿನಿ, ಗುಂಡ್ಲುಪೇಟೆ

ಜಗತ್ತಿನಲ್ಲೇ ಅತ್ಯಂತ ಶ್ರೇಷ್ಠವಾದ ಸಂವಿಧಾನವು ಸರ್ವರಿಗೂ ಸಮಬಾಳು ಸಮಪಾಲು ನೀಡಿದೆ ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಹೇಳಿದರು. ಪಟ್ಟಣದ ಶಿಕ್ಷಕರ ಭವನದಲ್ಲಿ ತಾಲ್ಲೂಕು ಆಡಳಿತ, ಸಮಾಜ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಬಾಬಾ ಸಾಹೇಬರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಅವರು ದೇಶದ ಏಕತೆ, ಸಮಗ್ರತೆಗಾಗಿ ಎಲ್ಲರನ್ನು ಒಟ್ಟುಗೂಡಿಸುವುದಕ್ಕೆ ಭಾರತಕ್ಕೆ ಸಂವಿಧಾನವು ಅರ್ಪಣೆಗೊಂಡಿದೆ.

**ಪ್ರಪಂಚ ದಾದ್ಯಂತ ಮಹತ್ವ**

ದೇಶದ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ನ್ಯಾಯ, ಅಭಿವ್ಯಕ್ತಿ ಸ್ವಾತಂತ್ರ್ಯದ ಸ್ಥಾನಮಾನಗಳನ್ನ ಕಲ್ಪಿಸಿದ್ದು ಬಾಬಾ ಸಾಹೇಬರು ಅರ್ಪಿಸಿದ ಸಂವಿಧಾನ ಎಂದು ಶ್ಲಾಘಿಸಿದರು. ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಮುಖ್ಯ ಭಾಷಣಕಾರರಾದ ಪ್ರೊಫೆಸರ್ ಶ್ರೀನಿವಾಸ್ ಬಾಬಾ ಸಾಹೇಬರ ಚಿಂತನೆಗಳು, ನಡೆದುಬಂದ ಹಾದಿಯ ಕುರಿತು ಮಾಹಿತಿ ನೀಡುವ ಜೊತೆಗೆ ಬಾಬಾ ಸಾಹೇಬರು ನೀಡಿದ ಕೊಡುಗೆಗಳನ್ನ ಸ್ಮರಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು. ಈ ವೇಳೆ ಸಮಾಜ ಕಲ್ಯಾಣ ಇಲಾಖೆ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ತಹಶೀಲ್ದಾರ್ ತನ್ಮಯ್, ಸಿಓ ಸರವಣ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಕುಮಾರ್, ಬಿಇಓ ಸ್ವಾಮಿ ಟಿ.ಆರ್. ಟಿ ಎಚ್ ಓ ಅಲೀಂ ಪಾಷಾ, ಎಇಇ ಸಿದ್ದಲಿಂಗಪ್ಪ, ಪುರಸಭಾ ಮಾಜಿ ಅಧ್ಯಕ್ಷ ಶಶಿಧರ್ ದೀಪು, ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಮಾಜಿ ಸದಸ್ಯ ಎನ್ .ಕುಮಾರ್, ಛಲವಾದಿ ತಾಲ್ಲೂಕು ಅಧ್ಯಕ್ಷ ಆರ್.ಸೋಮಣ್ಣ, ಮಾನವ ಬಂದುತ್ವ ವೇದಿಕೆ ಜಿ.ಸಂಚಾಲಕ ಸುಭಾಷ್ ಮಾಡ್ರಹಳ್ಳಿ, ನಮ್ಮ ಕರ್ನಾಟಕ ಸೇನೆ ಜಿಲ್ಲಾಧ್ಯಕ್ಷ ಸುರೇಶ್ ನಾಯ್ಕ, ತಾ.ಅದ್ಯಕ್ಷ ಶ್ರೀನಿವಾಸ್, ಮುಖಂಡರಾದ ಸೋಮಹಳ್ಳಿ ರವಿ, ಶಿವರಾಮು ಪುತ್ತನಪುರ, ಬಸವಣ್ಣ ಕಿಲಗೆರೆ, ಶಂಕರ್, ನಾಗಯ್ಯ ಹೊನ್ನೇಗೌಡನಹಳ್ಳಿ, ವಿದ್ಯಾರ್ಥಿಗಳು ಹಾಜರಿದ್ದರು.


ಉದಯವಾಹಿನಿ ಚಿತ್ರ

ಕಾಲಘಟ್ಟದಲ್ಲಿ ಜೀವನಶೈಲಿಯಲ್ಲಿ ಬದಲಾವಣೆಗಳಾಗಿರಬಹುದು ಆದರೆ ಸಂವಿಧಾನ ಮಾತ್ರ ಸುಭದ್ರವಾಗಿದೆ ಆದುದರಿಂದಲೇ ದೇಶದಲ್ಲಿ ಚರ್ಚೆಯಾಗುತ್ತಿರುವ ಸಲ್ಲದ ವಿಚಾರಗಳು, ದ್ವೇಷ, ಪ್ರಚೋದನಕಾರಿ ನಡೆ ಇನ್ನಿತರ ಕೃತ್ಯಗಳಿಗೆ ಕಡಿವಾಣ ಹಾಕುವ ಶಕ್ತಿಯಿದ್ದರೆ ಅದು ಸಂವಿಧಾನಕ್ಕೆ ಮಾತ್ರ.
–ಎಚ್.ಎಂ.ಗಣೇಶ್ ಪ್ರಸಾದ್, ಶಾಸಕ

**ಪೀಠಿಕೆಯನ್ನ ಓದಿ ಅರ್ಥ ಮಾಡಿಕೊಳ್ಳಿ**

ದೇಶವು ಸುಭಿಕ್ಷವಾಗಿ ಸುರಕ್ಷಿತವಾಗಿರಲು ಸಂವಿಧಾನವೇ ಕಾರಣ ಅಂಬೇಡ್ಕರ್ ಮುಖಾಂತರ ರಚನೆಯಾದ ಸಂವಿಧಾನವು ಭಾರತವಲ್ಲದೆ ಪ್ರಪಂಚದಾದ್ಯಂತ ಮಹತ್ವವನ್ನ ಪಡೆದಿದೆ, ಯುವ ಸಮುದಾಯ ಬಾಬಾ ಸಾಹೇಬರ ಆದರ್ಶಗಳನ್ನ ಮೈಗೂಡಿಸಿಕೊಂಡು ಮುನ್ನಡೆಯಬೇಕು, ವಿದ್ಯಾರ್ಥಿಗಳು ಭಾರತದ ಮೂಲ ಪೀಠಿಕೆಯನ್ನ ಓದಿ ಅರ್ಥ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

## ಮಿನಿ ನ್ಯೂಸ್

### ಕ್ಷೇತ್ರದ ಜನರ ನಿರೀಕ್ಷೆ ಹುಸಿಯಾಗುವುದಿಲ್ಲ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ಕ್ಷೇತ್ರದ ಮತದಾರರ ನಿರೀಕ್ಷೆಯನ್ನ ಎಂದಿಗೂ ಹುಸಿಯಾಗಿಸುವುದಿಲ್ಲ, ತಾಲ್ಲೂಕಿನ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಹೇಳಿದರು. ತಾಲ್ಲೂಕಿನ ರಾಘವಪುರ ಸೇರಿದಂತೆ ವಿವಿಧೆಡೆ ಸಿಸಿರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು ಮುಖ್ಯಮಂತ್ರಿಗಳ ವಿಶೇಷ ಅನುದಾನ, ಸಂಸದರ ಅನುದಾನದಲ್ಲಿ ಗ್ರಾಮಾಂತರ ಪ್ರದೇಶದಾ ಜನರಿಗೆ ಮೂಲಸೌಕರ್ಯಗಳನ್ನ ಒದಗಿಸಲಾಗುತ್ತಿದೆ.

ಅದರಂತೆ ರಾಘವಪುರ, ಸಿದ್ದಯ್ಯನಪುರ, ತೆರಕಣಾಂಬಿ ಹುಂಡಿಯಲ್ಲಿ ತಲಾ 25 ಲಕ್ಷ ವೆಚ್ಚದ ರಸ್ತೆ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಗಿದೆ ಎಂದು ತಿಳಿಸಿದರು. ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದ್ದು ಕೆಲಸಗಳು ಆರಂಭವಾಗಿವೆ, ಮುಂಬರುವ ದಿನಗಳಲ್ಲಿ ಹೆಚ್ಚಿನ ಅನುದಾನ ತರುವ ಮೂಲಕ ಪ್ರಗತಿಯತ್ತ ಕೊಂಡೊಯ್ಯಲಾಗುವುದು ಎಂದು ಭರವಸೆ ನೀಡಿದರು. ಈ ಸಂಧರ್ಭದಲ್ಲಿ ಗ್ರಾಮಪಂಚಾಯತಿ ಅಧ್ಯಕ್ಷ ಗೋವಿಂದರಾಜು, ಉಪಾಧ್ಯಕ್ಷೆ ಸುಧಾರಾಣಿ, ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಪಿಡಿಓ ನಾಗಲಾಂಭಿಕ, ಮಾಜಿ ಅಧ್ಯಕ್ಷ ಆರ್.ಡಿ.ಉಲ್ಲಾಸ್, ಮುಖಂಡರಾದ ಮಹೇಶ್, ಪ್ರದೀಪ್ ಕುಮಾರ್, ಮೋಹನ್ ದಾಸ್ ಸೇರಿದಂತೆ ಇತರರು ಹಾಜರಿದ್ದರು.

### ಎರಡೂರು ದಿನದಲ್ಲಿ ಒಳ್ಳೆಯ ಸುದ್ದಿ ಬರಲಿದೆ: ಡಿಕೆಶಿ ಆಪ್ತ ಶಾಸಕ ಹುಸೇನ್


• ಉದಯವಾಹಿನಿ, ರಾಮನಗರ

ಕೂಲಿ ಮಾಡಿರುವವರಿಗೆ ಕೂಲಿ ಕೊಡುವಂತೆ, ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತಂದಿರುವ ನಮ್ಮ ನಾಯಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೂ ಕೂಲಿ ಕೊಡಬೇಕು. ಆ ನಿಟ್ಟಿನಲ್ಲಿ ಎರಡೂರು ದಿನಗಳಲ್ಲಿ ಒಳ್ಳೆಯ ಸುದ್ದಿ ಬರಲಿದೆ ಎಂಬ ವಿಶ್ವಾಸವಿದೆ. ನಮ್ಮ ನಾಯಕರು ಸಹ ಒಳ್ಳೆಯ ಸುದ್ದಿ ಸಿಗಲಿದೆ ಎಂದಿದ್ದಾರೆ. ಹಾಗಾಗಿ, ನಾವು ಬಹಳ ಖುಷಿಯಾಗಿದ್ದೇವೆ ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಹೇಳಿದರು. ಸಿಎಂ ಬದಲಾವಣೆ ಕುರಿತು ನಡೆಯುತ್ತಿರುವ ಬೆಳವಣಿಗೆಗಳಕ ಬೆನ್ನಲ್ಲೇ ಬುಧವಾರ ನಗರದಲ್ಲಿ ಭಾಗವಹಿಸಿದ್ದ ಕಾರ್ಯಕ್ರಮವೊಂದರ ನಡುವೆಯೇ ಬೆಂಗಳೂರಿಗೆ ತುರ್ತಾಗಿ ಹೊರಟ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿ, ಬೆಂಗಳೂರಿಗೆ ತುರ್ತಾಗಿ ಬರುವಂತೆ ಡಿಸಿಎಂ ಸಾಹೇಬ್ರು ಕರೆದಿದ್ದಾರೆ.

ಅಲ್ಲಿ ಶಾಸಕರ ಸಭೆ ಮಾಡುತ್ತಾರೋ, ಮಾತುಕತೆ ನಡೆಸುತ್ತಾರೊ ಗೊತ್ತಿಲ್ಲ ಎಂದರು. ಸುಮ್ಮನೆ ಓಡಾಡಿರುವವರಿಗೆ ಕೂಲಿ ಕೊಡಲು ಆಗುತ್ತಾ? ಶಿವಕುಮಾರ್ ಅವರು ಪಕ್ಷಕ್ಕಾಗಿ ಬೆವರು ಹರಿಸಿದ್ದಾರೆ. ಹಾಗಾಗಿ, ಅವರಿಗೆ ಕೂಲಿ ಕೊಡಲೇಬೇಕು. ಅವರು ಮತ್ತು ನಾನು ಈ ಜಿಲ್ಲೆಯವರು. ಇಂತಹ ಸಂದರ್ಭದಲ್ಲಿ ನಾನು ಅವರ ಜೊತೆಗಿದ್ದು, ಎಲ್ಲಾ ರೀತಿಯ ಸಹಕಾರ ಕೊಡುವುದು ನನ್ನ ಧರ್ಮ ಎಂದು ತಿಳಿಸಿದರು. ನಿನ್ನೆ ದೆಹಲಿಗೆ ಹೋಗಿದ್ದಾಗ ಪಕ್ಷದ ಯಾವ ನಾಯಕರನ್ನೂ ನಾನು ಭೇಟಿ ಮಾಡಿಲ್ಲ. ಕೆಲ ಶಾಸಕರು ಸೇರಿಕೊಂಡು, ಮುಂದೇನು ಮಾಡಬೇಕೆಂಬುದರ ಕುರಿತು ಚರ್ಚಿಸಿ ವಾಪಸ್ ಬಂದಿದ್ದೇವೆ ಎಂದು ದೆಹಲಿ ಭೇಟಿ ಕುರಿತ ಪ್ರಶ್ನೆಗೆ ಪ್ರತಿಕ್ರಿಯಸಿದರು.

## ಬಾಲ್ಯ ವಿವಾಹ ಕಡಿವಾಣಕ್ಕೆ ಸೂಚನೆ

• ಉದಯವಾಹಿನಿ, ಕೋಲಾರ


ಉದಯವಾಹಿನಿ ಚಿತ್ರ

ಬಾಲ್ಯ ವಿವಾಹ ಪ್ರಕರಣಗಳ ಕಡಿವಾಣಕ್ಕೆ ಎಲ್ಲಾ ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಜಿಲ್ಲಾಧಿಕಾರಿ ಎಂ.ಆರ್.ರವಿ ಸೂಚಿಸಿದರು. ಜಿಲ್ಲಾಡಳಿತ ಭವನದಲ್ಲಿ ನಡೆದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಸಮಿತಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು

ಮಹಿಳೆಯರ ಮೇಲಾಗುತ್ತಿರುವ ಕೌಟುಂಬಿಕ ಹಿಂಸೆಯ ಪ್ರಕರಣಗಳನ್ನು ಇತ್ಯರ್ಥಗೊಳಿಸುವಲ್ಲಿ ತಳಮಟ್ಟದಲ್ಲಿ ಸಾಂತ್ವನ ಕೇಂದ್ರಗಳು ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಬಹು ಮುಖ್ಯ ಪಾತ್ರವನ್ನು ವಹಿಸುತ್ತಿದ್ದಾರೆ. ಈ ಸಂಬಂಧ ಎಲ್ಲಾ ಇಲಾಖೆಗಳು ಇನ್ನಷ್ಟು ಚುರುಕಾಗಿ ಕಾರ್ಯನಿರ್ವಹಿಸಬೇಕು ಎಂದರು.

ಮಹಿಳೆಯರ ಮತ್ತು ಮಕ್ಕಳ ಅಕ್ರಮ ಸಾಗಣೆ ಸಂಬಂಧಿಸಿದಂತೆ ಪ್ರತಿ ಗ್ರಾಮ ಪಂಚಾಯಿತಿ ಹಂತದಲ್ಲಿ ಕಾವಲು ಸಮಿತಿಗಳಿವೆ. ಮಹಿಳೆ ಮತ್ತು ಮಕ್ಕಳ ಅಪಹರಣಗಳು, ಪೋಕ್ಸೋ, ಬಾಲ್ಯವಿವಾಹ, ವಿವಾಹೇತರ ಸಂಬಂಧಗಳಂತಹ ಪ್ರಕರಣಗಳು ಕಳ್ಳ ಸಾಗಣೆಯೊಂದಿಗೆ ಸಹ ಸಂಬಂಧ ಹೊಂದಿರುವುದರಿಂದ ಇಂತಹ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುವ ಪ್ರದೇಶಗಳನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಗುರುತಿಸಿ ರಕ್ಷಣೆಗೆ ಕ್ರಮ ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಯಾವುದೇ ಕಾರಣಕ್ಕೂ ಮಹಿಳೆಯರ ಮತ್ತು ಮಕ್ಕಳ ಅಕ್ರಮ ಸಾಗಣೆ ಆಗದಂತೆ ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ಪಾರದರ್ಶಕವಾಗಿ ಕಾರ್ಯನಿರ್ವಹಿಸಬೇಕು. ಪ್ರತಿ ತಿಂಗಳು ಈ ಕುರಿತು ಪ್ರಗತಿ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದರು. ರಾಜ್ಯ ಲಿಂಗಾನುಪಾತವು ಜಿಲ್ಲಾ ಲಿಂಗಾನುಪಾತಕ್ಕಿಂತ ಹೆಚ್ಚುವರಿ ಆಗಿದೆ, ಮುಳಬಾಗಿಲು ತಾಲ್ಲೂಕಿನಲ್ಲಿ ಗಣನೀಯ ಕಡಿಮೆಯಾಗಿರುವುದು ಕಳವಳಕ್ಕೆ ಕಾರಣವಾಗಿದೆ ಎಂದರು. ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳಿಂದಾಗಿ ಯುವತಿಯರಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಹಂತ ತಲುಪುತ್ತಿದ್ದಾರೆ. ಪೋಕ್ಸೋ ಪ್ರಕರಣಗಳು ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಶಾಲಾ-ಕಾಲೇಜುಗಳಲ್ಲಿ ಅರಿವು ಕಾರ್ಯಕ್ರಮ ಮತ್ತು ಕಾರ್ಯಾಗಾರಗಳನ್ನು ಶಾಲಾ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಬೇಕು ಎಂದು ಹೇಳಿದರು.

ಸ್ಥಾನಿಕವಾಗಿ ಭೇಟಿ ನೀಡಿ ಫಲಾನುಭವಿಗಳ ಸರ್ವೆ ಮಾಡಿ ವರದಿಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿ ತಿಳಿಸಿದರು.

## ನಜರ್‌ಬಾದ್ ಠಾಣೆಗೆ ಪರಮೇಶ್ವರ್ ದಿಢೀರ್ ಭೇಟಿ

• ಉದಯವಾಹಿನಿ, ಮೈಸೂರು


ಉದಯವಾಹಿನಿ ಚಿತ್ರ

ಪ್ರತಿ ಜಿಲ್ಲೆಯಲ್ಲಿ ಪೊಲೀಸ್ ಇಲಾಖೆಯಿಂದ ಸೈಬರ್ ಲ್ಯಾಬ್ ಮಾಡಲಾಗುತ್ತಿದೆ. ಆನ್‌ಲೈನ್ ವಂಚನೆ ಪ್ರಕರಣ ಬೇಧಿಸುವ ಬಗ್ಗೆ ತರಬೇತಿ ನೀಡಲು ಸೂಚಿಸಲಾಗಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು. ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸಭೆ ನಡೆಸಿ ಬಳಿಕ, ನಜರ್‌ಬಾದ್ ಠಾಣೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮೈಸೂರಿನಲ್ಲಿ ಈ ವರ್ಷ 30 ಕೋಟಿ ಆನ್‌ಲೈನ್ ವಂಚನೆಯಾಗಿದೆ. ಈ ರೀತಿಯ ಪ್ರಕರಣ ಹೆಚ್ಚುತ್ತಿದ್ದು, ಪೊಲೀಸರಿಗೆ ತರಬೇತಿ ನೀಡಲಾಗುವುದು ಎಂದರು.

**ಪ್ರತಿ ಜಿಲ್ಲೆಯಲ್ಲಿ ಸೈಬರ್ ಲ್ಯಾಬ್**

ವಿದ್ಯಾವಂತರು ಡಿಜಿಟಲ್ ಬಂಧನಕ್ಕೆ ಒಳಗಾಗುತ್ತಿರುವುದು ಆತಂಕಕಾರಿ. ಸರ್ಕಾರಿ ನಿವೃತ್ತ ಅಧಿಕಾರಿಗಳನ್ನು ಗುರಿಯಾಗಿಸಿ ವಂಚಕರು ಕೆಲಸ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ನಿವೃತ್ತ ಐಟಿ ಉದ್ಯೋಗಿಯೊಬ್ಬರು 32 ಕೋಟಿ ಹಣ ಕಳೆದುಕೊಂಡಿದ್ದಾರೆ. ಹೀಗಾಗಿ, ಸೈಬರ್ ಅಪರಾದವನ್ನ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎಂದು ಹೇಳಿದರು. ಪೊಲೀಸರ ನೇಮಕಾತಿಗಳನ್ನು ಸರ್ಕಾರ ತುರ್ತಾಗಿ ಮಾಡುತ್ತಿದೆ. ಪಿಎಸ್‌ಐ ಹಗರಣ ಆದ ಕಾರಣ ಪೊಲೀಸ್ ನೇಮಕಾತಿಯಲ್ಲಿ ವಿಳಂಬವಾಯಿತು. ಈ ವರ್ಷ ಪೊಲೀಸ್ ನೇಮಕಾತಿಯನ್ನ ಹೆಚ್ಚು ಮಾಡುತ್ತಿದ್ದೇವೆ. ಮೈಸೂರು ನಗರದಲ್ಲಿ ಹೆಚ್ಚುವರಿ ಠಾಣೆ ಮಾಡುವ ಬಗ್ಗೆ ಪರಿಶೀಲನೆ ನಡೆಸಿದ್ದೇನೆ. ಉದಯಗಿರಿ ಪೊಲೀಸ್ ಠಾಣೆಯನ್ನು ಈಗಾಗಲೇ ವಿಭಾಗ ಮಾಡಿದ್ದೇವೆ. ಇನ್ನೆಷ್ಟು ಹೆಚ್ಚುವರಿ ಠಾಣೆಗಳು ಬೇಕೆಂಬ ಬಗ್ಗೆ ಸಭೆ ನಡೆಸುತ್ತೇವೆ ಎಂದು ತಿಳಿಸಿದರು. ಮೈಸೂರಿನಲ್ಲಿ ಸುಸಜ್ಜಿತವಾದ ಕರ್ನಾಟಕ ಪೊಲೀಸ್ ವಸ್ತುಸಂಗ್ರಹಾಲಯ ನಿರ್ಮಿಸಲಾಗುವುದು. ರಾಜ್ಯ ಪೊಲೀಸ್ ಇಲಾಖೆಯು ಆರಂಭದಿಂದ ಇಲ್ಲಿಯವರೆಗೆ ಬೆಳೆದುಬಂದ ರೀತಿ ಹಾದಿಯನ್ನು ಅದರಲ್ಲಿ ಕಟ್ಟಿಕೊಡಲಾಗುವುದು ಎಂದರು. ಕೆಎಸ್‌ಆರ್‌ಪಿ ಅಶ್ವಾರೋಹಿ ದಳ ಕಂಪನಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಅಧಿಕಾರಿ ಮತ್ತು ಸಿಬ್ಬಂದಿಯಿಂದ ಮಾಹಿತಿ ಪಡೆದರು. ಆರಕ್ಷಕ ಅಶ್ವದಳದ ವಸ್ತುಸಂಗ್ರಹಾಲಯವನ್ನು ವೀಕ್ಷಿಸಿದರು.

## ಸರಗೂರು ಅಂಚೆ ಕಚೇರಿ ಮುಂದೆ ಪ್ರತಿಭಟನೆ

• ಉದಯವಾಹಿನಿ, ಸರಗೂರು

ಪಟ್ಟಣದ ಅಂಚೆ ಕಚೇರಿಯಲ್ಲಿ ಠೇವಣಿ ಇಟ್ಟಿದ್ದ ಖಾತೆದಾರರ ಸಹಿ ನಕಲು ಮಾಡಿ, ಮೂರು ಕೋಟಿಗೂ ಹೆಚ್ಚು ಹಣವನ್ನು ಅಂಚೆ ಸಹಾಯಕ, ಅಂಚೆ ಮಾಸ್ಟರ್ ದೀಪಕ್ ಎಂಬ ವ್ಯಕ್ತಿ ಡ್ರಾ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿ ಖಾತೆದಾರರು ಸರಗೂರು ಅಂಚೆ ಕಚೇರಿ ಮುಂದೆ ನಡೆಸುತ್ತಿರುವ ಪ್ರತಿಭಟನೆ ಎರಡನೇ ದಿನಕ್ಕೆ ಕಾಲಿಟ್ಟಿದೆ. ಹಣ ಕಳೆದು ಕೊಂಡವರ ಖಾತೆದಾರರಿಗೆ ಅರು ತಿಂಗಳುಗಳಿಂದ ಹಣ ಹಿಂತಿರುಗಿಸಿಲ್ಲ. ಅಂಚೆ ಇಲಾಖೆ ಕಾಲ ದೂಡುತ್ತಿದೆ. ಕೂಡಲೇ ಖಾತೆದಾರರಿಗೆ ಅವರ ಠೇವಣಿ ಹಣವನ್ನು ಬಡ್ಡಿ ಸಮೇತ ಕೊಡಿಸಬೇಕು. ಸಹಿ ನಕಲು ಮಾಡಿ ಕೋಟ್ಯಂತರ ರೂಪಾಯಿ ದೋಚಿರುವ ವ್ಯಕ್ತಿಗಳ ಜತೆಗೆ ಅಂಚೆ ಇಲಾಖೆಯ ಉನ್ನತ ಅಧಿಕಾರಿಗಳೂ ಶಾಮೀಲಾಗಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ. ಅಂತವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಠೇವಣಿದಾರರು ವಯೋವೃದ್ಧರು, ನಿವೃತ್ತ ನೌಕರರು, ಮಹಿಳೆಯರು ಹೆಚ್ಚಾಗಿದ್ದು ಅವರ ಜೀವನದ ನಿರ್ವಹಣೆ ಕಷ್ಟಕರವಾಗಿದೆ. ಠೇವಣಿದಾರರ ಆರೋಗ್ಯ ಹದಗೆಟ್ಟಿದೆ. ಅವರ ಜೀವಕ್ಕೆ ತೊಂದರೆ ಯಾದರೆ ಅಂಚೆ ಇಲಾಖೆ ಅಧಿಕಾರಿಗಳೆ ನೇರಹೊಣೆ ಎಂದು ಆರ್ಯ ಈಡಿಗ ಸಮಾಜದ ತಾಲ್ಲೂಕು ಅಧ್ಯಕ್ಷ ಎಸ್.ಎನ್.ನಾಗರಾಜು, ಆದಿ ಕರ್ನಾಟಕ ಮಹಾಸಭಾ ಮಾಜಿ ಅಧ್ಯಕ್ಷ ಶಿವಣ್ಣ, ಮಲ್ಲೇಶ್, ಎಸ್.ಆರ್. ಮಹೇಶ್ ಎಚ್ಚರಿಕೆ ನೀಡಿದರು.


ಉದಯವಾಹಿನಿ ಚಿತ್ರ

ಇಷ್ಟು ದೊಡ್ಡ ಹಗರಣ ಆಗಿದ್ದರೂ ಇಲಾಖೆ ಕಣ್ಣು ಮುಚ್ಚಿ ಕುಳಿತ್ತಿದೆ. ಅಂಚೆ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಹಣ ಕಳೆದು ಕೊಂಡಿರುವವರ ಖಾತೆಗೆ ಹಣ ಹಾಕಬೇಕು. ಸಹಿ ನಕಲು ಮಾಡಿರುವ ವ್ಯಕ್ತಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು. ಅಂಚೆ ಇಲಾಖೆಯ ಗ್ರಾಹಕರಿಗೆ ನ್ಯಾಯ ಒದಗಿಸದಿದ್ದರೆ ಕಚೇರಿಗೆ ಬೀಗ ಹಾಕಿ ಅಹೋರಾತ್ರಿ ಧರಣಿ ಮಾಡಿ, ಸರಗೂರು ಬಂದ್ ಮಾಡಲಾಗುವುದು. ಅಲ್ಲದೆ, ಪಟ್ಟಣದ ದೂರವಾಣಿ ಕೇಂದ್ರದ ಎದುರು, ಅಂಚೆ ಇಲಾಖೆಯ ನಿವೇಶನದಲ್ಲಿ ವ್ಯಾಪರ ಮಾಡಲು ಪೆಟ್ಟಿಗೆ ಅಂಗಡಿಗಳನ್ನು ಇಟ್ಟಿಕೊಳ್ಳುತ್ತೇವೆ ಎಂದು ಪ್ರತಿಭಟನಕಾರರು ಎಚ್ಚರಿಸಿದರು. ಜಿಲ್ಲಾ ಅಂಚೆ ಇಲಾಖೆಯ ಎಎಸ್‌ಡಿ ಶ್ರೀನಿವಾಸ್ ಮತ್ತು ಚೇತನ್ ಪ್ರತಿಭಟನ ಸ್ಥಳಕ್ಕೆ ಆಗಮಿಸಿ ನೊಂದ ಗ್ರಾಹಕರ ಜೊತೆ ಮಾತನಾಡಿ, ಇಲ್ಲಿ ಆಗಿರುವ ಹಗರಣದ ಬಗ್ಗೆ ಸಿಬಿಐ ತನಿಖೆಗೆ ಶಿಫಾರಸು ಮಾಡಲಾಗಿದೆ. ಸಿಬಿಐ ತನಿಖೆ ನಡೆಸಲಿದೆ ಎಂದರು. ಜಿಲ್ಲಾ ಅಂಚೆ ಕಚೇರಿಯ ಜಿಲ್ಲಾ ಅಧೀಕ್ಷಕ ಹರೀಶ್ ಪ್ರತಿಭಟನ ಸ್ಥಳಕ್ಕೆ ಬರಬೇಕಾಗಿತ್ತು. ಆದರೆ, ಅವರು ಕೋಲಾರಕ್ಕೆ ಕೆಲಸದ ಮೇಲೆ ಹೋಗಿದ್ದು, ಬರಲು ಸಾಧ್ಯವಾಗಿಲ್ಲ. ಹಣ ದುರುಪಯೋಗ ಆಗಿರುವ ಹಿನ್ನೆಲೆಯಲ್ಲಿ ಸಹಾಯಕ ಪೋಸ್ಟ್ ಮಾಸ್ಟರ್ ಬಿ.ಎಸ್.ದೀಪಕ್, ಶಶಿಕಲಾ, ತೇಜಾ, ಕೆ.ಎಲ್. ಪುಷ್ಪಲತಾ, ಎನ್.ವೀಣಾ, ಚೈತ್ರಾ ಅವರನ್ನು ಅಮಾನತು ಮಾಡಲಾಗಿದೆ. ಇಲ್ಲಿ 75 ಮಂದಿಗೆ ದ್ರೋಹ ಆಗಿದೆ.

## ದಲಿತರ ಭೂಮಿ ಕಬಳಿಕೆ: ಪ್ರತಿಭಟನೆ

• ಉದಯವಾಹಿನಿ, ಕೆ.ಆರ್.ಪೇಟೆ


ಉದಯವಾಹಿನಿ ಚಿತ್ರ

ಪಟ್ಟಣದ ಪುರಸಭಾ ವ್ಯಾಪ್ತಿಯ ಹೊಸಹೊಳಲು ಬಡಾವಣೆಯ ಸರ್ವೆ ನಂ. 141ರಲ್ಲಿ ದಲಿತರು ಬೇಸಾಯ ಮಾಡುತ್ತಿದ್ದ 1ಎಕರೆ 31 ಗುಂಟೆ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳದಿದ್ದರೂ ನಕಲಿ ದಾಖಲೆಗಳನ್ನು ಸೃಷ್ಟಿಸಿ, ದಲಿತರ ಭೂಮಿಯನ್ನು ಬಲಾಢ್ಯರಿಗೆ ಹಂಚಿಕೆ ಮಾಡಲಾಗಿದೆ. ದಲಿತರಿಗೆ ಸೇರಿದ ಭೂಮಿಯನ್ನು ದಲಿತರಿಗೆ ವಾಪಸ್ ಕೊಡಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಮಾತಂಗಿ ಮಾದಿಗ ಸಮಾಜ ಪರಿವರ್ತನಾ ವೇದಿಕೆ ಮತ್ತು ದಲಿತ ಸಂಘಟನೆಗಳ ಕಾರ್ಯಕರ್ತರು ಪಟ್ಟಣದ ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಎಸ್.ಯು.ಅಶೋಕ್‌ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಮಂಡ್ಯ ಜಿಲ್ಲಾಧಿಕಾರಿಗಳು ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ವಸತಿ ನಿವೇಶನ ಹಂಚುವ ಸಲುವಾಗಿ 1988ರಲ್ಲಿ ವಶಪಡಿಸಿಕೊಂಡ ಸರ್ವೆ ನಂಬರ್ ನಲ್ಲಿ ನಂ.141ರಲ್ಲಿರುವ 1ಎಕರೆ 31 ಗುಂಟೆ ಜಮೀನನ್ನು ಭೂಸ್ವಾಧೀನ ಪಡೆಸಿಕೊಂಡಿರುವುದಿಲ್ಲ. 2011-12ನೇ ಸಾಲಿನವರೆಗೂ ನಮ್ಮ ಕುಟುಂಬದ ಹೆಸರಿನಲ್ಲಿಯೇ ಜಮೀನು ಇದ್ದು ಆನಂತರ ಬದಲಾವಣೆ ಮಾಡಲಾಗಿದೆ.

ಈ ಬಗ್ಗೆ ಮನವಿ ಮಾಡಿದರೂ ಸ್ಪಂದಿಸಿಲ್ಲ ಎಂದು ಭೂಮಿ ಕಳೆದುಕೊಂಡ ಕುಟುಂಬದವರು ಆರೋಪಿಸಿದರು. ಸಮಸ್ಯೆಯನ್ನು ಬಗೆಹರಿಸಿಕೊಡದಿದ್ದರೆ ತಾಲ್ಲೂಕು ಕಚೇರಿಯ ಮುಂದೆ ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

## ಕೊಲೆ, ದರೋಡೆ: 9 ಆರೋಪಿಗಳ ಬಂಧನ

• ಉದಯವಾಹಿನಿ, ಮಂಡ್ಯ


ಉದಯವಾಹಿನಿ ಚಿತ್ರ

ಜಿಲ್ಲೆಯಲ್ಲಿ ನಡೆದಿದ್ದ ಕೊಲೆ ಪ್ರಕರಣದಲ್ಲಿ ನಾಲ್ವರು ಮತ್ತು ದರೋಡೆ ಪ್ರಕರಣದಲ್ಲಿ ಐವರು ಸೇರಿದಂತೆ ಒಟ್ಟು 9 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಕೊಲೆ ಪ್ರಕರಣದಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು ಮಿಣಜಿಬೋರಕೊಪ್ಪಲು ಗ್ರಾಮದ ಶಿವಕುಮಾರ್, ಪಾಲಹಳ್ಳಿಯ ಹರ್ಷ, ಕ್ಯಾತನಹಳ್ಳಿಯ ಅಭಿಷೇಕ್, ಬ್ಯಾಟೆತಿಮ್ಮನಕೊಪ್ಪಲು ಶಿವು ಬಂಧಿತರು.

ದರೋಡೆ ಪ್ರಕರಣದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಬಿಡದಿ ತಾಲ್ಲೂಕು ಶೇಷಗಿರಿಹಳ್ಳಿ ಕಾಲನಿಯ ಗಂಗರಾಜು ಅಲಿಯಾಸ್ ಗಂಗ , ರಾಮನಗರ ಟೌನ್ ನಿವಾಸಿಗಳಾದ ಮಂಜುನಾಥ್ ಅಲಿಯಾಸ್ ಕೆಂಪ, ಎಂ.ಶಶಿಕುಮಾರ್ ಅಲಿಯಾಸ್ ಗೆಂಡೆ, ಐಜೂರು ಕೃಷ್ಣ ಅಲಿಯಸ್ ರಾಜು, ಮದ್ದೂರು ಟೌನ್ ನಿವಾಸಿ ಎಂ.ಕೆ. ಸಂದೇಶ್ ಅಲಿಯಾಸ್ ಕಲರ್ ಬಂಧಿತರು ಎಂದು ಮಾಹಿತಿ ನೀಡಿದರು. ಬಂಧಿತ ಆರೋಪಿಗಳನ್ನು ನ್ಯಾಯಾಂಗ ವಶಕ್ಕೆ ನೀಡಲಾಗಿದೆ. ಎರಡೂ ಪ್ರಕರಣಗಳನ್ನು ಬೇಧಿಸಿ ಆರೋಪಿಗಳನ್ನು ಬಂಧಿಸಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಬಹುಮಾನ ಘೋಷಿಸಲಾಗಿದೆ ಎಂದರು.

**ಅಪಘಾತದ ಕತೆ ಕಟ್ಟಿದ್ದ ಸ್ನೇಹಿತರು:** ಶ್ರೀರಂಗಪಟ್ಟಣ ತಾಲ್ಲೂಕು ಮಿಣಜಿಬೋರಕೊಪ್ಪಲು ಗ್ರಾಮದ ಹೊರ ವಲಯದ ಖಾಲಿ ಜಾಗದಲ್ಲಿ ಅದೇ ಗ್ರಾಮದ ಶಿವಕುಮಾರ್ ಮತ್ತು ಸ್ನೇಹಿತರು ನ.18ರಂದು ಪಾರ್ಟಿ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಶಿವಕುಮಾರ್ ಮತ್ತು ಕ್ಯಾತನಹಳ್ಳಿ ಶಶಾಂಕ್‌ಗೌಡ ನಡುವೆ ಮಾತಿಗೆ ಮಾತು ಬೆಳೆದು ಜಗಳವಾಗಿ ಶಶಾಂಕ್ ಮೇಲೆ ಶಿವಕುಮಾರ್ ಹಲ್ಲೆ ನಡೆಸಿದ್ದ. ಆಗ ಕಿವಿ ಮತ್ತು ಮೂಗಿನಲ್ಲಿ ರಕ್ತ ಬಂದಿದ್ದರಿಂದ ಹರ್ಷ ಅಭಿಷೇಕ್ ಶಿವು ಅವರು ಶಶಾಂಕ್‌ಗೌಡ ಅವರನ್ನು ಬೈಕ್‌ನಲ್ಲಿ ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದ.

ಆಗ ಅಲ್ಲೇ ಇದ್ದ ಆಟೊದಲ್ಲಿ ಕ್ಯಾತನಹಳ್ಳಿಗೆ ಶಶಾಂಕ್‌ನ ಶವವನ್ನು ಅವರ ಮನೆಗೆ ತೆಗೆದುಕೊಂಡು ಹೋಗಿ ಅಪಘಾತದಲ್ಲಿ ಮೃತಪಟ್ಟಿದ್ದಾನೆ ಎಂದು ಸುಳ್ಳು ಹೇಳಿದ್ದರು. ಈ ಬಗ್ಗೆ ಶಶಾಂಕ್‌ನ ತಾಯಿ ಶ್ರೀರಂಗಪಟ್ಟಣ ಪೊಲೀಸರಿಗೆ ದೂರು ನೀಡಿದ್ದರು. ಶವ ಪರೀಕ್ಷೆ ನಡೆಸಿದ ವೈದ್ಯರು ಶಶಾಂಕ್‌ನ ದೇಹದ ಮೇಲಾಗಿರುವ ಗಾಯಗಳು ಅಪಘಾತದಿಂದ ಆಗಿರುವ ಸಾಧ್ಯತೆ ಕಡಿಮೆ ಎಂದು ಅನುಮಾನ ವ್ಯಕ್ತಪಡಿಸಿದ್ದರು.

### ಕಾಂಗ್ರೆಸ್ ಸರ್ಕಾರ ಬಿದ್ದರೆ, ಬಿಜೆಪಿಯಿಂದ ಸರ್ಕಾರ ರಚನೆಗೆ ಪ್ರಯತ್ನ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಕಾಂಗ್ರೆಸ್‌ನ ಸ್ವಯಂಕೃತ ಅಪರಾಧದಿಂದ ರಾಜ್ಯದಲ್ಲಿ ಸರ್ಕಾರ ಬಿದ್ದು ಹೋದರೆ ಬಿಜೆಪಿ ವರಿಷ್ಠರು ನೀಡುವ ಆದೇಶ ಜಾರಿಗೊಳಿಸುತ್ತೇವೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಮಧ್ಯಂತರ ಚುನಾವಣೆ ಆಗಬಾರದು, ಏನಾದರೂ ಮಾಡಿ ಎಂದು ಪಕ್ಷದ ವರಿಷ್ಠರು ಸೂಚನೆ ನೀಡಿದರೆ ನಾವು ಸರ್ಕಾರ ರಚನೆಗೆ ಪ್ರಯತ್ನಿಸುತ್ತೇವೆ ಎಂದರು. ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತ ಸತ್ತು ಹೋಗಿದೆ. ರಾಜ್ಯದ ಜನರು ಕಂಗಾಲಾಗಿದ್ದಾರೆ. ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯುವುದು ಸೇರಿದಂತೆ ರೈತರ ಹಲವು ಸಮಸ್ಯೆಗಳಿವೆ. ಅವುಗಳ ಪರಿಹಾರಕ್ಕೆ ಸರ್ಕಾರ ಮುಂದಾಗುತ್ತಿಲ್ಲ. ಆದ್ದರಿಂದ ಈ ಸರ್ಕಾರ ಇರಬಾರದು ಎಂದು ಹೇಳಿದರು. ಕಾಂಗ್ರೆಸ್ ಮುಳುಗುತ್ತಿರುವ ಹಡಗು. ದೇಶದಲ್ಲಿ ಮೂರು ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇದೆ. ಇದರಲ್ಲಿ ಎರಡು ಸಣ್ಣ ಪುಟ್ಟ ರಾಜ್ಯಗಳಿವೆ ಎಂದರು.

## ಕೇಂದ್ರ ಪರಿಸರ ಇಲಾಖೆ ತಡೆಯೇ ನೆಪವಾಗುತ್ತಾ?

● ಎತ್ತಿನಹೊಳೆ ಯೋಜನೆಯೇ ಒಂದು ದೋಖಾ ಯೋಜನೆ. ಇವರು ಹೇಳಿದಂತೆ ಆ ಯೋಜನೆಯಡಿ ನೀರಿನ ಲಭ್ಯತೆ ಇಲ್ಲ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಇನ್ನೆರೆಡು ವರ್ಷದಲ್ಲಿ ಬಯಲುಸೀಮೆ ಜಿಲ್ಲೆಗಳಿಗೆ ಎತ್ತಿನಹೊಳೆ ನೀರು ಎಂದು ಹೇಳಿ 15 ವರ್ಷವಾಗಿದೆ. ಆದರೆ ಇದುವರೆಗೂ ಹನಿ ನೀರೂ ಹರಿದಿಲ್ಲ. ಎರಡೂವರೆ ವರ್ಷದ ಹಿಂದೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರ ಮತ್ತೊಮ್ಮೆ 2027ಕ್ಕೆ ನೀರು ಹರಿಸಿಯೇ ಸಿದ್ಧ ಎಂದು ಹೇಳುತ್ತಿದೆ. ಇದರ ಬೆನ್ನಲ್ಲೇ ಕೇಂದ್ರದ ಕಡೆ ಬೊಟ್ಟು ಮಾಡಿರುವುದು ಅನುಮಾನಕ್ಕೆ ಕಾರಣವಾಗಿದೆ. ಎತ್ತಿನಹೊಳೆ ಯೋಜನೆಯಲ್ಲಿನ ನೀರಿನ ಲಭ್ಯತೆ ದೊಡ್ಡ ಸಂಶಯವಿದೆ. ಇದರ ನಡುವೆಯೂ ಯೋಜನೆಯ ಅನುಷ್ಠಾನಕ್ಕಾಗಿ 8 ಸಾವಿರ ಕೋಟಿ ರೂ. ಬಜೆಟ್‌ನಿಂದ 30 ಸಾವಿರ ಕೋಟಿ ರೂ.ವರೆಗೂ ಏರಿಕೆಯಾಗಿದೆ. ಆದರೆ ಹೇಳಿದಂತೆ ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರ ಜಿಲ್ಲೆಗಳಿಗೆ ಎತ್ತಿನಹೊಳೆ ನೀರಿನ ದರ್ಶನವಾಗಿಲ್ಲ.

**ಭೂಸ್ವಾಧೀನಕ್ಕೆ ಅಧಿಸೂಚನೆ:** ಗೌರಿಬಿದನೂರುವರೆಗೂ ಪೈಪ್‌ಲೈನ್ ಅಳವಡಿಕೆಯಾಗಿದೆ. ಉಳಿದ ಕಡೆ ಪೈಪ್‌ಲೈನ್ ಅಳವಡಿಕೆಗೆ ಪ್ರಕ್ರಿಯೆಗಳು ನಡೆದಿವೆ. ಮೂರು ಜಿಲ್ಲೆಗಳಲ್ಲಿ ಸುಮಾರು 1500 ಕೋಟಿ ರೂ. ವೆಚ್ಚದಲ್ಲಿ ನಾನಾ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ. ಪೈಪ್‌ಲೈನ್ ಅಳವಡಿಕೆಗೆ ಅಗತ್ಯವಾದ ಭೂ ಸ್ವಾಧೀನಕ್ಕೆ ಅಧಿಸೂಚನೆ ಹೊರಬಿದ್ದಿದೆ.

ಎಲ್ಲೆಡೆ ಭೂ ಸ್ವಾಧೀನ ಪ್ರಕ್ರಿಯೆ ನಡೆದು ಶೀಘ್ರವೇ ಪೈಪ್‌ಲೈನ್ ಅಳವಡಿಕೆ ಕಾರ್ಯವೂ ನಡೆಯಲಿದೆ. ಆದರೆ ನೀರು ಬರುತ್ತಾ ಎನ್ನುವುದೇ ಈಗ ಸಂಶಯ.

**ನೀರು ಹರಿಸಲು ಪಟ್ಟು:** ಬೆಂಗಳೂರು ಗ್ರಾಮಾಂತರ ಉಸ್ತುವಾರಿ ಸಚಿವ ಕೆ.ಎಚ್. ಮುನಿಯಪ್ಪ, ಚಿಕ್ಕಬಳ್ಳಾಪುರ ಜಿಲ್ಲಾಉಸ್ತುವಾರಿ ಸಚಿವ ಡಾ. ಎಂ.ಸಿ. ಸುಧಾಕರ್, ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ನೀರಾವರಿ ಖಾತೆ ಹೊಂದಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಮೇಲೆ ಒತ್ತಡ ಹೇರಿ ಎತ್ತಿನಹೊಳೆ ನೀರನ್ನು ಹರಿಸಲೇಬೇಕು. ಅನುದಾನ ಬಿಡುಗಡೆ ಮಾಡಿ ಕಾಮಗಾರಿ ಕೈಗೊಳ್ಳಿ ಎಂದು ಪಟ್ಟು ಹಿಡಿದಿದ್ದಾರೆ.


ಉದಯವಾಹಿನಿ ಚಿತ್ರ

**ಹನಿ ನೀರೂ ಹರಿದಿಲ್ಲ**

**ಮತ್ತೆ ಅನುಮಾನ:** ಇನ್ನೆರೆಡು ವರ್ಷದಲ್ಲಿ ಬಯಲುಸೀಮೆ ಜಿಲ್ಲೆಗಳಿಗೆ ಎತ್ತಿನಹೊಳೆ ನೀರು ಹರಿಸುತ್ತೇವೆ ಎಂಬುದು ಹೊಸ ಭರವಸೆಯಂತೂ ಅಲ್ಲ. ವೀರಪ್ಪಮೊಯ್ಲಿ ಅವರ ಕಾಲದಿಂದಲೇ ಇದೇ ಭರವಸೆ ಪನರಾವರ್ತನೆಯಾಗುತ್ತಲೇ ಇದೆ. ಎರಡೂವರೆ ವರ್ಷದ ಹಿಂದೆ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬಂದಾಗಲೂ 2027ಕ್ಕೆ ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗೆ ನೀರು ಹರಿಸುತ್ತೇವೆ ಎನ್ನುವ ಭರವಸೆ ಕೊಡಲಾಗಿದೆ. ಆದರೆ ಈಗ ಕೇಂದ್ರ ಪರಿಸರ ಇಲಾಖೆ ಅರಣ್ಯ ಭೂಮಿ ಬಳಕೆಗೆ ಅನುಮತಿ ನೀಡುತ್ತಿಲ್ಲ ಎಂಬ ಮಾತನ್ನು ಡಿಸಿಎಂ ಹೇಳುತ್ತಿರುವುದು ಮತ್ತೊಮ್ಮೆ ಅನುಮಾನಕ್ಕೆ ಕಾರಣವಾಗಿದೆ.

**2027ಕ್ಕೆ ನೀರು ಬರುತ್ತಾ?:** ಸದ್ಯಕ್ಕೆ ಎತ್ತಿನಹೊಳೆ ಯೋಜನೆಯ ಮೂಲದಿಂದಲೇ ಇನ್ನೂ ಸಂಪೂರ್ಣವಾಗಿ ನೀರೆತ್ತಲು ಸಾಧ್ಯವಾಗುತ್ತಿಲ್ಲ. ಇದರ ನಡುವೆ ಭೂ ಸ್ವಾಧೀನ, ಸ್ಥಳೀಯರ ವಿರೋಧ, ಅನುದಾನದ ಕೊರತೆ ಹೀಗೆ ನಾನಾ ಸಮಸ್ಯೆಗಳಲ್ಲೇ ಒದ್ದಾಡುತ್ತಿದೆ. ಇದರ ಮಧ್ಯೆ ಈಗ ಕೇಂದ್ರ ಪರಿಸರ ಇಲಾಖೆ ಎತ್ತಿನಹೊಳೆ ಯೋಜನೆ ಕಾಮಗಾರಿಗೆ ಅನುಮತಿ ನೀಡಲು ನಿರಾಕರಿಸಿದೆ. ಹೀಗಾಗಿ ರಾಜ್ಯ ಸರಕಾರ ಈಗ ಕೇಂದ್ರ ಸರಕಾರದ ಕಡೆ ಬೊಟ್ಟು ಮಾಡಿ ತೋರಿಸುತ್ತಿದ್ದು, 2027ಕ್ಕೆ ಈ ಜಿಲ್ಲೆಗಳಿಗೆ ನೀರು ಹರಿಯುತ್ತಾ ಎಂಬುದೇ ಈಗ ಪ್ರಶ್ನೆಯಾಗಿದೆ.

**ಖಾಲಿ ಪೈಪಿನ ಯೋಜನೆ :** ನೀರಾವರಿ ಹೋರಾಟಗಾರರು ಮಾತ್ರ ಯಾವುದೇ ಕಾರಣಕ್ಕೂ ಎತ್ತಿನಹೊಳೆ ನೀರು ನಮ್ಮ ಜಿಲ್ಲೆಗಳಿಗೆ ಹರಿಯಲು ಸಾಧ್ಯವೇ ಇಲ್ಲ. ನೀರಿನ ಲಭ್ಯತೆಯೇ ಇಲ್ಲ ಎಂದು ಎಲ್ಲಾ ವರದಿಗಳು ಹೇಳುತ್ತವೆ. ಇಷ್ಟಾದರೂ ರಾಜ್ಯ ಸರಕಾರ 30 ಸಾವಿರ ಕೋಟಿ ರೂ. ಖರ್ಚು ಮಾಡಿ ಕಮಿಷನ್ ಮಾಡುವ ದಂಧೆಯಲ್ಲಿ ತೊಡಗಿದೆ. ಎತ್ತಿನಹೊಳೆ ಯೋಜನೆ ಖಾಲಿ ಪೈಪಿನ ಯೋಜನೆ ಬಯಲುಸೀಮೆ ಜರಿಗೇನೂ ಲಾಭವಿಲ್ಲ ಎಂದು ಆರೋಪಿಸುತ್ತಿದ್ದಾರೆ.



ಸಚಿವರಾದ ಕೆ.ಎಚ್. ಮುನಿಯಪ್ಪ, ಡಾ. ಎಂ.ಸಿ. ಸುಧಾಕರ್ ಕೃಷ್ಣಬೈರೇಗೌಡ ಅವರು ನನ್ನ ಬೆನ್ನತ್ತಿದ್ದು, 2027ರ ಹೊತ್ತಿಗೆ ಎರಡು ಜಿಲ್ಲೆಗಳಿಗೆ ಎತ್ತಿನಹೊಳೆ ನೀರು ಹರಿಸಲೇಬೇಕು ಎಂದು ಪಟ್ಟು ಹಿಡಿದಿದ್ದಾರೆ. ಇದಕ್ಕೆ ಪೂರಕವಾಗಿ ನಾವು ಕೆಲಸ ಮಾಡುತ್ತಿದ್ದೇವೆ. ಪರ್ಯಾಯವಾಗಿ ಕಂದಾಯ ಭೂಮಿ ನೀಡಿದ್ದರೂ ಕೇಂದ್ರ ಪರಿಸರ ಇಲಾಖೆ ಅರಣ್ಯ ಭೂಮಿ ಬಳಕೆಗೆ ಅನುಮತಿ ನೀಡುತ್ತಿಲ್ಲ .
–ಡಿ.ಕೆ.ಶಿವಕುಮಾರ್, ಡಿಸಿಎಂ,



ಎತ್ತಿನಹೊಳೆ ಯೋಜನೆ ಸಿಎಂ ಸಿದ್ದರಾಮಯ್ಯ ಅವರ ಕೊಡುಗೆ. ಸಿಎಂ – ಡಿಸಿಎಂ ಇಬ್ಬರೂ ಮನಸ್ಸು ಮಾಡಿ ನಮ್ಮ ಭಾಗಕ್ಕೆ ಎತ್ತಿನಹೊಳೆ ನೀರನ್ನು ಹೇಳಿದಂತೆ 2027ಕ್ಕೆ ಹರಿಸಲು ಕ್ರಮ ಕೈಗೊಳ್ಳಬೇಕು. ಈ ಭಾಗಕ್ಕೆ ಶುದ್ಧ ಕುಡಿಯುವ ನೀರನ್ನು ಪೂರೈಸುವ ಕೆಲಸ ಮಾಡಬೇಕು.
–ಡಾ. ಎಂ.ಸಿ. ಸುಧಾಕರ್, ಜಿಲ್ಲಾಉಸ್ತುವಾರಿ ಸಚಿವ



ಈ ಭಾಗದ ಜಿಲ್ಲೆಗಳ ಜನರು ಎತ್ತಿನಹೊಳೆ ಯೋಜನೆಯಡಿ ನೀರು ಬರುವುದನ್ನೇ ಕಾದು ಕೂತಿದ್ದಾರೆ. ಹೀಗಾಗಿ ಏನಾದರೂ ಮಾಡಿ ಆದಷ್ಟು ಬೇಗ ಎತ್ತಿನಹೊಳೆ ನೀರು ಈ ಜಿಲ್ಲೆಗಳಿಗೆ ಹರಿಸುವ ಕೆಲಸ ಮಾಡಬೇಕು.
–ಕೆ.ಎಚ್.ಮುನಿಯಪ್ಪ, ಜಿಲ್ಲಾಉಸ್ತುವಾರಿ ಸಚಿವ

ಅಂತರಾಳದಿಂದ.. EDITORIAL

# ಮತದಾರರ ಪಟ್ಟಿಯಲ್ಲಿ ಎಸ್‌ಐಆರ್ ರಕ್ತಪಾತ!

ಮತದಾರರ ವಿಶೇಷ ಪಟ್ಟಿ ಪರಿಷ್ಕರಣೆ ಸಮಾಜದ ಮೇಲೆ ಬೀರುತ್ತಿರುವ ವಿವಿಧ ಒತ್ತಡಗಳು ಇದೀಗ ತೀವ್ರ ಸುದ್ದಿ ಮಾಡುತ್ತಿವೆ. ಕಳೆದ ಗುಜರಾತ್‌ನ ವಡೋದರಾದ ಶಾಲೆಯೊಂದರಲ್ಲಿ ಕರ್ತವ್ಯ ನಿರತರಾಗಿದ್ದ ವೇಳೆ ಬೂತ್ ಮಟ್ಟದ ಅಧಿಕಾರಿಯೊಬ್ಬರು ಕುಸಿದು ಬಿದ್ದು ಮೃತಪಟ್ಟಿದ್ದಾರೆ. ಗುಜರಾತ್‌ನಲ್ಲಿ ನಾಲ್ಕು ದಿನಗಳಲ್ಲಿ ನಾಲ್ವರು ಬಿಎಲ್‌ಒ ಸಿಬ್ಬಂದಿ ಕುಸಿದು ಬಿದ್ದು ಮೃತಪಟ್ಟಿದ್ದಾರೆ ಎಂದು ವರದಿಗಳು ಹೇಳುತ್ತಿವೆ. ಇತ್ತ ಪಶ್ಚಿಮ ಬಂಗಾಳದಲ್ಲಿ ಬೂತ್ ಮಟ್ಟದ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಮಹಿಳೆಯೊಬ್ಬರು ಕೆಲಸದ ಒತ್ತಡಕ್ಕೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಸಂತ್ರಸ್ತೆ ಆತ್ಮಹತ್ಯೆ ಪತ್ರದಲ್ಲಿ ಚುನಾವಣಾ ಆಯೋಗವನ್ನು ದೂಷಿಸಿದ್ದಾರೆ. ಗುಜರಾತ್‌ನ ಗಿರ್ ಜಿಲ್ಲೆಯಲ್ಲಿ ಶಿಕ್ಷಕ ಅರವಿಂದ ಮುಲ್ಕಿ ವಾಧೇರ್ ಎಂಬವರು ಆತ್ಮಹತ್ಯೆ ಮಾಡಿಕೊಂಡಿದ್ದು ನಾನು ಇನ್ನು ಮುಂದೆ ಈ ಎಸ್‌ಐಆರ್ ಕೆಲಸ ಮಾಡಲು ಸಾಧ್ಯವಿಲ್ಲ. ಕಳೆದ ಕೆಲವು ದಿನಗಳಿಂದ ನಾನು ನಿರಂತರವಾಗಿ ದಣಿದಿದ್ದೇನೆ. ಮಾನಸಿಕ ಒತ್ತಡವನ್ನು ಅನುಭವಿಸುತ್ತಿದ್ದೇನೆ. ಆತ್ಮಹತ್ಯೆಯ ಹೊರತು ನನಗೆ ಬೇರೆ ದಾರಿಯಿಲ್ಲ ಎಂದು ಅವರು ಆತ್ಮಹತ್ಯೆ ಪತ್ರದಲ್ಲಿ ಬರೆದಿದ್ದಾರೆ. ಅರವಿಂದ ಅವರು ಜಿಲ್ಲೆಯಲ್ಲಿ ಅತ್ಯುತ್ತಮ ಶಿಕ್ಷಕರೆಂದು ಗುರುತಿಸಲ್ಪಟ್ಟಿದ್ದರು.





**ಮತದಾರರ ವಿಶೇಷ ಪಟ್ಟಿ ಪರಿಷ್ಕರಣೆ ಸಮಾಜದ ಮೇಲೆ ಬೀರುತ್ತಿರುವ ವಿವಿಧ ಒತ್ತಡಗಳು ಇದೀಗ ತೀವ್ರ ಸುದ್ದಿ ಮಾಡುತ್ತಿವೆ. ಕಳೆದ ಗುಜರಾತ್‌ನ ವಡೋದರಾದ ಶಾಲೆಯೊಂದರಲ್ಲಿ ಕರ್ತವ್ಯ ನಿರತರಾಗಿದ್ದ ವೇಳೆ ಬೂತ್ ಮಟ್ಟದ ಅಧಿಕಾರಿಯೊಬ್ಬರು ಕುಸಿದು ಬಿದ್ದು ಮೃತಪಟ್ಟಿದ್ದಾರೆ. ಗುಜರಾತ್‌ನಲ್ಲಿ ನಾಲ್ಕು ದಿನಗಳಲ್ಲಿ ನಾಲ್ವರು ಬಿಎಲ್‌ಒ ಸಿಬ್ಬಂದಿ ಕುಸಿದು ಬಿದ್ದು ಮೃತಪಟ್ಟಿದ್ದಾರೆ ಎಂದು ವರದಿಗಳು ಹೇಳುತ್ತಿವೆ.**

ಅವರ ಆತ್ಮಹತ್ಯೆಗೆ ಗುಜರಾತ್‌ನ ಶಿಕ್ಷಕ ವೃಂದ ಆಘಾತ ವ್ಯಕ್ತಪಡಿಸಿದೆ ಮಾತ್ರವಲ್ಲ, ಶಿಕ್ಷಕರ ಮೇಲೆ ಕೆಲಸದ ಒತ್ತಡಗಳನ್ನು ಹಾಕುವ ಸರಕಾರದ ಕ್ರಮವನ್ನು ಟೀಕಿಸಿದೆ. ಜೈಪುರದಲ್ಲಿ ಶಿಕ್ಷಕ ಮುಕೇಶ್ ಜಂಗಿದ್ ಎಂಬವರು ರೈಲಿನ ಮುಂದೆ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೇಲಧಿಕಾರಿಯಿಂದ ಚುನಾವಣಾ ಕೆಲಸ ಮುಗಿಸಬೇಕು ಎನ್ನುವ ಒತ್ತಡ ಆತ್ಮಹತ್ಯೆಗೆ ಕಾರಣ ಎಂದು ಅವರು ಡೆತ್ ನೋಟ್‌ನಲ್ಲಿ ಬರೆದುಕೊಂಡಿದ್ದಾರೆ. ಇವರ ಆತಂಕ ಒತ್ತಡಗಳಿಗೆ ಕಾರಣಗಳೂ ಇಲ್ಲದಿಲ್ಲ. ಬರೇ ಕೆಲಸದ ಒತ್ತಡ ಮಾತ್ರವಲ್ಲ, ಮೇಲಧಿಕಾರಿಗಳಿಂದ ಬೆದರಿಕೆಗಳನ್ನೂ ಅವರು ಎದುರಿಸುತ್ತಿದ್ದಾರೆ. ಕೊಟ್ಟ ಅವಧಿಯಲ್ಲಿ ಕೆಲಸ ಮಾಡದೇ ಇದ್ದುದಕ್ಕೆ ಮೇಲಧಿಕಾರಿಗಳು ಕಠಿಣ ಕ್ರಮ ಕೈಗೊಳ್ಳುತ್ತಿದ್ದಾರೆ. ಇಷ್ಟೇ ಅಲ್ಲದೆ ರಾಜಕೀಯ ಪಕ್ಷಗಳ ನಾಯಕರೂ ಇವರ ಮೇಲೆ ರಾಜಕೀಯ ಒತ್ತಡಗಳನ್ನು ಹೇರುತ್ತಿದ್ದಾರೆ. ತಮ್ಮ ಮೂಗಿನ ನೇರಕ್ಕೆ ಮತದಾರರ ಪಟ್ಟಿಯನ್ನು ಪರಿಷ್ಕರಣೆ ಮಾಡಲು ಒತ್ತಾಯಿಸುತ್ತಿದ್ದಾರೆ ಎನ್ನುವ ಆರೋಪಗಳಿವೆ. ಉತ್ತರಪ್ರದೇಶದ ನೊಯ್ಡಾ ಆಡಳಿತವು ಮೂರು ಪೊಲೀಸ್ ಠಾಣೆಗಳಲ್ಲಿ 60ಕ್ಕೂ ಹೆಚ್ಚು ಬೂತ್ ಮಟ್ಟದ ಅಧಿಕಾರಿಗಳು ಮತ್ತು ಏಳು ಮೇಲ್ವಿಚಾರಕರ ಮೇಲೆ ಎಫ್‌ಐಆರ್ ದಾಖಲಿಸಿದೆ. ಬಹರಾಯಿಚ್‌ನಲ್ಲಿ ಇಬ್ಬರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ. ಹಲವು ಶಿಕ್ಷಕರು ಕೆಲಸ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಚುನಾವಣಾ ಆಯೋಗವು ಮಾಡಿದ ಎಡವಟ್ಟುಗಳಿಗೆ ಈ ಅಮಾಯಕ ಸಿಬ್ಬಂದಿ ತಮ್ಮ ಜೀವವನ್ನು ತೆರಬೇಕಾದ ಸ್ಥಿತಿ ನಿರ್ಮಾಣವಾಗಿದೆ.ಬಿಎಲ್‌ಒ ಆಗಿ ಕೆಲಸ ಮಾಡುವ ಸಿಬ್ಬಂದಿಯ ಒತ್ತಡ ಒಂದು ವಿಧವಾದರೆ, ಇತ್ತ ಪಶ್ಚಿಮಬಂಗಾಳ ಸೇರಿದಂತೆ ಹಲವೆಡೆ ಮತದಾರರು ಮತದಾರರ ಪಟ್ಟಿಯಿಂದ ಹೊರಬೀಳುವ ಆತಂಕ ಎದುರಿಸುತ್ತಿರುವುದು ಮತ್ತು ಆ ಒತ್ತಡದಿಂದ ಆತ್ಮಹತ್ಯೆ ಮಾಡುತ್ತಿರುವ ಪ್ರಕರಣಗಳೂ ಬೆಳಕಿಗೆ ಬರುತ್ತಿವೆ. ಮತದಾರರ ಪಟ್ಟಿಯಿಂದ ಹೊರ ಬೀಳುವುದು ಎಂದರೆ, ಮತದಾನದ ಹಕ್ಕು ಕಳೆದುಕೊಳ್ಳುವುದು ಮಾತ್ರವಲ್ಲ. ಪರೋಕ್ಷವಾಗಿ ದೇಶದ ಪೌರತ್ವವನ್ನೇ ಕಳೆದುಕೊಳ್ಳುವುದು ಕೂಡ ಆಗಿದೆ. ಮತದಾರರ ಪಟ್ಟಿಯಲ್ಲಿ ಹೆಸರು ಬೀಳದೆ ಇದ್ದರೆ ಅವರು ಹಂತ ಹಂತವಾಗಿ ಸರಕಾರದ ಇತರ ಸವಲತ್ತುಗಳನ್ನೂ ಕಳೆದುಕೊಳ್ಳಲಿದ್ದಾರೆ ಎನ್ನುವ ವದಂತಿಗಳು ವ್ಯಾಪಕವಾಗಿ ಹರಡುತ್ತಿವೆ. ಇದರಲ್ಲಿ ಸತ್ಯ ಇಲ್ಲದೇ ಇಲ್ಲ. ಎಸ್‌ಐಆರ್ ಎನ್ನುವುದು ಎನ್‌ಆರ್‌ಸಿಯ ಇನ್ನೊಂದು ರೂಪ ಎನ್ನುವ ಆರೋಪಗಳನ್ನು ಹಲವು ನಾಯಕರು ಮಾಡಿದ್ದಾರೆ. ಎನ್‌ಆರ್‌ಸಿಯನ್ನು ನೇರವಾಗಿ ಜಾರಿಗೆ ತರಲು ವಿಫಲವಾದ ಕೇಂದ್ರ ಸರಕಾರ ಚುನಾವಣಾ ಆಯೋಗದ ಮೂಲಕ ಮತ ಪರಿಷ್ಕರಣೆಯ ಹೆಸರಿನಲ್ಲಿ ಇದನ್ನು ಜಾರಿಗೊಳಿಸಲು ಮುಂದಾಗಿದೆ. ಸೂಕ್ತ ದಾಖಲೆಗಳನ್ನು ನೀಡಲು ವಿಫಲವಾದರೆ ಅವರು ಈ ದೇಶದ ಪೌರರಲ್ಲ ಎಂದು ಅವರನ್ನು ಚುನಾವಣಾ ಆಯೋಗ ಮತದಾರರ ಪಟ್ಟಿಯಿಂದ ಹೊರಗಿಡಬಹುದಾಗಿದೆ ಅಥವಾ ಇರುವ ಹೆಸರುಗಳನ್ನು ಕಿತ್ತು ಹಾಕಬಹುದಾಗಿದೆ. ಬಿಹಾರದಲ್ಲಿ ಲಕ್ಷಾಂತರ ಮತದಾರರನ್ನು ವಿವಿಧ ನೆಪಗಳನ್ನು ಮುಂದಿಟ್ಟುಕೊಂಡು ಚುನಾವಣಾ ಪ್ರಕ್ರಿಯೆಯಿಂದ ಆಯೋಗವು ಹೊರಗಿಟ್ಟಿದೆ. ಎಲ್ಲಿ ನಾವು ಮತದಾರರ ಪಟ್ಟಿಯಿಂದ ಕಿತ್ತೆಸೆಯಲ್ಪಟ್ಟು ಜೈಲು ಸೇರಬೇಕಾಗಬಹುದೋ ಎಂಬ ಆತಂಕ, ಒತ್ತಡ ಬಡವರ್ಗವನ್ನು ಕಾಡುತ್ತಿದೆ. ಈ ಒತ್ತಡದಿಂದ ಈಗಾಗಲೇ ಹಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.ಇದೇ ಸಂದರ್ಭದಲ್ಲಿ ಎಸ್‌ಐಆರ್‌ನಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ಸೇರಿದ ವ್ಯಕ್ತಿಗಳನ್ನು ಸಹಾಯಕರಾಗಿ ನೇಮಕ ಮಾಡುತ್ತಿರುವ ಆರೋಪಗಳೂ ಕೇಳಿ ಬರುತ್ತಿವೆ. ಮಧ್ಯಪ್ರದೇಶದ ದಾಟಿಯಾ ಜಿಲ್ಲೆಯಲ್ಲಿ ರಾಜಕೀಯ ಪಕ್ಷವೊಂದರ ಜೊತೆಗೆ ನಿಕಟ ಸಂಬಂಧವಿರುವ ವ್ಯಕ್ತಿಗಳನ್ನು ಬೂತ್ ಮಟ್ಟದ ಅಧಿಕಾರಿಯ ಸಹಾಯಕರಾಗಿ ತಪ್ಪಾಗಿ ಸೇರಿಸಲ್ಪಟ್ಟಿದೆ ಎಂದು ಜಿಲ್ಲಾಧಿಕಾರಿಯೇ ಒಪ್ಪಿಕೊಂಡಿದ್ದಾರೆ.

---

# ರಾಮಾಯಣ



## ಶ್ರೀರಾಮನು ಸೀತಾವಿಯೋಗದಿಂದ ದುಃಖಿಸಿದ್ದು

• ಹಿಂದಿನ ಸಂಚಿಕೆಯಿಂದ 120 ನೆಯ ಅಧ್ಯಾಯ

ನೀನು ಈ ಪರ್ಣಶಾಲೆಯಲ್ಲಿ ಯಾವ ಮೃಗಶಿಶುಗಳೊಡನೆ ವಿನೋದವಾಗಿ ಆಡಿಕೊಂಡಿದ್ದೆಯೋ ಅವು ಈಗ ನಿನ್ನನ್ನು ಕಾಣದೆ ಕಣ್ಣೀರು ಬಿಡುತ್ತ ನಿನ್ನನ್ನೇ ಸ್ಮರಿಸಿಕೊಳ್ಳುತ್ತಿದೆ. ಲಕ್ಷ್ಮಣ, ಸೀತಾದೇವಿಯನ್ನು ಕಾಣದೆ ನಾನು ಜೀವದಿಂದಿರಲಾರೆನು, ಆ ದೇವಿಯ ವಿರಹದಿಂದ ಮೃತನಾಗಿ ಪರಲೋಕಕ್ಕೆ ಹೋದರೆ ನಮ್ಮ ತಂದೆ ದಶರಥರಾಯನು ನನ್ನನ್ನು ಕುರಿತು ಎಲೈ ಮಾಡಿದ ಪ್ರತಿಜ್ಞೆಯನ್ನು ತಪ್ಪಿದವನೆ. ನೀನು ಅಸತ್ಯವನ್ನು ನುಡಿದೆ. ಪ್ರತಿಜ್ಞೆಯ ಅವಧಿಯು ಮುಗಿಯದೆ ನನ್ನ ಹತ್ತಿರಕ್ಕೆ ಬಂದೆಯಾ ಎಂದು ನುಡಿಯುವನು ಸೀತೆ, ನೀನು ಶೋಕಪರವಶನಾಗಿ ಭಗ್ನ ಮನೋರಥನಾಗಿರುವ ನನ್ನನ್ನು, ಕೀರ್ತಿಯು ಕುಟಿಲನನ್ನು ಬಿಡುವಂತೆ ಬಿಟ್ಟು ಹೋಗುವುದುಚಿತವಲ್ಲ. ನನ್ನನ್ನು ಬಿಟ್ಟು ಎಲ್ಲಿಗೆ ಹೋದೆ ಇನ್ನು ನಾನು ಜೀವದಿಂದಿರಲಾರೆನು ಎಂದು ವಿಲಾಪಿಸಿದನು. ಈ ಪ್ರಕಾರದಲ್ಲಿ ಸೀತಾದೇವಿಯನ್ನು ಕಾಣದೆ ಬಹಳವಾಗಿ ವಿಲಾಪಿಸುತ್ತ ಮಹತ್ತಾದ ಕೆಸರಿನಲ್ಲಿ ಸಿಕ್ಕಿ ಬಿದ್ದ ಗಜರಾಜನಂತಿದ್ದ ಶ್ರೀರಾಮನನ್ನು ಕಂಡು ಲಕ್ಷ್ಮಣನು ಹೀಗೆಂದನು : ಶ್ರೀರಾಮ, ಮಹಾತ್ಮನಾದ ನೀನು ದುಃಖಪಡುವುದುಚಿತವಲ್ಲ. ಇನ್ನು ನಾವಿಬ್ಬರೂ ಸೀತಾದೇವಿಯನ್ನು ನಾನಾದಿಕ್ಕುಗಳಲ್ಲಿಯೂ ಪರ್ವತಗಳಲ್ಲಿಯೂ ಹುಡುಕಿನೋಡೋಣ. ನೀನು ವ್ಯಥೆಯನ್ನು ಬಿಡು. ಇಲ್ಲಿ ಅನೇಕ ಗುಹೆಗಳಿವೆ. ದನಸಂಚಾರಪ್ರಿಯಳಾದ ಸೀತಾದೇವಿಯು ಅಲ್ಲೆಲ್ಲಾದರೂ ಇರಬಹುದು. ಆಕೆಯು ಕಮಲಗಳನ್ನು ತರುವುದಕ್ಕಾದರೂ ಸ್ನಾನಾರ್ಥವಾಗಿಯಾದರೂ ನದಿಗೆ ಹೋಗಿರಬಹುದು. ಇಲ್ಲವೇ ನಮ್ಮನ್ನು ಹಾಸ್ಯಮಾಡಬೇಕೆಂದು ಎಲ್ಲಾದರೂ ಅವಿತುಕೊಂಡಿರಬಹುದು. ನಾವು ಅಲ್ಲೆಲ್ಲಾ ಹುಡುಕಿನೋಡೋಣ ಬಾ ಎಂದು ಹೇಳಿದನು.

ಆ ಬಳಿಕ ಶ್ರೀರಾಮನು ಲಕ್ಷ್ಮಣನನ್ನು ಕೂಡಿಕೊಂಡು ಪರ್ವತಗಳು ವನಗಳು ಕೊಳಗಳು ನದಿಗಳು ಗುಹೆಗಳು ಮೊದಲಾದ ನಾನಾಸ್ಥಳಗಳಲ್ಲಿಯೂ ಹುಡುಕಿ ನೋಡಿ ಸೀತಾದೇವಿಯನ್ನು ಕಾಣದೆ ಕಂಗೆಟ್ಟು ಲಕ್ಷ್ಮಣನನ್ನು ಕುರಿತು ಲಕ್ಷ್ಮಣ, ಶೋಭನಾಂಗಿಯಾದ ಜಾನಕಿಯು ಎಲ್ಲಿಯೂ ಕಾಣಲಿಲ್ಲ. ಇನ್ನು ಮುಂದೆ ಏನು ಮಾಡೋಣ ಎಂದು ಕೇಳಿದನು. ಲಕ್ಷ್ಮಣನು ಅಣ್ಣ, ನಿನ್ನ ಮನಸ್ಸಿನಲ್ಲಿ ಖೇದವೇಕೆ ದಂಡಕಾರಣ್ಯವೆಲ್ಲವನ್ನೂ ಹುಡುಕಿ ನೋಡೋಣ. ಆದಿಪುರುಷನಾದ ನಾರಾಯಣನು ವಾಮನಾವತಾರದಲ್ಲಿ ಬಲಿಚಕ್ರವರ್ತಿಯನ್ನು ಅಡಗಿಸಿ ಭೂಮಿಯನ್ನು ಪಡೆದಂತೆ ಸೀತಾದೇವಿಯನ್ನು ಪಡೆಯುವೆ ಎಂದು ನುಡಿದನು. ಶ್ರೀರಾಮನು ಲಕ್ಷ್ಮಣ ಮತ್ತು ಸಮಸ್ತವನಗಳನ್ನೂ ನದಿಗಳನ್ನೂ ವಿಕಸಿತವಾದ ಕಮಲಗಳುಳ್ಳ, ಸರೋವರಗಳನ್ನೂ ಅರಸಿಯೂ ನನ್ನ ಪ್ರಾಣಗಳಿಗೆ ಸಮಾನಳಾದ ಜಾನಕಿಯನ್ನು ಎಲ್ಲಿಯೂ ಕಾಣಲಿಲ್ಲ ಎಂದು ನುಡಿದು ವಿರಹಶೋಕದಿಂದ ಕಂಗೆಟ್ಟು ಚೈತನ್ಯಗುಂದಿ ಮಾತನಾಡದೆ ದುಃಖಾಕ್ರಾಂತನಾದನು. ಪ್ರಿಯಬಾಂಧವನಾದ ಲಕ್ಷ್ಮಣನು ವಿನಯದಿಂದ ಕೈಮುಗಿದುಕೊಂಡು ಅನೇಕ ಬಗೆಯಾಗಿ ಸಂತವಿಡುತ್ತಿದ್ದರೂ ಕೇಳದೆ ಶ್ರೀರಾಮನು ಸೀತಾದೇವಿಯನ್ನು ನೆನೆದು ಪುನಃಪುನಃ ಹಂಬಲಿಸುತ್ತಿದ್ದನು.

**ಮುಂದುವರಿಯುವುದು...**

---



# ದಿನಾ 2 ಖರ್ಜೂರ ಹೃದಯದ ಸಮಸ್ಯೆ ದೂರ


ಹೆಚ್ಚಾಗಿ ಮರುಭೂಮಿಯಲ್ಲಿ ಬೆಳೆಯುವಂತಹ ಖರ್ಜೂರ ಮನುಷ್ಯನ ಆರೋಗ್ಯಕ್ಕೆ ತುಂಬಾನೇ ಒಳ್ಳೆಯದು ಎಂದು ತಜ್ಞರು ಕೂಡ ಸಲಹೆ ನೀಡುತ್ತಾರೆ. ಇನ್ನೂ ಖರ್ಜೂರಗಳನ್ನು ಕೂಡ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಇವುಗಳಲ್ಲಿ ತುಂಬಾನೇ ಮೃದುವಾಗಿರುವ ಅರೆ ಒಣಗಿರುವ ಮತ್ತು ಒಣ ಖರ್ಜೂರ ಡ್ರೈ ಫ್ರೂಟ್ಸ್ ಜಾತಿಗೆ ಸೇರಿರುವ ಎಂದು ವಿಂಗಡಿಸಲಾಗಿದೆ. ಸಾಮಾನ್ಯವಾಗಿ ಮಾರುಕಟ್ಟೆಯಲ್ಲೂ ಕೂಡ ನಮಗೆ ಇದೇ ರೂಪಗಳಲ್ಲಿ ನಮಗೆ ಸಿಗುತ್ತವೆ. ನಮ್ಮ ಆಯ್ಕೆಯ ಪ್ರಕಾರ ನಾವು ಖರೀದಿಸಿಕೊಳ್ಳಬಹುದು. ಆದರೆ ಒಂದಂತೂ ಸತ್ಯ ಖರ್ಜೂರಗಳ ವಿಂಗಡನೆಯ ವಿಚಾರದಲ್ಲಿ ನೋಡಿದರೆ, ಎಲ್ಲಾ ಬಗೆಯ ಖರ್ಜೂರಗಳು ಕೂಡ, ತನ್ನಲ್ಲಿ ದುಪ್ಪಟ್ಟು ಪ್ರಯೋಜನಗಳನ್ನೇ ಒಳಗೊಂಡಿದೆ

**ಖರ್ಜೂರಗಳಲ್ಲಿ ಅಡಗಿರುವ ಪೋಷಕಾಂಶಗಳೇನು?**
ಮಾರುಕಟ್ಟೆಯಲ್ಲಿ ಸಿಗುವ ಎಲ್ಲಾ ವಿಧದ ಖರ್ಜೂರವು ಮನುಷ್ಯರ ದೇಹದ ಆರೋಗ್ಯಕ್ಕೆ ಬಹಳ ಒಳ್ಳೆಯದು ಎಂದು ಹೇಳಲಾಗುತ್ತದೆ. ಪ್ರಮುಖವಾಗಿ ಚಳಿಗಾಲದಲ್ಲಿ ದಿನಾ ಒಂದೆರಡು ಖರ್ಜೂರಗಳನ್ನು ಸೇವನೆ ಮಾಡುವ ಅಭ್ಯಾಸ ಮಾಡಿ ಕೊಂಡರೆ, ದೇಹವನ್ನು ಬೆಚ್ಚಗಾಗಿರಿಸಲು ಹಾಗೂ ಸೋಂಕಿನಿಂದ ದೂರವಿಡಲು ನೆರವಾಗುತ್ತದೆ. ಇನ್ನೂ ಮುಖ್ಯವಾಗಿ ಈ ಹಣ್ಣಿನಲ್ಲಿ ಅಗಾಧ ಪ್ರಮಾಣದ ನಾರಿನಾಂಶ, ವಿವಿಧ ಬಗೆಯ ವಿಟಮಿನ್ಸ್, ಕಬ್ಬಿಣದ ಅಂಶ, ಪೊಟ್ಯಾಶಿಯಮ್ ಹಾಗೂ ಮೆಗ್ನೀಷಿಯಂ ಅಂಶಗಳು ಯಥೇಚ್ಛವಾಗಿ ಕಂಡು ಬರುತ್ತದೆ.

ಹೀಗಾಗಿ ಚಳಿಗಾಲದಲ್ಲಿ ಖರ್ಜೂರಗಳನ್ನು ದೈನಂದಿನ ಆಹಾರ ಪದ್ಧತಿಯಲ್ಲಿ ಸೇರಿಸಿಕೊಂಡರೆ ಸಾಕಷ್ಟು ಲಾಭ ಪಡೆದುಕೊಳ್ಳಬಹುದು. ಪ್ರಸ್ತುತ ಇಂದಿನ ಲೇಖನದಲ್ಲಿ ದಿನಕ್ಕೆರಡು ಖರ್ಜೂರಗಳನ್ನು ತಿನ್ನುವುದರ ಪ್ರಯೋಜನಗಳ ಬಗ್ಗೆ ಡಾ. ಸ್ಯಾಮ್ ವ್ಯಾಟ್ಸ್ ಅವರು ತಮ್ಮ ಇನ್‌ಸ್ಟಾಗ್ರಾಮ್ ವಿಡಿಯೋದಲ್ಲಿ ಹಂಚಿಕೊಂಡಿರುವ ಮಾಹಿತಿಯನ್ನು ನೋಡೋಣ

**ಖರ್ಜೂರ ಹಣ್ಣಿನ ಪ್ರಯೋಜನಗಳು**

**ನೈಸರ್ಗಿಕ ಶಕ್ತಿಯ ಮೂಲ:** ಖರ್ಜೂರವನ್ನು ಶಕ್ತಿಯ ಶಕ್ತಿ ಕೇಂದ್ರ ಎಂದು ಕರೆಯುವುದು ತಪ್ಪಲ್ಲ. ಅವು ಗ್ಲೂಕೋಸ್, ಫ್ರಕ್ಟೋಸ್ ಮತ್ತು ಸುಕ್ರೋಸ್‌ನಂತಹ ನೈಸರ್ಗಿಕ ಸಕ್ಕರೆಗಳಲ್ಲಿ ಸಮೃದ್ಧವಾಗಿವೆ. ಈ ಸಕ್ಕರೆಯಾಂಶಗಳು ದೇಹಕ್ಕೆ ತ್ವರಿತ ಶಕ್ತಿಯನ್ನು ಒದಗಿಸುತ್ತವೆ. ಉಪಾಹಾರಕ್ಕಾಗಿ ಅಥವಾ ಮಧ್ಯಾಹ್ನದ



ತಿಂಡಿಯಾಗಿ 2–3 ಖರ್ಜೂರವನ್ನು ತಿನ್ನುವುದರಿಂದ ದಿನವಿಡೀ ಸಕ್ರಿಯ ಮತ್ತು ಚೈತನ್ಯಶೀಲರಾಗಿರಲು ಸಹಾಯ ಮಾಡುತ್ತದೆ. ತ್ವರಿತ ಶಕ್ತಿ ವರ್ಧನೆಯ ಅಗತ್ಯವಿರುವ ಕ್ರೀಡಾಪಟುಗಳು ಮತ್ತು ಜಿಮ್‌ಗೆ ಹೋಗುವವರಿಗೆ ಇದು ವಿಶೇಷವಾಗಿ ಪ್ರಯೋಜನಕಾರಿಯಾಗಿದೆ.

**ಖರ್ಜೂರ ತಿಂದ್ರೆ, ಮಲಬದ್ಧತೆ ಸಮಸ್ಯೆ ನಿವಾರಣೆ ಆಗುತ್ತಾ:** ಇಂದಿನ ವೇಗದ ಜೀವನದಲ್ಲಿ ಜೀರ್ಣಕಾರಿ ಸಮಸ್ಯೆಗಳು ಸಾಮಾನ್ಯವಾಗಿದೆ. ಖರ್ಜೂರವು ಆಹಾರದ ನಾರಿನಂಶದಿಂದ ಸಮೃದ್ಧವಾಗಿದೆ. ಈ ನಾರು ಮಲವನ್ನು ಮೃದುಗೊಳಿಸುತ್ತದೆ, ಮಲಬದ್ಧತೆಯನ್ನು ನಿವಾರಿಸುತ್ತದೆ ಮತ್ತು ಕರುಳನ್ನು ಶುದ್ಧೀಕರಿಸಲು ಸಹಾಯ ಮಾಡುತ್ತದೆ.

ಖರ್ಜೂರವನ್ನು ನಿಯಮಿತವಾಗಿ ತಿನ್ನುವುದು ಆರೋಗ್ಯಕರ ಜೀರ್ಣಕ್ರಿಯೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ ಮತ್ತು ಅಜೀರ್ಣ ಮತ್ತು ಗ್ಯಾಸ್ಟ್ರಿಕ್ ನಂತಹ ಹೊಟ್ಟೆಯ ಸಮಸ್ಯೆಗಳನ್ನು ಕಡಿಮೆ ಮಾಡುತ್ತದೆ. ಅವು ಕರುಳಿನಲ್ಲಿರುವ ಉತ್ತಮ ಬ್ಯಾಕ್ಟೀರಿಯಾವನ್ನು ಸಹ ಪೋಷಿಸುತ್ತವೆ.

**ಹೃದಯದ ಆರೋಗ್ಯಕ್ಕೆ ಖರ್ಜೂರ ಒಳ್ಳೆಯದಾ? :** ಹೃದಯವು ನಮ್ಮ ಪ್ರಮುಖ ಅಂಗಗಳಲ್ಲಿ ಒಂದಾಗಿದೆ ಖರ್ಜೂರವು ಅದರ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಖರ್ಜೂರದಲ್ಲಿರುವ ಪೊಟ್ಯಾಸಿಯಮ್ ಅಂಶವು ರಕ್ತದೊತ್ತಡವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಹೆಚ್ಚುವರಿಯಾಗಿ, ಫ್ಲೇವನಾಯ್ಡ್‌ಗಳಂತಹ ಉತ್ಕರ್ಷಣ ನಿರೋಧಕಗಳು ಕೆಟ್ಟ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಲು ಮತ್ತು ಉತ್ತಮ ಕೊಲೆಸ್ಟ್ರಾಲ್ ಮಟ್ಟವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

ಇದು ಅಪಧಮನಿಗಳಲ್ಲಿ ಪ್ಲೇಕ್ ನಿರ್ಮಾಣದ ಅಪಾಯವನ್ನು ಕಡಿಮೆ ಮಾಡುತ್ತದೆ, ಹೃದಯಾಘಾತದ ಅಪಾಯವನ್ನು ಕಡಿಮೆ ಮಾಡುತ್ತದೆ.

ಹೃದಯದ ಆರೋಗ್ಯವನ್ನು ಬೆಂಬಲಿಸುವಲ್ಲಿ ಖರ್ಜೂರ ಅದ್ಭುತವಾಗಿ ಕಾರ್ಯ ನಿರ್ವಹಿಸುತ್ತದೆ. ಇದಕ್ಕೆ ಪ್ರಮುಖ ಕಾರಣ ಈ ಹಣ್ಣಿನಲ್ಲಿ ಕಂಡುಬರುವ ಪೊಟ್ಯಾಸಿಯಮ್ ಉತ್ಕರ್ಷಣ ನಿರೋಧಕಗಳು ರಕ್ತದೊತ್ತಡವನ್ನು ಕಡಿಮೆ ಮಾಡುತ್ತದೆ, ಅನೇಕ ರೀತಿಯ ಹೃದ್ರೋಗಗಳ ಅಪಾಯಗಳನ್ನು ಕಡಿಮೆ ಮಾಡುತ್ತದೆ ಎಂದು ಆಯುರ್ವೇದದ ತರಬೇತಿ ಪಡೆದ ಕ್ಲಿನಿಕಲ್ ಪ್ರಾಕ್ಟೀಷನರ್ ಡಾ. ಸ್ಯಾಮ್ ವ್ಯಾಟ್ಸ್ ಅವರು ತಮ್ಮ ಇನ್‌ಸ್ಟಾಗ್ರಾಮ್ ವಿಡಿಯೋದಲ್ಲಿ ಮಾಹಿತಿಯನ್ನು ಹಂಚಿಕೊಂಡಿದ್ದಾರೆ

**ಮೂಳೆಗಳ ಆರೋಗ್ಯಕ್ಕೆ ಖರ್ಜೂರ ಹಣ್ಣು ಒಳ್ಳೆಯದಾ?**

**ವಯಸ್ಸಾಗುತ್ತಿದ್ದಂತೆ, ಮೂಳೆ ದುರ್ಬಲಗೊಳ್ಳುವುದು 1ಪ್ರಮುಖ ಸಮಸ್ಯೆಯಾಗುತ್ತದೆ. ಖರ್ಜೂರವು ಮೂಳೆಯ ಆರೋಗ್ಯಕ್ಕೆ ಅಗತ್ಯವಾದ ಕ್ಯಾಲ್ಸಿಯಂ, ಮೆಗ್ನೀಸಿಯಮ್, ತಾಮ್ರ ಸೆಲೆನಿಯಮ್‌ನಂತಹ ಖನಿಜಗಳನ್ನು ಹೊಂದಿರುತ್ತದೆ. ಕ್ಯಾಲ್ಸಿಯಂ ಮೂಳೆಗಳನ್ನು ಬಲಪಡಿಸುತ್ತದೆ, ಆದರೆ ಮೆಗ್ನೀಸಿಯಮ್ ಮೂಳೆ ಸಾಂದ್ರತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಪ್ರತಿದಿನ ಖರ್ಜೂರ ತಿನ್ನುವುದರಿಂದ ಆಸ್ಟಿಯೊಪೊರೋಸಿಸ್‌ನಂತಹ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡಬಹುದು.**

---

# ಮನೆಯಲ್ಲಿಯೇ ಡಾಬಾ ಸ್ಟೈಲ್ ಎಗ್ ಪಾಲಕ್ ಕರಿ ಹೀಗೆ ಮಾಡಿ!

15 ನಿಮಿಷದಲ್ಲಿ ಮಾಡಿ ನೋಡಿ ಎಗ್ ಪಾಲಕ್ ಕರಿ. ಚಳಿಗಾಲಕ್ಕೆ ಸೂಪರ್ ಹೆಲ್ದಿ ಡಿಶ್, ಇದರ ರುಚಿಗೆ ಅತಿಥಿಗಳೂ ಮಾರು ಹೋಗುತ್ತಾರೆ. ಚಳಿಗಾಲ ಬರುತ್ತಿದ್ದಂತೆ ಮಾರುಕಟ್ಟೆಯಲ್ಲಿ ಹಸಿರು ಸೊಪ್ಪುಗಳ ಸಮೃದ್ಧಿ ಹೆಚ್ಚಾಗುತ್ತದೆ. ಅದರಲ್ಲಿ ಪಾಲಕ್ ಸೊಪ್ಪಿಗೆ ವಿಶೇಷ ಸ್ಥಾನವಿದೆ. ಪಾಲಕ್ ತನ್ನದೇ ಆದ ರುಚಿ ಮತ್ತು ಆರೋಗ್ಯಕರ ಗುಣಗಳಿಂದ ಮನೆಮಾತಾಗಿದೆ. ಈ ಪಾಲಕ್‌ಗೆ ಮೊಟ್ಟೆಯ ಪ್ರೊಟೀನ್ ಸೇರಿಸಿದಾಗ, ಚಳಿಗಾಲಕ್ಕೆ ಸೂಕ್ತವಾದ ವಿಶಿಷ್ಟವಾದ ಎಗ್ ಪಾಲಕ್ ಕರಿ ಸಿದ್ಧವಾಗುತ್ತದೆ. ಈ ಕರಿ ಕೇವಲ ದೇಹಕ್ಕೆ ಉಷ್ಣತೆ ನೀಡುವುದಲ್ಲದೆ, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಪಾಲಕ್‌ನ ನೈಸರ್ಗಿಕ ಹಸಿರು ಬಣ್ಣ, ಪರಿಮಳಯುಕ್ತ ಮಸಾಲೆಗಳು ಮತ್ತು ಬೇಯಿಸಿದ ಮೊಟ್ಟೆಯ ವಿಶಿಷ್ಟ ರುಚಿ ಸೇರಿ, ಈ ಖಾದ್ಯವನ್ನು ಎಲ್ಲರ ನೆಚ್ಚಿನ ಅಡುಗೆಯನ್ನಾಗಿ ಮಾಡುತ್ತದೆ. ಮಕ್ಕಳು ಹಾಗೂ ಹಿರಿಯರು ಸಹ ಇದನ್ನು ಇಷ್ಟಪಡುತ್ತಾರೆ. ಚಳಿಗಾಲದ ಸಂಜೆಗಳಲ್ಲಿ ಎಗ್ ಪಾಲಕ್ ಕರಿಯನ್ನು ರೊಟ್ಟಿ, ಚಪಾತಿ ಅಥವಾ ಜೀರಾ ರೈಸ್‌ನೊಂದಿಗೆ ಸವಿಯುವುದು ಉತ್ತಮ. ಇದು ಊಟದ ರುಚಿಯನ್ನು ಹೆಚ್ಚಿಸುವುದರ ಜೊತೆಗೆ ಆರೋಗ್ಯಕರ ಭೋಜನವನ್ನೂ ಒದಗಿಸುತ್ತದೆ. ಪೌಷ್ಟಿಕಾಂಶ ಭರಿತ ಈ ಖಾದ್ಯ ಚಳಿಗಾಲದ ಮೆನುವಿಗೆ ಪರಿಪೂರ್ಣ ಸೇರ್ಪಡೆಯಾಗಿದೆ. ಇದನ್ನು ತಯಾರಿಸುವ ಸುಲಭ ವಿಧಾನವನ್ನು ಈ ಲೇಖನದಲ್ಲಿ ತಿಳಿಸಲಾಗಿದೆ.

**ಎಗ್ ಪಾಲಕ್ ಕರಿ ಲಾಭಗಳೇನು :** ಚಳಿಗಾಲದಲ್ಲಿ ಪಾಲಕ್ ತಾಜಾ ಮತ್ತು ಪೋಷಕಾಂಶಗಳಿಂದ ಸಮೃದ್ಧವಾಗಿರುತ್ತದೆ. ಇದರಲ್ಲಿ ಕಬ್ಬಿಣ, ನಾರು ಮತ್ತು ವಿಟಮಿನ್–ಇ ಸಮೃದ್ಧವಾಗಿದೆ. ಇದು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಮೊಟ್ಟೆ ಪ್ರೋಟೀನ್ ಒದಗಿಸುತ್ತದೆ. ಆದ್ದರಿಂದ, ಇವೆರಡೂ ಸೇರಿ ಈ ಕರಿ ಚಳಿಗಾಲದಲ್ಲಿ ಅತ್ಯಂತ ಆರೋಗ್ಯಕರ ಮತ್ತು ಶಕ್ತಿ ವರ್ಧಕವಾಗುತ್ತದೆ.

**ಎಗ್ ಪಾಲಕ್ ಕರಿ ತಯಾರಿಸಲು ಅಗತ್ಯವಿರುವ ಪದಾರ್ಥಗಳು**

- ಪಾಲಕ್
- ಬೇಯಿಸಿದ ಮೊಟ್ಟೆ
- ಈರುಳ್ಳಿ
- ಟೊಮೆಟೊ
- ಶುಂಠಿ–ಬೆಳ್ಳುಳ್ಳಿ ಪೇಸ್ಟ್
- ಹಸಿ ಮೆಣಸು
- ಅರಿಶಿನ
- ಕೆಂಪು ಮೆಣಸು
- ಧನಿಯಾ ಪುಡಿ
- ಗರಂ ಮಸಾಲಾ
- ಎಣ್ಣೆ
- ಉಪ್ಪು
- ಕ್ರೀಮ್ / ಮೊಸರು



**ಎಗ್ ಪಾಲಕ್ ಕರಿ ತಯಾರಿಸುವ ವಿಧಾನ:** ಮೊದಲಿಗೆ ಕರಿಗಾಗಿ ಪಾಲಕ್ ಸಿದ್ಧಪಡಿಸಿಕೊಳ್ಳಿ. ಪಾಲಕ್ ಅನ್ನು ಚೆನ್ನಾಗಿ ತೊಳೆಯಿರಿ. ಕುದಿಯುವ ನೀರಿನಲ್ಲಿ 1 ರಿಂದ 2 ನಿಮಿಷಗಳ ಕಾಲ ಬ್ಲಾಂಚ್ ಮಾಡಿ. ನಂತರ ತಕ್ಷಣ ತಣ್ಣೀರಿನಲ್ಲಿ ಹಾಕಿ, ಅದರ ಹಸಿರು ಬಣ್ಣವನ್ನು ಉಳಿಸಿಕೊಳ್ಳಿ. ಈಗ ಪಾಲಕ್ ಅನ್ನು ಮಿಕ್ಸರ್‌ನಲ್ಲಿ ಒರಟಾಗಿ ರುಬ್ಬಿಕೊಳ್ಳಿ. – ಈಗ ಒಂದು ಬಾಣಲೆಯಲ್ಲಿ ಎಣ್ಣೆಯನ್ನು ಬಿಸಿ ಮಾಡಿ. ಈರುಳ್ಳಿಯನ್ನು ಹಾಕಿ, ಚಿನ್ನದ ಬಣ್ಣ ಬರುವವರೆಗೆ ಹುರಿಯಿರಿ. ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಮತ್ತು ಹಸಿ ಮೆಣಸು ಸೇರಿಸಿ. ನಂತರ ಟೊಮೆಟೊ ಹಾಕಿ ಮೃದುವಾಗುವವರೆಗೆ ಬೇಯಿಸಿ. ಇದಕ್ಕೆ ಅರಿಶಿನ, ಕೆಂಪು ಮೆಣಸು, ಧನಿಯಾ ಪುಡಿ, ಉಪ್ಪು ಸೇರಿಸಿ. ಈಗ ಪಾಲಕ್ ಪ್ಯೂರಿ ಸೇರಿಸಿ 3 ರಿಂದ 4 ನಿಮಿಷ ಬೇಯಿಸಿ. ಬೇಯಿಸಿದ ಮೊಟ್ಟೆಗಳನ್ನು ಕತ್ತರಿಸಿ ಕರಿಗೆ ಸೇರಿಸಿ. ಮೇಲೆ ಕ್ರೀಮ್ ಅಥವಾ ಮೊಸರು ಹಾಕಿ, 2 ನಿಮಿಷ ನಿಧಾನ ಉರಿಯಲ್ಲಿ ಬೇಯಿಸಿ. ಇಡೀ ಎಗ್ ಪಾಲಕ್ ಕರಿ 15 ರಿಂದ 20 ನಿಮಿಷಗಳಲ್ಲಿ ಸುಲಭವಾಗಿ ಸಿದ್ಧವಾಗುತ್ತದೆ. ಎಗ್ ಪಾಲಕ್ ಕರಿಯನ್ನು ರೊಟ್ಟಿ, ತಂದೂರಿ ರೊಟ್ಟಿ, ಜೀರಾ ರೈಸ್, ಬ್ರೌನ್ ರೈಸ್, ರಾಗಿ ಅಥವಾ ಜೋಳದ ರೊಟ್ಟಿಯೊಂದಿಗೆ ಬಡಿಸಬಹುದು. ನೀವು ಈ ಕರಿಯಲ್ಲಿ ಮೊಟ್ಟೆಗಳ ಬದಲಿಗೆ ಪನೀರ್, ಟೋಫು ಅಥವಾ ಬೇಯಿಸಿದ ಆಲೂಗಡ್ಡೆಯನ್ನು ಸಹ ಬಳಸಬಹುದು.

---

# ಚಳಿಗಾಲದಲ್ಲಿ ನಿಂಬೆ ಪಾನೀಯ ಕುಡಿಯಬಹುದಾ?




ನಿಂಬೆಹಣ್ಣಿನಲ್ಲಿ ವಿಟಮಿನ್ ಸಿ ಪ್ರಮಾಣ ಹೆಚ್ಚಾಗಿ ಸಿಗುವುದರಿಂದ, ಉಗುರು ಬೆಚ್ಚಗಿನ ನೀರಿಗೆ, ಅರ್ಧ ನಿಂಬೆ ರಸ ಹಿಂಡಿ ಕುಡಿಯುವ ಅಭ್ಯಾಸ ಇಟ್ಟುಕೊಂಡರೆ, ಆರೋಗ್ಯಕ್ಕೆ ಬಹಳ ಒಳ್ಳೆಯದು ಎಂದು ತಜ್ಞರು ಕೂಡ ಸಲಹೆ ನೀಡುತ್ತಾರೆ. ಆದರೆ ಚಳಿಗಾಲದಲ್ಲಿ ಈ ಪಾನೀಯ ಕುಡಿಯಬಹುದಾ? ನಿಂಬೆಹಣ್ಣು ಅಥವಾ ನಿಂಬೆಹಣ್ಣಿನ ಪಾನೀಯ ಎಂದಾಗ ನಮಗೆಲ್ಲಾ ತಕ್ಷಣ ಕೊರೋನಾ ಸಂದರ್ಭದ ದಿನಗಳು ಹಾಗೆಯೇ ಕಣ್ಣಾ ಮುಂದೆ ಹಾದು ಹೋಗುತ್ತದೆ. ಏಕೆಂದರೆ ಆ ಸಂದರ್ಭದಲ್ಲಿ ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವಲ್ಲಿ ನೆರವಿಗೆ ಬಂದಿದ್ದೇ ವಿಟಮಿನ್ ಸಿ ಪ್ರಮಾಣ ಹೆಚ್ಚಾಗಿರುವ ಈ ನಿಂಬೆಹಣ್ಣು ಎಂಬುದನ್ನು ಮರೆಯುವ ಹಾಗಿಲ್ಲ ಹಾಗಂತ ಈ ಹಣ್ಣಿನ ಪ್ರಯೋಜನಗಳು ಇಷ್ಟಕ್ಕೆ ಮಾತ್ರ ನಿಂತಿಲ್ಲ, ಪ್ರಮುಖವಾಗಿ ಈ ಹಣ್ಣಿನಲ್ಲಿ ಕಂಡು ಬರುವ ಆಂಟಿ ಆಕ್ಸಿಡೆಂಟ್ ಮತ್ತು ಎಲೆಕ್ಟ್ರೋಲೈಟ್ ಅಂಶಗಳು ಆರೋಗ್ಯವನ್ನು ಕಾಪಾಡುವಲ್ಲಿ ನೆರವಿಗೆ ಬರುತ್ತದೆ

**ಚಳಿಗಾಲದಲ್ಲಿ ನಿಂಬೆ ಪಾನೀಯ ಕುಡಿಯಬಹುದಾ:** ಇನ್ನು ಬೇಸಿಗೆ ದಿನಗಳಲ್ಲಿ ಎದುರಾಗುವ ಸುಸ್ತು, ಆಯಾಸದ ಸಂದರ್ಭದಲ್ಲಿ ಒಂದು ಲೋಟ ನಿಂಬೆ ಪಾನೀಯ ಕುಡಿಯುವುದು ಒಳ್ಳೆಯದು ಎಂದು ಹೇಳುತ್ತಾರೆ. ಚಳಿಗಾಲದಲ್ಲಿಯೂ ಸಹ ನಿಂಬೆ ನೀರನ್ನು ಕುಡಿಯುವುದು ದೇಹಕ್ಕೆ ಪ್ರಯೋಜನ ಕಾರಿ ಮತ್ತು ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ ಎಂದು ಆರೋಗ್ಯ ತಜ್ಞರು ಕೂಡ ಅಭಿಪ್ರಾಯಪಡುತ್ತಾರೆ.

ಇನ್ನು ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಒಂದು ಲೋಟ ಉಗುರು ಬೆಚ್ಚಗಿನ ನಿಂಬೆ ರಸವನ್ನು ಬೆರೆಸಿ ಕುಡಿಯುವುದರಿಂದ ಆರೋಗ್ಯಕ್ಕೆ ತುಂಬಾನೇ ಪ್ರಯೋಜನ ಕಾರಿಯಾಗಿದೆ. ಪ್ರಮುಖವಾಗಿ ಈ ಆರೋಗ್ಯಕಾರಿ ಅಭ್ಯಾಸವನ್ನು ದಿನಾ ಅನುಸರಿಸುವುದರಿಂದ, ಮತ್ತು ದೇಹದಲ್ಲಿರುವ ವಿಷಕಾರಿ ಅಂಶಗಳು ಮೂತ್ರದ ಮೂಲಕ ಹೊರಹೋಗುತ್ತದೆ, ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ, ದಿನವಿಡೀ ದೇಹದ ಶಕ್ತಿಯನ್ನು ಕಾಪಾಡಿಕೊಳ್ಳಲು ನೆರವಾಗುತ್ತದೆ. ಅದರಲ್ಲೂ ಚಳಿಗಾಲದಲ್ಲಿ, ಚಯಾಪಚಯ ಕ್ರಿಯೆ ನಿಧಾನವಾದಾಗ, ಉಗುರು ಬೆಚ್ಚಗಿನ ನೀರಿಗೆ ಅರ್ಧ ನಿಂಬೆ ರಸ ಬೆರೆಸಿ ಕುಡಿಯುವುದರಿಂದ ದೇಹದ ದೇಹದ ಆಂತರಿಕ ವ್ಯವಸ್ಥೆಗಳನ್ನು ಸಕ್ರಿಯಗೊಳಿಸುವಲ್ಲಿ ನೆರವಿಗೆ ಬರುತ್ತದೆ. ಆದರೆ ಚಳಿಗಾಲದ ಸಂದರ್ಭದಲ್ಲಿ ನಿಂಬೆ ರಸ ಬೆರೆಸಿದ ಪಾನೀಯವನ್ನು ಕುಡಿಯುವ ಮುನ್ನ ಕೆಲವೊಂದು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳ ಬೇಕಾಗುತ್ತದೆ.

**ಹೊಟ್ಟೆಯ ಬೊಜ್ಜು ಕೂಡ ಕಡಿಮೆ ಆಗುತ್ತದೆ :** ಉಗುರು ಬೆಚ್ಚಗಿನ ನೀರಿಗೆ ನಿಂಬೆ ರಸ ಬೆರೆಸಿ ಕುಡಿಯುವುದರಿಂದ ಚಯಾಪಚಯ ಕ್ರಿಯೆಯನ್ನು ವೇಗಗೊಳಿಸುತ್ತದೆ. ಪ್ರಮುಖವಾಗಿ ಈ ಹಣ್ಣಿನಲ್ಲಿ ಕಂಡು ಬರುವ ಸಿಟ್ರಿಕ್ ಆಮ್ಲವು, ದೇಹದ ಕೊಬ್ಬನ್ನು ಕರಗಿಸುವಲ್ಲಿ ಸಹಾಯ ಮಾಡುತ್ತದೆ. ಉತ್ತಮ ಫಲಿಯತಾಂಶಕ್ಕಾಗಿ ಬೆಳಗ್ಗೆ ಖಾಲಿ ಹೊಟ್ಟೆಗೆ ಅರ್ಧ ನಿಂಬೆ ಹಣ್ಣಿನ ರಸವನ್ನು ಉಗುರು ಬೆಚ್ಚಗಿನ ನೀರಿನೊಂದಿಗೆ ಬೆರೆಸಿ ಕುಡಿಯುವ ಅಭ್ಯಾಸ ಮಾಡಿಕೊಂಡರೆ, ಹೊಟ್ಟೆಯ ಸುತ್ತಲಿನ ಬೊಜ್ಜಿನ ಅಂಶವು ಕೂಡ ಕಡಿಮೆ ಆಗುತ್ತಾ ಬರುತ್ತದೆ

**ನಿಂಬೆಹಣ್ಣು ಹೃದಯದ ಸಮಸ್ಯೆಯನ್ನೂ ದೂರ ಮಾಡುತ್ತಾ?**
ನಿಂಬೆಹಣ್ಣಿನಲ್ಲಿ ವಿಟಮಿನ್ ಸಿ ಸಮೃದ್ಧವಾಗಿದ್ದು, ಇದು ದೇಹದ



ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಹೀಗಾಗಿ ನಿಂಬೆಹಣ್ಣನ್ನು ಪ್ರತಿದಿನ ಸರಿಯಾದ ಪ್ರಮಾಣದಲ್ಲಿ ನಮ್ಮ ಆಹಾರ ಪದಾರ್ಥಗಳಲ್ಲಿ ಸೇರಿಸಿಕೊಳ್ಳುವುದರಿಂದ ಶೀತ ಮತ್ತು ಗಂಟಲು ನೋವಿನಂತಹ ಸಮಸ್ಯೆಗಳು ದೂರವಾಗುವುದರ ಜೊತೆಗೆ ಪಾರ್ಶ್ವವಾಯು ಅಥವಾ ಹೃದಯದ ಕಾಯಿಲೆ ಕಂಡು ಬರದಂತೆ ನೋಡಿಕೊಳ್ಳುತ್ತದೆ.

**ಮುಖದ ಮೇಲಿನ ಸುಕ್ಕು ಮೊಡವೆಗಳನ್ನು ದೂರ ಮಾಡುತ್ತದೆ**

ನಿಂಬೆಹಣ್ಣಿನ ಪಾನೀಯದ ಪ್ರಮುಖ ಪ್ರಯೋಜನಗಳು ಏನೆಂದರೆ, ದೇಹದಿಂದ ವಿಷಕಾರಿ ಅಂಶವನ್ನು ಮೂತ್ರದ ಮೂಲಕ ಹೊರಹಾಕುವ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡುತ್ತದೆ, ಇದರಿಂದ ಜೀರ್ಣಾಂಗ ವ್ಯವಸ್ಥೆ ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸುವುದರ ಜೊತೆಗೆ, ತ್ವಚೆಯ ಕಾಂತಿಯೂ ಕೂಡ ಹೆಚ್ಚಾಗುತ್ತದೆ. ಪ್ರಮುಖವಾಗಿ ಈ ಹಣ್ಣಿನಲ್ಲಿ ಕಂಡು ಬರುವ ಆಂಟಿ ಆಕ್ಸಿಡೆಂಟ್ ಅಂಶಗಳು ಮುಖದ ಮೇಲಿನ ಸುಕ್ಕುಗಳು ಮತ್ತು ಮೊಡವೆಗಳನ್ನು ಕಡಿಮೆ ಮಾಡಲು ಸಹ ಸಹಾಯ ಮಾಡುತ್ತದೆ.

---

# ಮುಖದ ಟ್ಯಾನ್ ಕಿರಿಕಿರಿ ಉಂಟು ಮಾಡುತ್ತಿದೆಯಾ...?


ನೀವು ನಿಮ್ಮ ಅಗತ್ಯ ಕೆಲಸಗಳಿಗೆ ಮನೆಯಿಂದ ಹೊರ ಹೋಗಬೇಕಾಗುತ್ತದೆ, ಮನೆಗೆ ಹಿಂತಿರುಗಿದಾಗ ನಿಮ್ಮ ಮುಖದ ಬಣ್ಣ ಬದಲಾಗಿರುತ್ತದೆ. ನಿಮ್ಮ ಮುಖದ ಟ್ಯಾನ್ ತೆಗೆಯಲು ನೈಸರ್ಗಿಕ ಪರಿಹಾರ ಹುಡುಕುತ್ತಿದ್ದರೆ, ಮುಲ್ತಾನಿ ಮಿಟ್ಟಿ ಮತ್ತು ಟೊಮೆಟೊ ಫೇಸ್ ಪ್ಯಾಕ್ ತಯಾರಿಸಿ. ನಿಮ್ಮ ಮುಖದ ಹೊಳಪು ಮರುಪಡೆಯಲು ಇದು ಸಹಾಯ ಮಾಡುತ್ತದೆ. ನೀವು ಸೂರ್ಯನ ಬೆಳಕಿಗೆ ಒಡ್ಡಿಕೊಂಡಾಗ ನಿಮ್ಮ ತ್ವಚೆಯ ಬಣ್ಣ ಕಂದು ಬಣ್ಣಕ್ಕೆ ತಿರುಗುತ್ತದೆ.

ಸನ್ ಸ್ಕ್ರೀನ್ ನಿಮಗೆ ಬಿಸಿಲಿನಿಂದ ಚರ್ಮಕ್ಕಾಗುವ ಹಾನಿಯನ್ನು ತಪ್ಪಿಸುತ್ತದಾದರೂ, ನೈಸರ್ಗಿಕ ಪದಾರ್ಥಗಳು ನಿಧಾನವಾಗಿ ಟ್ಯಾನ್ ಅನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ತ್ವಚೆಯ ಬಣ್ಣವನ್ನು ಸಹಜ ಸ್ಥಿತಿಗೆ ತರಲು ಮುಲ್ತಾನಿ ಮಿಟ್ಟಿ ಮತ್ತು ಟೊಮೆಟೊದಿಂದ ಸುಲಭವಾಗಿ ಫೇಸ್ ಪ್ಯಾಕ್ ತಯಾರಿಸಬಹುದು. ಮುಲ್ತಾನಿ ಮಿಟ್ಟಿ ಟೊಮೆಟೊದಲ್ಲಿ ಚರ್ಮವನ್ನು ಸ್ವಚ್ಛಗೊಳಿಸಿ ಹೊಳಪು ನೀಡುವ ಸಾಮರ್ಥ್ಯವಿದೆ. ಬ್ಯೂಟಿಪಾರ್ಲರ್‌ಗೆ ಹೋಗದೆಯೂ ನಿಮ್ಮ ಮುಖಕ್ಕೆ ಹೊಳಪು ನೀಡಲು ಈ ಎರಡೂ ಪದಾರ್ಥಗಳು ಸಹಾಯ ಮಾಡುತ್ತದೆ.

**ಮುಲ್ತಾನಿ ಮಿಟ್ಟಿ, ಟೊಮೆಟೊದಿಂದ ಚರ್ಮಕ್ಕೆ ಏನು ಪ್ರಯೋಜನ?:** ಮುಲ್ತಾನಿ ಮಿಟ್ಟಿ ನೈಸರ್ಗಿಕ ಜೇಡಿಮಣ್ಣು, ಇದು ಸತ್ತ ಚರ್ಮದ ಕೋಶಗಳನ್ನು ಪರಿಣಾಮಕಾರಿಯಾಗಿ ಹೊರಹಾಕುತ್ತದೆ ಮತ್ತು ಸೂರ್ಯನ ಬೆಳಕಿನಿಂದ ಹಾನಿಗೊಳಗಾದ ಚರ್ಮಕ್ಕೆ ಚಿಕಿತ್ಸೆ ನೀಡುತ್ತದೆ. ಮುಲ್ತಾನಿ ಮಿಟ್ಟಿ ಚರ್ಮವನ್ನು ಸಂಪೂರ್ಣವಾಗಿ ಶುದ್ಧೀಕರಿಸುತ್ತದೆ, ಹೆಚ್ಚುವರಿ ಎಣ್ಣೆ ಮತ್ತು ಕಲ್ಮಶಗಳನ್ನು ಹೀರಿಕೊಳ್ಳುತ್ತದೆ. ಸೂರ್ಯನ ಬೆಳಕಿಗೆ ಒಡ್ಡಿಕೊಂಡ ಚರ್ಮವನ್ನು ನೈಸರ್ಗಿಕ ತಂಪಾಗಿಸುತ್ತದೆ ಮತ್ತು ಹಿತವಾದ ಸಂವೇದನೆಯನ್ನು ನೀಡುತ್ತದೆ. ಟೊಮೆಟೊದಲ್ಲಿ ಉತ್ಕರ್ಷಣ ನಿರೋಧಕಗಳು ಮತ್ತು ವಿಟಮಿನ್ ಸಿ ಹೇರಳವಾಗಿವೆ. ಅವು ನೈಸರ್ಗಿಕ ಸಂಕೋಚಕವಾಗಿ ಕಾರ್ಯನಿರ್ವಹಿಸುತ್ತವೆ, ಸೂರ್ಯನಿಂದ ಚರ್ಮಕ್ಕಾದ ಹಾನಿಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಮತ್ತು ನಿಮ್ಮ ಚರ್ಮದ ಕಾಂತಿಯನ್ನು ಹೆಚ್ಚಿಸುತ್ತದೆ.

**ಮುಲ್ತಾನಿ ಮಿಟ್ಟಿ, ಟೊಮೆಟೊ ಫೇಸ್ ಪ್ಯಾಕ್ ತಯಾರಿಸುವುದು ಹೇಗೆ: ಬೇಕಾಗುವ ಸಾಮಗ್ರಿಗಳು: ಒಂದು ಚಮಚ ಮುಲ್ತಾನಿ ಮಿಟ್ಟಿ ಪುಡಿ ಒಂದು ಚಮಚ ತಾಜಾ ಟೊಮೆಟೊ ತಿರುಳು**

**ತಯಾರಿಸುವ ವಿಧಾನ:** ಮಾಗಿದ ಟೊಮೆಟೊಗಳನ್ನು ಹಿಸುಕಿ ತಿರುಳನ್ನು ತಯಾರಿಸಿ, ಬಳಿಕ ರಸವನ್ನು ತೆಗೆಯಿರಿ. ಈಗ, ಒಂದು ಸ್ವಚ್ಛವಾದ ಬಟ್ಟಲಿನಲ್ಲಿ, ಮುಲ್ತಾನಿ ಮಿಟ್ಟಿ ಪುಡಿ, ತಾಜಾ ಟೊಮೆಟೊ ರಸವನ್ನು ಸೇರಿಸಿ ನಯವಾದ ಪೇಸ್ಟ್ ತಯಾರಿಸಿ. ಅದು ತುಂಬಾ ದಪ್ಪವಾಗಿದ್ದರೆ, ನೀವು ಸ್ವಲ್ಪ ನೀರನ್ನು ಸೇರಿಸಬಹುದು. ಈ ಫೇಸ್ ಪ್ಯಾಕ್ ಹಚ್ಚುವ ಮೊದಲು, ನಿಮ್ಮ ಮುಖ, ಕುತ್ತಿಗೆಯನ್ನು ಹಗುರವಾದ ಕ್ಲೆನ್ಸರ್‌ನಿಂದ ನಿಧಾನವಾಗಿ ಸ್ವಚ್ಛಗೊಳಿಸಿ. ಇದು ಪ್ಯಾಕ್ನ ಪ್ರಯೋಜನಗಳನ್ನು ಉತ್ತಮವಾಗಿ ಹೀರಿಕೊಳ್ಳಲು ಸಹಾಯ ಮಾಡುತ್ತದೆ. ಈಗ, ನಿಮ್ಮ ಕಂದುಬಣ್ಣಕ್ಕೆ ತಿರುಗಿದ ಭಾಗಕ್ಕೆ ಮುಖ, ಕುತ್ತಿಗೆ, ಕೈಗಳು ಅಥವಾ ಸೂರ್ಯನ ಬೆಳಕಿಗೆ ಒಡ್ಡಿಕೊಂಡ ಯಾವುದೇ ಇತರ ಭಾಗಗಳಿಗೂ ಈ ಪೇಸ್ಟ್ ಹಚ್ಚಿ. ನಿಮ್ಮ ಕಣ್ಣುಗಳು ತುಟಿಗಳ ಸುತ್ತಲಿನ ಸೂಕ್ಷ್ಮ ಚರ್ಮಕ್ಕೆ ಹಚ್ಚಬೇಡಿ.



### ರೈತರಿಗೆ ಹೊರೆ ಮಾಡುವ ಇಂತಹ ವ್ಯವಸ್ಥೆ ಕಂಡುಬಂದಲ್ಲಿ ಅಂತಹ ಸಿಬ್ಬಂದಿ ಮತ್ತು ಇಂಜಿನಿಯರ್‌ಗಳ ಮೇಲೆ ನಿರ್ದಾಕ್ಷಿಣ್ಯ ಕ್ರಮ

# ಟಿಸಿ ತರಲು ರೈತರಿಂದ ವಾಹನ ತರಿಸುವಂತಿಲ್ಲ: ಸಚಿವ ಕೆ.ಜೆ.ಜಾರ್ಜ್

• **ಉದಯವಾಹಿನಿ, ಹೊಸಪೇಟೆ**

ರೈತರ ಕೃಷಿ ಪಂಪ್‌ಸೆಟ್‌ಗಳಿಗಾಗಿ ವಿದ್ಯುತ್ ಪರಿವರ್ತಕ (ಟಿಸಿ) ಬ್ಯಾಂಕ್ ಮತ್ತು ದುರಸ್ತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ವಿಫಲವಾದ ಟಿಸಿಗಳನ್ನು ದುರಸ್ತಿ ಕೇಂದ್ರಗಳಿಗೆ ತರುವಾಗ ಎಸ್ಕಾಂಗಳೇ ವಾಹನ ವ್ಯವಸ್ಥೆ ಮಾಡಬೇಕೇ ಹೊರತು ರೈತರಿಂದ ತರಿಸಬಾರದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಾಕೀತು ಮಾಡಿದ್ದಾರೆ.

ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜನಪ್ರತಿನಿಧಿಗಳು, ಜೆಸ್ಕಾಂ, ಬೆಸ್ಕಾಂ ಹಾಗೂ ಕೆಪಿಟಿಸಿಎಲ್ ಅಧಿಕಾರಿಗಳೊಂದಿಗೆ ಇಂಧನ ಇಲಾಖೆಗೆ ಸಂಬಂಧಿಸಿದಂತೆ ಕೈಗೊಂಡ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.


ರೈತರಿಗೆ ಹೊರೆ ಮಾಡುವ ಇಂತಹ ವ್ಯವಸ್ಥೆ ಕಂಡುಬಂದಲ್ಲಿ ಅಂತಹ ಸಿಬ್ಬಂದಿ ಮತ್ತು ಎಂಜಿನಿಯರ್‌ಗಳ ಮೇಲೆ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುತ್ತದೆ. ಸಕಾಲದಲ್ಲಿ ಟಿಸಿ ಅಳವಡಿಕೆಗೆ ಕ್ರಮ ವಹಿಸಬೇಕು. ಸಾಮಾನ್ಯವಾಗಿ ಒಂದೇ ವಿದ್ಯುತ್ ಪರಿವರ್ತಕಕ್ಕೆ ಹಲವು ಪಂಪ್ ಸೆಟ್‌ಗಳ ಸಾಮರ್ಥ್ಯ ಮೀರಿ ಸಂಪರ್ಕ ಕಲ್ಪಿಸಿದಾಗ ವಿಫಲವಾಗುತ್ತವೆ. ಪವರ್ ಮ್ಯಾನ್‌ಗಳು ಮತ್ತು ಎಂಜಿನಿಯರ್‌ಗಳು ಓವರ್ ಲೋಡ್ ಆಗದಂತೆ ನೋಡಿಕೊಳ್ಳುವುದು ಅವರ ಕರ್ತವ್ಯವಾಗಿದೆ ಎಂದರು.

ಅಕ್ರಮ ಸಕ್ರಮಕ್ಕಾಗಿ ಪಾವತಿಸಿದ ನೋಂದಾಣಿ ಶುಲ್ಕ 50 ರೂಗಳಿಂದ 25000 ದವರೆಗೆ ಶುಲ್ಕ ಪಾವತಿಸಿದ ಎಲ್ಲಾ ರೈತರ ಪಂಪ್‌ಸೆಟ್‌ಗಳಿಗೆ ಮೂಲಭೂತ ಸೌಕರ್ಯಗಳೊಂದಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ತೀರ್ಮಾನಿಸಲಾಗಿದೆ. ಇದರಲ್ಲಿ ವಿದ್ಯುತ್ ಕಂಬದಿಂದ 500 ಮೀಟರ್ ಒಳಗಿನ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ 500 ಮೀಟರ್‌ಗಿಂತ ಹೆಚ್ಚು ದೂರವಿರುವ ಪಂಪ್‌ಸೆಟ್‌ಗಳಿಗೆ ಕುಸುಮ್ ಬಿ ಯೋಜನೆಯಡಿ ಕೇಂದ್ರ ಸರ್ಕಾರದ ಶೇ 30 ಮತ್ತು ರಾಜ್ಯ ಸರ್ಕಾರದ ಶೇ 50ರಷ್ಟು ಸಬ್ಸಿಡಿಯೊಂದಿಗೆ ಸೋಲಾರ್ ವಿದ್ಯುತ್ ಕಲ್ಪಿಸಲಾಗುತ್ತದೆ. ಸೋಲಾರ್ ಪಂಪ್‌ನಿಂದ ಸಾವಿರ ಅಡಿವರೆಗೆ ಪಂಪ್ ಮಾಡುವ ಸಾಮಾರ್ಥ್ಯವಿರುತ್ತದೆ. ಈ ಬಗ್ಗೆ ರೈತರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ ಎಂದರು.

**ವಿದ್ಯುತ್ ಜಾಗೃತ ದಳದಿಂದ ವರದಿ ನೀಡಲು ಸೂಚನೆ :** ವಿದ್ಯುತ್ ಜಾಗೃತ ದಳದವರು ಅಕ್ರಮವಾಗಿ ವಾಸದ ಮನೆಗಳಿಗೆ ಪಡೆದ ವಿದ್ಯುತ್ ಸಂಪರ್ಕಕ್ಕೆ ದಂಡ ವಿಧಿಸಿ ಪ್ರಕರಣ ದಾಖಲಿಸುತ್ತಿದ್ದಾರೆ ಎಂದು ಸಂಸದ ಇ.ತುಕಾರಾಂ ಮತ್ತು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಪ್ರಸ್ತಾಪಿಸಿದಾಗ ಕಾಲೋನಿ, ತಾಂಡಾ, ಅಲ್ಪಸಂಖ್ಯಾತರ ಗಲ್ಲಿಯಲ್ಲಿನ ವಾಸದ ಮನೆಗಳಿಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದಿದ್ದಲ್ಲಿ, ಸಂಪರ್ಕ ಕಡಿತಗೊಳಿಸದೇ ಹಾಗೂ ಪ್ರಕರಣ ದಾಖಲಿಸದೇ ಎಸ್ಕಾಂಗಳಿಗೆ ಅಂತಹ ಮನೆಗಳ ಅಂಕಿಸಂಖ್ಯೆ ಬಗ್ಗೆ ನಿಖರವಾದ ವರದಿಯನ್ನು ನೀಡಬೇಕು. ಇದನ್ನು ಇಂಧನ ಇಲಾಖೆ ಅವಲೋಕಿಸಿ ಅಂತಹ ಕಡುಬಡತನದ ಜನರಿಗೆ ವಿದ್ಯುತ್ ಸಂಪರ್ಕ ಒದಗಿಸಲು ಡಿಎಂಎಫ್, ಕಲ್ಯಾಣ ಕರ್ನಾಟಕ ಪ್ರಾದೇಶಾಭಿವೃದ್ಧಿ ಯೋಜನೆ, ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಡಿ ಠೇವಣಿ ಭರಿಸಿ ವಿದ್ಯುತ್ ಸಂಪರ್ಕ ನೀಡಲು ಸ್ಥಳೀಯ ಮಟ್ಟದಲ್ಲಿ ಶಾಸಕರು ಮತ್ತು ಜಿಲ್ಲಾಧಿಕಾರಿಗಳು ತೀರ್ಮಾನಿಸುತ್ತಾರೆ. ಅಲ್ಲಿಯವರೆಗೆ ಜಾಗೃತ ದಳದವರು ಸಂಪರ್ಕ ಕಡಿತಗೊಳಿಸದೇ ವರದಿಯನ್ನು ಮಾತ್ರ ಹೆಸ್ಕಾಂಗಳಿಗೆ ನೀಡಬೇಕು ಎಂದು ಸೂಚನೆ ನೀಡಿದರು. ಹರಪನಹಳ್ಳಿ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್, ಹೂವಿನಹಡಗಲಿ ಶಾಸಕ ಕೃಷ್ಣನಾಯ್ಕ, ಜೆಸ್ಕಾಂ ಅಧ್ಯಕ್ಷ ಪ್ರವೀಣ್ ಕುಮಾರ್ ಹರವಾಳ, ಕೆಪಿಟಿಸಿಎಲ್ ಎಂಡಿ ಪಂಕಜ್ ಕುಮಾರ ಪಾಂಡೆ, ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಭಾಜಪೇಯಿ ಇತರರು ಇದ್ದರು. ಹಂಪಿ ವಿವಿ ವ್ಯಾಪ್ತಿಯಲ್ಲಿ ಸೋಲಾರ್ ಉತ್ಪಾದನೆ ಹಂಪಿ ಕನ್ನಡ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ 750 ಎಕರೆ ಜಮೀನು ಇದೆ. ಇಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆಗೆ ಸಾಕಷ್ಟು ಅವಕಾಶವಿದೆ. ಇದರಿಂದ ವಿಶ್ವವಿದ್ಯಾಲಯಕ್ಕೆ ಆದಾಯ ಬರಲಿದೆ. ಇಲ್ಲಿ ಸೋಲಾರ್ ಅಳವಡಿಕೆ ಬಗ್ಗೆ ಕುಲಪತಿಗಳು ಚರ್ಚಿಸಿದ್ದಾರೆಂದು ಶಾಸಕ ಎಚ್.ಆರ್.ಗವಿಯಪ್ಪ ಹೇಳಿದರು. ಈ ಬಗ್ಗೆ ಕೆಪಿಟಿಸಿಎಲ್ ತಾಂತ್ರಿಕ ತಂಡದವರು ಪರಿಶೀಲನೆ ನಡೆಸುವರು.

> **ವಿದ್ಯುತ್ ಸಂಪರ್ಕ ದುರಸ್ತಿಗೆ ಬರುವ ಯಾರಿಗೂ ಯಾವುದೇ ರೀತಿಯಲ್ಲಿ ದುಡ್ಡು ಕೊಡಬಾರದು ಎಂದು ಸಚಿವರು ತಾಕೀತು ಮಾಡಿದರು. ಒಂದು ವೇಳೆ ಹೀಗೆ ಹಣ ವಸೂಲಿ ವಿವರ ನೀಡಿದರೆ ಕ್ರಮ ನಿಶ್ಚಿತ. -ಕೆ.ಜೆ.ಜಾರ್ಜ್, ಸಚಿವ**

**ಸೋಲಾರ್ ವಿದ್ಯುತ್ ಕಲ್ಪಿಸಲಾಗುತ್ತದೆ**



### 4.5 ಲಕ್ಷ ಅಕ್ರಮ ಪಂಪಸೆಟ್‌ಗಳ ಸಕ್ರಮಕ್ಕೆ ಕ್ರಮ: ಕೆ.ಜೆ.ಜಾರ್ಜ್

**ರೈತರು ಕೃಷಿ ಪಂಪ್‌ಸೆಟ್‌ಗಳಿಗೆ ಅಕ್ರಮವಾಗಿ ಪಡೆದಿರುವ ವಿದ್ಯುತ್ ಸಂಪರ್ಕವನ್ನು ಸಕ್ರಮ ಮಾಡಲು ರಾಜ್ಯದಲ್ಲಿ 4.5 ಲಕ್ಷ ಪಂಪ್ ಸೆಟ್‌ಗಳನ್ನು ಗುರುತಿಸಿ ಸಕ್ರಮಕ್ಕೆ ಕ್ರಮ ಕೈಗೊಳ್ಳಲಾಗಿದೆ ಆದರೆ ಇದನ್ನು ಇದೇ ರೀತಿ ಮುಂದುವರೆಸಲು ಸಾಧ್ಯವಿಲ್ಲ. ಈ ಬಗ್ಗೆ ಕ್ಯಾಬಿನೆಟ್ ಮುಂದೆ ತಂದು ಅಂತಿಮ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದು ಸಚಿವರು ಹೇಳಿದರು.**

## ಸುಪ್ರೀಂ ಕೋರ್ಟ್ ಆದೇಶದಂತೆ ದತ್ತಪೀಠದಲ್ಲಿ ದತ್ತ ಜಯಂತಿಗೆ ವ್ಯವಸ್ಥೆ ಮಾಡುವುದು ಸರ್ಕಾರದ ಜವಾಬ್ದಾರಿ: ಸಿ.ಟಿ ರವಿ



ಉದಯವಾಹಿನಿ ಚಿತ್ರ

> **ಸರ್ಕಾರಕ್ಕೆ ನಮ್ಮ ಆಗ್ರಹ ಏನೆಂದರೆ, ನಾವು ಆರಂಭದಿಂದಲೂ ದತ್ತಪೀಠ ಬೇರೆ, ಬಾಬಾ ಬುಡನ್ ದರ್ಗಾ ಬೇರೆ ಅನ್ನೋದನ್ನ ಪ್ರತಿಪಾದಿಸುತ್ತಾ ಬಂದಿದ್ದೇವೆ. ಸರ್ಕಾರ ಈ ನೆಲೆಯಲ್ಲಿ ಹೈಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ಒಂದು ಸತ್ಯ ಶೋಧನಾ ಸಮಿತಿಯನ್ನು ರಚಿಸಬೇಕು. ನಾವು ಪ್ರತಿಪಾದಿಸುವ ವಿಚಾರದ ಸತ್ಯಾಸತ್ಯತೆಯ ಅವಲೋಕನ ಮಾಡಿ, ಸತ್ಯದ ಪರವಾಗಿ ನಿಲ್ಲಬೇಕು. ಅಸತ್ಯದ ಪರವಾಗಿ ನಿಲ್ಲುವುದು ಸಂವಿಧಾನಕ್ಕೆ ಮಾಡುವ ಅಪಚಾರ. ಸಂವಿಧಾನದ ಆಶಯವೇ ಸತ್ಯದ ಪರವಾಗಿ ನಿಲ್ಲುವುದು. -ಸಿ.ಟಿ ರವಿ**


• **ಉದಯವಾಹಿನಿ, ಚಿಕ್ಕಮಗಳೂರು**

ದತ್ತ ಜಯಂತಿಗೆ ಸಾವಿರಾರು ವರ್ಷಗಳ ಇತಿಹಾಸ ಇದೆ. ದತ್ತಮಾಲಾ ಧಾರಣೆ ಪ್ರಾರಂಭವಾಗಿ, 26 ವರ್ಷಗಳು ಪೂರ್ಣಗೊಂಡಿವೆ. ಸಂತೋಷದ ಸಂಗತಿಯೆಂದರೆ, ಆರಂಭಿಕ ದತ್ತಮಾಲಾ ಧಾರಣೆಯಲ್ಲಿ, ಶ್ರೀ ದತ್ತಾತ್ರೇಯ ಪೀಠದ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಂಡಿದ್ದಂತಹ ಪ್ರಮೋದ್ ಮುತಾಲಿಕ್ ಅವರು ಸುಮಾರು 20 ವರ್ಷಗಳ ನಂತರ ಮತ್ತೆ ಎಲ್ಲರೊಂದಿಗೆ ಸೇರಿ, ಮಾಲಧಾರಣೆಯ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ. ಇದು ದತ್ತ ಪೀಠದ ಹೋರಾಟಕ್ಕೆ ಸಂಘಟಿತ ಶಕ್ತಿಗೆ ಬಲ ಕೊಟ್ಟಿದೆ. ಇದಕ್ಕಾಗಿ ನಾನು ಮುತಾಲಿಕ್ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ ರವಿ ಹೇಳಿದರು. ಅವರು ಇಂದು ಚಿಕ್ಕಮಗಳೂರಿನ ಕಾಮಧೇನು ಗಣಪತಿ ದೇವಸ್ಥಾನದಲ್ಲಿ ದತ್ತಮಾಲೆ ಧರಿಸಿ, ವ್ರತ ಸ್ವೀಕರಿಸಿದ ಬಳಿಕ ಮಾಧ್ಯಮಗಳೊಡನೆ ಮಾತನಾಡಿದರು. ಜಗನ್ನಾಥ ಶಾಸ್ತ್ರಿಯವರು ಸಂಪಾದಿಸಿರತಕ್ಕಂತಹ ಶ್ರೀ ಸದ್ಗುರು ದತ್ತಾತ್ರೇಯ ಸ್ತೋತ್ರಾಣಿ ಅನ್ನುವ ಕೃತಿ ದತ್ತಮಾಲಾ ಧಾರಣೆ ಮಾಡುವ ವ್ರತಧಾರಿಗಳಿಗೆ ಒಂದು ಕೈದೀವಿಗೆ. ಇದರಲ್ಲಿ ಶ್ಲೋಕಗಳ ಸಹಿತ ಸ್ಥಳ ಪುರಾಣಗಳ ಆದಿಯಾಗಿ, ದತ್ತಾತ್ರೇಯ ವಚನಗಳನ್ನು ಕೂಡ ಸಂಪಾದಿಸಲಾಗಿದೆ. ಅವರಿಗೂ ನಾನು ಅಭಿನಂದನೆಗಳು, ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದರು.

ಸುಪ್ರೀಂ ಕೋರ್ಟ್ ತೀರ್ಪಿಗೆ ಅನುಗುಣವಾಗಿ, ಹಿಂದೆ ಬಿಜೆಪಿ ಸರ್ಕಾರ, ಉಪಸಮಿತಿಯನ್ನ ರಚನೆ ಮಾಡಿ ಅದರಂತೆ ದತ್ತಾತ್ರೇಯ ಪೀಠದಲ್ಲಿ ಯಾವ ಯಾವ ರೀತಿಯ ಪೂಜಾ ವಿಧಿಗಳು ಇರಬೇಕು ಅನ್ನುವುದನ್ನು ಈಗಾಗಲೇ ಅನುಷ್ಠಾನಗೊಳಿಸಿದೆ. ಅದಕ್ಕೆ ತಡೆ ಒಡ್ಡುವುದು ನ್ಯಾಯಾಲಯದ ತೀರ್ಪಿಗೆ ವಿರುದ್ಧ, ಮತ್ತು ಅನ್ಯಾಯದ ಪರಮಾವಧಿ. ಯಾವುದೇ ಅಡೆತಡೆ ಇಲ್ಲದ ರೀತಿಯಲ್ಲಿ ದತ್ತಪೀಠದಲ್ಲಿ ದತ್ತಾತ್ರೇಯರ ಆ ಜಯಂತಿ ಉತ್ಸವಗಳು ನಡೆಯುವಂತೆ, ಅದಕ್ಕೆ ಬೇಕಾಗಿರತಕ್ಕಂತಹ ಮೂಲ ಸೌಕರ್ಯವನ್ನ ಕಲ್ಪಿಸುವುದು ಸರ್ಕಾರ ಮತ್ತು ಜಿಲ್ಲಾಡಳಿತದ ಜವಾಬ್ದಾರಿ. ಅದಕ್ಕೆ ಯಾವುದೇ ರೀತಿಯ ಲೋಪ ಆಗದಂತೆ ಮೂಲ ಸೌಕರ್ಯವನ್ನ ಕಲ್ಪಿಸಬೇಕು ಎಂದು ರವಿ ಆಗ್ರಹಿಸಿದರು.

ದತ್ತಪೀಠದಲ್ಲಿ ದರ್ಶನಕ್ಕೆ ಯಾವುದೇ ತಡೆಗಳಿಲ್ಲ. ದತ್ತ ಜಯಂತಿ ನಿರ್ದಿಷ್ಟ ದಿನಾಂಕದಂದು ನಡೆಯುತ್ತದೆ. ಈಗಾಗಲೇ ನಿತ್ಯ ಪೂಜೆಗೆ ವ್ಯವಸ್ಥೆಯನ್ನು ಮಾಡಲಾಗಿದೆ. ಈ ವರ್ಷದ ದತ್ತ ಜಯಂತಿ ಡಿಸೆಂಬರ್ 2,3, ಮತ್ತು 4ರಂದು ನಡೆಯುತ್ತದೆ. ಎರಡನೇ ತಾರೀಖಿನಂದು ಮಹಾಸತಿ ಅನಸೂಯಾ ದೇವಿ ಜಯಂತಿ ನಡೆಯಲಿದೆ. ಮೂರನೇ ತಾರೀಖು ಚಿಕ್ಕಮಗಳೂರು ನಗರದಲ್ಲಿ ವೈಭವದ ಶೋಭಾಯಾತ್ರೆ ನಡೆಯಲಿದೆ. ನಾಲ್ಕನೇ ತಾರೀಖು ದತ್ತ ಜಯಂತಿ ನೆರವೇರುವ ಮೂಲಕ, ಈ ವರ್ಷದ ದತ್ತ ಜಯಂತಿ ಉತ್ಸವ ಪೂರ್ಣಗೊಳ್ಳುತ್ತದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಸಮಾರಂಭದಲ್ಲಿ ಪಾಲ್ಗೊಂಡು, ಸಮಾರಂಭವನ್ನು ಯಶಸ್ವಿಗೊಳಿಸಿ ಎಂದು ರವಿ ದತ್ತ ಜಯಂತಿ ಕಾರ್ಯಕ್ರಮಗಳನ್ನು ವಿವರಿಸಿದರು.

## ಸೌರ ವಿದ್ಯುತ್ ಘಟಕ ಅಳವಡಿಸಿಕೊಳ್ಳಿ: ವೈಶಾಲಿ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಚಿಕ್ಕೋಡಿ**

ವರ್ಷದಿಂದ ವರ್ಷಕ್ಕೆ ನೀರಾವರಿ ಕ್ಷೇತ್ರ ಹೆಚ್ಚುತ್ತಿದ್ದಂತೆ ರೈತರಿಂದ ವಿದ್ಯುತ್ ಬೇಡಿಕೆಯೂ ಹೆಚ್ಚುತ್ತಿದೆ. ಹೀಗಾಗಿ ಸರ್ಕಾರ ರಿಯಾಯಿತಿ ದರದಲ್ಲಿ ನೀಡುವ ಸೌರ ವಿದ್ಯುತ್ ಘಟಕಗಳನ್ನು ಹೊಲಗದ್ದೆಗಳಲ್ಲಿ ಸ್ಥಾಪಿಸಿಕೊಳ್ಳುವ ಮೂಲಕ ವಿದ್ಯುತ್ ಕೊರತೆ ನೀಗಿಸಿಕೊಳ್ಳಬಹುದು ಎಂದು ಹುಬ್ಬಳ್ಳಿಯ ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕಿ ವೈಶಾಲಿ ಹೇಳಿದರು.

ಪಟ್ಟಣದಲ್ಲಿ ಹೆಸ್ಕಾಂ ಕಚೇರಿಯ ಸಭಾಭವನದಲ್ಲಿ ಆಯೋಜಿಸಿದ್ದ ಹೆಸ್ಕಾಂ ಅಧಿಕಾರಿಗಳ ಹಾಗೂ ಸಾರ್ವಜನಿಕರ ಕುಂದು ಕೊರತೆಗಳ ಸಭೆಯಲ್ಲಿ ಅವರು ಮಾತನಾಡಿದರು.

ಚಿಕ್ಕೋಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಕಳೆದ ಹಲವು ವರ್ಷಗಳಿಂದ ನೀರಾವರಿಯ ಸಣ್ಣ ಘಟಕಗಳಿಂದ ರೂ. 226 ಕೋಟಿ ಬಾಕಿ ಮೊತ್ತ ಬರಬೇಕಿದೆ. ರೈತರಿಗೆ ಭಾರವಾಗುವ ವಿದ್ಯುತ್ ದರ ಕಡಿತಗೊಳಿಸಿಕೊಳ್ಳಲು ಕುಸುಮ ಬಿ ಹಾಗೂ ಕುಸುಮ ಸಿ ಸೌರ ವಿದ್ಯುತ್ ಘಟಕಗಳನ್ನು ಸ್ಥಾಪಿಸಿಕೊಳ್ಳುವ ಮೂಲಕ ವಿದ್ಯುತ್ ಉತ್ಪಾದನೆಯಲ್ಲಿ ರೈತರು ಸ್ವಾವಲಂಬಿಯಾಗಲು ಸಾಧ್ಯವಿದೆ ಎಂದರು.

ಗಣೇಶ ಮೂರ್ತಿ ಮೆರವಣಿಗೆ, ಕಬ್ಬು ಸಾಗಣೆ ಮಾಡುವ ಟ್ರ್ಯಾಕ್ಟರ್, ಲಾರಿ ತೆರಳುವ ಮಾರ್ಗಗಳಲ್ಲಿ ಭೂಗತ ವಿದ್ಯುತ್ ಕೇಬಲ್ ಅಳವಡಿಸುವಂತೆ ಚಿಕ್ಕೋಡಿ-ಸದಲಗಾ ಶಾಸಕ ಗಣೇಶ ಹುಕ್ಕೇರಿ ಅವರ ಬೇಡಿಕೆಯಾಗಿದ್ದು, ಈ ಕುರಿತು ಕ್ರಮ ಕೈಗೊಳ್ಳಲು ಹೆಸ್ಕಾಂ ಬದ್ಧವಾಗಿದೆ. ಬೋರಗಾಂವ ಜವಳಿ ಪಾರ್ಕ್‌ಗೆ ವಿದ್ಯುತ್ ಪೂರೈಕೆಯ ಕೊರತೆ ನೀಗಿಸಲು ಹಾಗೂ ಚಿಕ್ಕೋಡಿ ಪಟ್ಟಣಕ್ಕೆ ಸಮರ್ಪಕ ನೀರು ಪೂರೈಸಲು ಅನುಕೂಲವಾಗುವಂತೆ ಹಳೆಯ ವಿದ್ಯುತ್ ತಂತಿಗಳನ್ನು ತೆರವುಗೊಳಿಸಿ ಶೀಘ್ರದಲ್ಲಿ ಹೊಸ ಮಾರ್ಗವನ್ನು ಪ್ರಾರಂಭಿಸಲಾಗುವುದು' ಎಂದು ಭರವಸೆ ನೀಡಿದರು.

ಚಿಕ್ಕೋಡಿ ವಿಭಾಗೀಯ ಹೆಸ್ಕಾಂ ಕಚೇರಿಯಲ್ಲಿ 8 ತಿಂಗಳ ಹಿಂದೆ ರದ್ದಾಗಿರುವ ಉಪ ಲೆಕ್ಕಾಧಿಕಾರಿ ಹುದ್ದೆಯನ್ನು ಮರುಮಂಜೂರಾತಿ ನೀಡುವ ಕುರಿತು ಸಮಾಲೋಚಿಸಲಾಗುವುದು. ಚಿಕ್ಕೋಡಿಯಲ್ಲಿ ವಿದ್ಯುತ್ ಉಪ ಕೇಂದ್ರ ಅವಶ್ಯಕತೆ ಇದ್ದು, ಈ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದು ಹುಬ್ಬಳ್ಳಿಯ ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕಿ ವೈಶಾಲಿ ಹೇಳಿದರು. ಸಭೆಯಲ್ಲಿ ಹೆಸ್ಕಾಂ ಮುಖ್ಯ ಅಭಿಯಂತರ ಶಿವಾನಂದ ಪಾಟೀಲ, ಅಧೀಕ್ಷಕ ಅಭಿಯಂತರ ಶಿವಾಜಿ ಖರೆ, ಕಾರ್ಯನಿರ್ವಾಹಕ ಅಭಿಯಂತರ ಸುಪ್ರಭಾ ಭಂಡಗಾರ, ಸಹಾಯಕ ಕಾರ್ಯನಿರ್ವಾಕ ಅಭಿಯಂತರ ಸಂಜೀವಕುಮಾರ ಸುಖಸಾರೆ, ಮುಖಂಡರಾದ ಅಣ್ಣಾಸಾಹೇಬ ಹವಲೆ, ರಾಮಾ ಮಾನೆ, ಅನಿಲ ಪಾಟೀಲ, ಸಾಬೀರ ಜಮಾದಾರ, ಜಗದೀಶ ಈಟಿ ಹಾಜರಿದ್ದರು.

## ಮಿನಿ ನ್ಯೂಸ್

### ಏಕಾಏಕಿ ಮನೆಗೆ ಬೆಂಕಿ ತಗುಲಿ ಮನೆ ಸಂಪೂರ್ಣ ಭಸ್ಮ: ಪರಿಹಾರಕ್ಕೆ ಮನವಿ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನ ಪೋಲಕಪಳ್ಳಿ ಗ್ರಾಮದ ಸಯ್ಯದ್ ಇಬ್ರಾಹಿಂ ಸೈಯದ್ ಸಾಧಿಕ್ ಸಾಬ್ ಎಂಬುವರ ಮನೆಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ದಿನ ಬಳಕೆಯ ವಸ್ತು ದವಸಧಾನ್ಯ ಬಟ್ಟೆ ಜೊತೆಗೆ ಬೆಳೆಬಾಳುವ ಬಂಗಾರ, ಬೆಳ್ಳಿ ಸೇರಿ ಸುಮಾರು ಹತ್ತು ಲಕ್ಷದಷ್ಟು ಅಪಾರಹಾನಿಯಾಗಿದೆ.

ಏಕಾಏಕಿ ಬೆಂಕಿ ಕಾಣಿಸಿಕೊಂಡ ಕ್ಷಣ ಗ್ರಾಮಸ್ಥರು ಆಗ್ನಿ ಶಾಮಕದವರಿಗೆ ಮಾಹಿತಿ ನೀಡಿದ ಬಳಿಕ ಆಗ್ನಿಶಾಮಕ ದಳದವರು ಆಗಮಿಸಿ ಬೆಂಕಿ ನಂದಿಸುವ ಕಾರ್ಯ ಮಾಡಿದ್ದಾರೆ ತಾಲ್ಲೂಕಾಡಳಿತ ಅಧಿಕಾರಿಗಳು ಮತ್ತು ಜಿಲ್ಲಾಡಳಿತ ಅಧಿಕಾರಿಗಳು ಮುತುವರ್ಜಿ ವಹಿಸಿ ಬಡ ಕುಟುಂಬಕ್ಕೆ ಹೆಚ್ಚಿನ ಪರಿಹಾರ ನೀಡಿ ಅವರ ಕುಟುಂಬಕ್ಕೆ ಆಸರೆಯಾಗಬೇಕು ಎಂದು ಸಮಾಜ ಸೇವಕ ಕೆಎಂಬಾರಿ ಮತ್ತು ಗ್ರಾಮಸ್ಥ ಸುರೇಶ ದೇಶಪಾಂಡೆ, ಜಾಕೀರಸಾಬ್ ಮನವಿ ಮಾಡಿದ್ದಾರೆ.



ಉದಯವಾಹಿನಿ ಚಿತ್ರ

**ಉದಯವಾಹಿನಿ ಕೆಂಭಾವಿ : ಯಾಳಗಿ ಗ್ರಾಮದಲ್ಲಿ ನಡೆದ ಸಂವಿಧಾನ ಸಮರ್ಪಣೆ ದಿನದ ಅಂಗವಾಗಿ ಅಂಬೇಡ್ಕರ್ ವೃತದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಭಾವ ಚಿತ್ರಕ್ಕೆ ಮಾಲಾರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಶಿವಶರಣ ಯಾಳಗಿ, ಸತೀಶ್ ಅಲಗೂರ್, ಸಿದ್ದನಗೌಡ ಹೊಸಮನಿ, ಗೀತಾ ಮಾಲಿ ಪಾಟೀಲ್, ಶರಣು ಗೊಸಲ್, ಶಾರದಾ ವಸ್ತ್ರದ, ಶಂಕರಗುರಗಳು, ಸಂಜು, ಶಿಲ್ಪಾ ಕಲಕೇರಿ, ಸಂಗೀತ ಎವೂರ್, ಪ್ರಿಯಾ, ಮಲ್ಲಿಕಾರ್ಜುನ್ ನಾಗರಡ್ಡಿ, ಹಾಗೂ ಇತರರು ಇದ್ದರು.**

### ಹಾಸ್ಟೆಲ್‌ನಲ್ಲೇ ಮಗುವಿಗೆ ಜನ್ಮ ನೀಡಿದ ಬಾಲಕಿ: ವಾರ್ಡನ್ ಬಂಧನ



ಉದಯವಾಹಿನಿ ಚಿತ್ರ

• **ಉದಯವಾಹಿನಿ ಕುಕನೂರ್**

ಹಾಸ್ಟೆಲ್‌ನಲ್ಲೇ ಮಗುವಿಗೆ ಜನ್ಮ ನೀಡಿದ ಅಪ್ರಾಪ್ತ ಬಾಲಕಿ. ಪೋಕ್ಸೊ ಪ್ರಕರಣ ದಾಖಲು, ಆರೋಪಿ ಯುವಕನ ಬಂಧನ ಕುಕನೂರು ಪಟ್ಟಣದ ವಸತಿ ನಿಲಯದಲ್ಲಿ ವಾಸವಿದ್ದು 10 ನೇ ತರಗತಿ ಓದುತ್ತಿದ್ದ ಅಪ್ರಾಪ್ತ ಬಾಲಕಿಗೆ ಬೆಳಗಿನ ಜಾವ ಹೊಟ್ಟೆ ನೋವು ಕಾಣಿಸಿಕೊಂಡು ವಸತಿ ನಿಲಯದಲ್ಲೇ ಗಂಡು ಮಗುವಿಗೆ ಜನ್ಮ ನೀಡಿದ ಅಘಾತಕಾರಿ ಘಟನೆ ವರದಿಯಾಗಿದೆ, ನಂತರ ತಾಯಿ ಮತ್ತು ಮಗುವನ್ನು ಜಿಲ್ಲಾಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ.

ಸ್ಥಳಕ್ಕೆ ಕೊಪ್ಪಳ ಜಿಲ್ಲಾಧಿಕಾರಿ ಸುರೇಶ ಇಟ್ನಾಳ, ಜಿಪಂ ಸಿಇಒ ವರ್ಣಿತ್ ನೇಗಿ, ಮತ್ತು ಎಸ್‌ಪಿ ರಾಮ್ ಅರಸಿದ್ದಿ ಭೇಟಿ ನೀಡಿ ವಿಚಾರಿಸಿದ್ದಾರೆ, ಕುಕನೂರು ಠಾಣೆಯಲ್ಲಿ ಪೋಕ್ಸೊ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿ ಯುವಕ ಮತ್ತು ವಸತಿ ನಿಲಯದ ವಾರ್ಡನ್‌ನನ್ನು ಬಂಧಿಸಿದ್ದಾರೆ.

## ಕೇಣಿ ಬಂದರು ನಿರ್ಮಾಣಕ್ಕೆ ವಿರೋಧ: ಬಂದ್ ಯಶಸ್ವಿ



ಉದಯವಾಹಿನಿ ಚಿತ್ರ

• **ಉದಯವಾಹಿನಿ ಅಂಕೋಲಾ**

ತಾಲ್ಲೂಕಿನ ಕೇಣಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸರ್ವಋತು ಆಳಸಮುದ್ರ ಗ್ರೀನ್‌ಫೀಲ್ಡ್ ಬಂದರು ಯೋಜನೆ ವಿರೋಧಿಸಿ ನಡೆಯುತ್ತಿರುವ ಹೋರಾಟಕ್ಕೆ ಮಂಗಳವಾರ ಒಂದು ವರ್ಷವಾದ ಹಿನ್ನೆಲೆ ಕರೆ ನೀಡಿದ್ದ ಅಂಕೋಲಾ ಬಂದ್ ಯಶಸ್ವಿಯಾಯಿತು.

ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಯೋಜನೆ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ಜನರು ಪಟ್ಟಣದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು. ಬಳಿಕ ಜೈಹಿಂದ್ ವೃತ್ತದಲ್ಲಿ ಪ್ರತಿಭಟನೆ ಸಭೆ ನಡೆಸಲಾಯಿತು.

ಬಂದರು ನಿರ್ಮಾಣ ವಿರೋಧಿ ಹೋರಾಟ ಸಮಿತಿಯ ಪ್ರಮುಖ ಸಂಜೀವ ಬಲೇಗಾರ ಮಾತನಾಡಿ, 'ಕಳೆದೊಂದು ವರ್ಷದಿಂದ ವಿವಿಧ ಹಂತದ ಪ್ರತಿಭಟನೆ ಮಾಡುತ್ತಾ ಬಂದಿದ್ದು, ತಹಶೀಲ್ದಾರ್ ಕಚೇರಿ ಎದುರು 14 ದಿನಗಳಿಂದ ಧರಣಿ ಹಮ್ಮಿಕೊಂಡಿದ್ದೆವು. ಆದರೆ, ಜಿಲ್ಲೆಯ ಜನಪ್ರತಿನಿಧಿಗಳು ಬಂದು ನಮಗೆ ಬೆಂಬಲ ಸೂಚಿಸಲಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಭಾರತೀಯ ಕಿಸಾನ್ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಶಿವರಾಮ ಗಾಂವ್ಕರ್, ಸಾಕಷ್ಟು ಯೋಜನೆಗಳು ಜಿಲ್ಲೆಯ ಬಹು ಭಾಗವನ್ನು ಆವರಿಸಿಕೊಂಡಿದೆ. ಈಗ ಮತ್ತೆ ಖಾಸಗಿ ಬಂದರು ನಿರ್ಮಾಣಕ್ಕೆ ಮುಂದಾಗಿದ್ದು ಇದನ್ನು ಯಾವುದೇ ಕಾರಣಕ್ಕೂ ಆಗಲು ಬಿಡುವುದಿಲ್ಲ' ಎಂದರು. ಕಡಲಜೀವಶಾಸ್ತ್ರಜ್ಞ ವಿ.ಎನ್.ನಾಯಕ, ಕೇಣಿಯಲ್ಲಿ ಬಂದರು ನಿರ್ಮಾಣವಾದರೆ ಹಳ್ಳಿಗಳು ಮಾತ್ರ ಸಮಸ್ಯೆಗೆ ಸಿಲುಕುವುದಿಲ್ಲ. ಪಶ್ಚಿಮ ಘಟ್ಟಗಳಿಗೂ ಹಾನಿಯಾಗುತ್ತದೆ' ಎಂದರು.

ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಅರುಣ ನಾಡಕರ್ಣಿ ಮಾತನಾಡಿ, ಈ ಯೋಜನೆ ಜಾರಿಗೊಂಡರೆ ಇಡೀ ಕರಾವಳಿ ಸೇರಿದಂತೆ ಅಂಕೋಲಾ ತಾಲ್ಲೂಕು ನಾಶವಾಗುತ್ತದೆ ಎಂದರು. ಪ್ರತಿಭಟನೆ ತೀವ್ರತೆ ಹೆಚ್ಚುತ್ತಿದ್ದಂತೆ ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ಸ್ಥಳಕ್ಕೆ ಆಗಮಿಸಿ ಹೋರಾಟಗಾರರೊಂದಿಗೆ ಚರ್ಚಿಸಿದರು.

## ಸಂವಿಧಾನ ದಿನಾಚರಣೆ ಕಾರ್ಯಕ್ರಮ ಆವರಣದೊಳಗೆ ಕಣ್ಣೀರು ಹಾಕಿ ಬಿಕ್ಕಿಬಿಕ್ಕಿ ಅತ್ತ ಮಗು ! ಮನಸೋ ಇಚ್ಚೆ ಥಳಿಸಿ ಅಪ್ರಾಪ್ತ ಮಗುವಿನ ಮೇಲೆ ದೌರ್ಜನ್ಯದ ಘಟನೆ



ಉದಯವಾಹಿನಿ ಚಿತ್ರ

• **ಉದಯವಾಹಿನಿ ಕಾರಟಗಿ**

ಕಾರಟಗಿ ನಗರದಲ್ಲಿ ಶಾಲಾ ಅಪ್ರಾಪ್ತ ಬಾಲಕನೊಬ್ಬನಿಗೆ ವ್ಯಕ್ತಿಯೋರ್ವ ಮನಸೋ ಇಚ್ಚೆ ಥಳಿಸಿದ ಘಟನೆ ನಡೆದಿದೆ. ಕಳ್ಳತನದ ಆರೋಪ ಹೊರಿಸಿ ಬಾಲಕನನ್ನು ಕಪಾಳಕ್ಕೆ ಹಿಗ್ಗಾಮುಗ್ಗ ಥಳಿಸಿ ಬಾರ್ ಮೂಡುವ ಹಾಗೆ ದೌರ್ಜನ್ಯ ಎಸಗಿದ್ದು ಮಗು ಅಳುತ್ತಾ ಭಯದಿಂದಕೆ ಪಿ ಎಸ್ ಆವರಣಕ್ಕೆ ಓಡೋಡಿ ಬಂದಿದ್ದಾನೆ. ಆದರೂ ಬೆನ್ನು ಬಿಡದ ಆ ವ್ಯಕ್ತಿ ಕೆಪಿಎಸ್ ಶಾಲಾ ಆವರಣದಲ್ಲಿ ಬಂದು ಆ ಮಗುವಿಗೆ ಹೆದರಿಸಿದ್ದಾನೆ. ಕೆಪಿಎಸ್ ಶಾಲಾ ಆವರಣದೊಳಗೆ ಸಂವಿಧಾನ ದಿನಾಚರಣೆಯ ಕಾರ್ಯಕ್ರಮ ಮುಗಿದಿತ್ತು. ಎಲ್ಲರೂ ಉಪಹಾರ ಸೇವಿಸುತ್ತಿದ್ದರು. ಆ ಸಂದರ್ಭದಲ್ಲಿ ದೌರ್ಜನ್ಯಕ್ಕೆ ಒಳಗಾದ ಮಗು ಅಧಿಕಾರಿಗಳ ಹತ್ತಿರ ಬಂದಿರುತ್ತಾನೆ. ಅಧಿಕಾರಿಗಳು ಆ ಮಗು ಅಳುವುದನ್ನು ಕಂಡು ಯಾಕೆ ಅಳುತ್ತೀರುವೆ ಎಂದು ಕೇಳಿದ್ದಾರೆ. ಮಗು ಥಳಿಸಿದ ವ್ಯಕ್ತಿಯನ್ನು ತೋರಿಸಿ ಈ ವ್ಯಕ್ತಿ ವಿನಾಕಾರಣ ನನ್ನ ಮೇಲೆ ಹಲ್ಲೆ ಮಾಡಿ ನನಗೆ ಬಡಿಯುತ್ತಿದ್ದಾನೆ ಎಂದು ಅಳುತ್ತಾ ಹೇಳಿದೆ. ಆಗ ಥಳಿಸಿದ ವ್ಯಕ್ತಿ ಈ ಮಗು ನಮ್ಮ ಮನೆ ಹತ್ತಿರ ಕಬ್ಬಿಣದ ರಾಡ್ ಕಳುವು ಮಾಡಿ ಓಡಿ ಬಂದಿದ್ದಾನೆ ಎಂದು ಹೇಳಿದ್ದಾನೆ ಇದಕ್ಕೆ ಪ್ರತಿಕ್ರಿಸಿದ ಅಧಿಕಾರಿಗಳು ಮಗುವಿನ ಮೇಲೆ ಹಲ್ಲೆ ಮಾಡಿದ್ದು ತಪ್ಪು ಎಂದಿದ್ದಾರೆ ಕಾನೂನು ಸಂಘರ್ಷಕ್ಕೆ ಒಳಗಾದ ಅಪ್ರಾಪ್ತ ಬಾಲಕನ ಮೇಲೆ ಹಲ್ಲೆ ಮಾಡಿರುವುದು ಕಾನೂನುಬಾಹಿರ ಎಂದು ಹೇಳಿದಾಗ ಆ ವ್ಯಕ್ತಿ ಪಟ್ಟಣದ ಆಸ್ಪತ್ರೆ ಯೊಂದರಲ್ಲಿ ಚಿಕಿತ್ಸೆ ನೀಡಲು ಕರೆದುಕೊಂಡು ಹೋಗಿದ್ದಾನೆ.

ಕರ್ನಾಟಕ ರಾಜ್ಯ ಮಕ್ಕಳ ಸುರಕ್ಷತಾ ನೀತಿ 2016 ರ ಪ್ರಕಾರ ಮಕ್ಕಳ ರಕ್ಷಣೆ ಮತ್ತು ಮಕ್ಕಳ ಮೇಲೆ ದೌರ್ಜನ್ಯದಂತಹ ಘಟನೆಗಳು ನಡೆಯದಂತೆ ಸೂಕ್ತ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕೆಂದು ಮಕ್ಕಳ ರಕ್ಷಣಾ ಆಯೋಗ ಆದೇಶದ ಸುತ್ತೋಲೆಗಳನ್ನು ಹೊರಡಿಸಿರುತ್ತದೆ. ಆದರೂ ರಾಜ್ಯದ್ಯಂತ ಮಕ್ಕಳ ಮೇಲೆ ಹಲ್ಲೆಗಳು ನಡೆಯುತ್ತಿವೆ ಹಾಗೂ ಹಲ್ಲೆಗಳನ್ನು ನಡೆಸಿದವರ ವಿರುದ್ಧ ಕಠಿಣ ಕ್ರಮಗಳು ಕೂಡ ಜರಗಿಸಲಾಗುತ್ತಿದೆ, ಆದಾಗ್ಯೂ ಕಾರಟಗಿ ನಗರದಲ್ಲಿ ಅಪ್ರಾಪ್ತ ಬಾಲಕನ ಮೇಲೆ ನಡೆದಿರುವ ಹಲ್ಲೆ ಖಂಡನಾರ್ಹ, ಕೂಡಲೆ ಮಕ್ಕಳ ರಕ್ಷಣಾ ಇಲಾಖೆ ಹಲ್ಲೆಗೊಳಗಾದ ಮಗುವಿಗೆ ಆತ್ಮಸ್ಥೈರ್ಯ ನೀಡಿ ಆ ಮಗು ಮಾನಸಿಕವಾಗಿ ಕುಗ್ಗಿ ಹೋಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯ ಮತ್ತು ಹಲ್ಲೆ ಮಾಡಿದ ವ್ಯಕ್ತಿಯ ವಿರುದ್ಧ ಕ್ರಮ ಜರುಗಿಸಬೇಕಾಗಿದೆ.

**ಸೂಕ್ತ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು**

## ಪಟ್ಟಣದೆಲ್ಲಡೆ ಸಂವಿಧಾನ ಸಮರ್ಪಣಾ ದಿನಾಚರಣೆ

• **ಉದಯವಾಹಿನಿ ಕೆಂಭಾವಿ**

ಪಟ್ಟಣದ ಸರ್ಕಾರಿ ಮಾದರಿಯ ಪ್ರಾಥಮಿಕ ಶಾಲೆಯಲ್ಲಿ ಸಂವಿಧಾನದ ದಿನವನ್ನು ವಿಶಿಷ್ಟವಾಗಿ ಆಚರಿಸಲಾಯಿತು. ಭಾರತದ ಸಂವಿಧಾನ ದಿನ. ಪ್ರತಿ ವರ್ಷ ನವೆಂಬರ್ 26 ರಂದು ಭಾರತದ ಸಂವಿಧಾನ ದಿನವನ್ನಾಗಿ ಆಚರಣೆ ಮಾಡಲಾಗುತ್ತದೆ. ಸರ್ಕಾರಿ ಕಚೇರಿಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಈ ದಿನವನ್ನು ಆಚರಣೆ ವಿಶೇಷವಾಗಿದೆ.

ಅದರಲ್ಲು ಶಾಲಾ, ಕಾಲೇಜುಗಳಲ್ಲಿ ಈ ದಿನವನ್ನು ಸಂಭ್ರಮದಿಂದ ಆಚರಣೆ ಮಾಡುವುದರ ಮೂಲಕ ಈ ದಿನದ ಪ್ರಾಮುಖ್ಯತೆಯನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು ಸಂವಿಧಾನ ಸಮರ್ಪಣೆಯ ದಿನ ಅಂಗವಾಗಿ ಸಹ ಶಿಕ್ಷಕಿಯರಾದ ನೀಲಮ್ಮ ಬಿ ಮಲ್ಲೆ ಅವರು ಸಂವಿಧಾನದ ಪ್ರಸ್ತಾವನೆ ಗೀತೆಗೆ ವಿದ್ಯಾರ್ಥಿ ಗಳೊಂದಿಗೆ ನೃತ್ಯರೂಪಕ ಮಾಡಿ ಗಮನ ಸೆಳೆದರು. ಈ ಸಂದರ್ಭದಲ್ಲಿ ದಲಿತ ಮುಖಂಡ ಶರಣಪ್ಪ ಗಾಯಕ್ವಾಡ್ ಮಾತನಾಡಿ ಸಂವಿಧಾನವು ಎಲ್ಲರಿಗೂ ಸಮಾನತೆಯ ಸಮಾಬಾಳು ಕಲಿಸಿಕೊಟ್ಟಿದೆ ಎಲ್ಲರೂ ಒಂದೇ ಎಂಬ ಭಾವನೆ ಸಂವಿಧಾನದಿಂದ ತಿಳಿದುಕೊಂಡಿದ್ದೇವೆ. ಸಂವಿಧಾನದ ಅಡಿಯಲ್ಲಿ ನಾವೆಲ್ಲರೂ ಬದುಕುತ್ತಿದ್ದೇವೆ ವಿದ್ಯಾರ್ಥಿಗಳಿಗೆ ಅನೇಕ ರೀತಿಯ ಸೌಲಭ್ಯಗಳು ದೊರಕುತ್ತಿವೆ ಧರ್ಮ ಜಾತಿ ಎಲ್ಲವನ್ನು ಮರೆತು ಸೌಹಾರ್ದತೆಯಿಂದ ನಾವೆಲ್ಲರೂ ಇದ್ದೇವೆ ಎಂದರು. ಶಿಕ್ಷಣದಿಂದ ಕ್ರಾಂತಿ ಸಾಧ್ಯ. ಜ್ಞಾನಕ್ಕಾಗಿ ಶಿಕ್ಷಣವನ್ನು ನಾವೆಲ್ಲರೂ ಪಡೆಯಬೇಕೆಂದರು. ಈ ಸಂದರ್ಭದಲ್ಲಿ ದಲಿತ ಮುಖಂಡರು ವಿದ್ಯಾರ್ಥಿಗಳು ಸಹ ಶಿಕ್ಷಕರು ಅನೇಕರು ಇದ್ದರು.



ಉದಯವಾಹಿನಿ ಚಿತ್ರ

**ಕೆಂಭಾವಿ: ಪಟ್ಟಣದ ಪದವಿ ಪೂರ್ವ ಕಾಲೇಜುಗಳಲ್ಲಿ ಸಂವಿಧಾನ ದಿನಾಚರಣೆ (ಸಮರ್ಪಣೆ) ಆಚರಣೆ ಮಾಡಲಾಯಿತು ಸಂವಿಧಾನದ ಪೂರ್ವ ಪೀಠಿಕೆ ಪಠಣ ಮಾಡಿದರು. ಭಾರತೀಯ ಸಂವಿಧಾನದ ಮಹತ್ವ, ಅದರ ಘೋಷಣೆ, ಹಕ್ಕುಗಳ ಕುರಿತು ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗಳಿಗೆ ತಿಳಿವು ನೀಡಲಾಯಿತು. ಉಪನ್ಯಾಸಕರಾದ ಬಸಣ್ಣ ಪೂಜಾರಿ, ಈರಮ್ಮ,ಶಿವಲೀಲಾ,ನಿರ್ಮಲಾ,ಭೀಮರಾಯ, ದ್ವಿ.ಸ ಬಸವರಾಜ್, ದಲಿತ ಮುಖಂಡ ಪರಶುರಾಮ ಮಾಲಹಳ್ಳಿಕರ, ವಿದ್ಯಾರ್ಥಿಗಳು ಇದ್ದರು.**

**ಯಾಳಗಿ: ಪಟ್ಟಣದ ಸಮೀಪ ಇರುವ ಯಾಳಗಿ ಗ್ರಾಮದಲ್ಲಿ ಸಂವಿಧಾನ ಸಮರ್ಪಣೆ ನಾಚರಣೆಯನ್ನು ಡಾ ಬಾಬಾಸಾಹೇಬ್ ಅಂಬೇಡ್ಕರ್ ಚೌಕ್‌ದಲ್ಲಿ ಆಚರಿಸಿದರು. ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸತೀಶ್ ಆಲಗೂರು ಕಾರ್ಯಕ್ರಮದಲ್ಲಿ ಭಾಗವಹಿಸಿದರು ಮೊದಲಿಗೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವ ಚಿತ್ರಕ್ಕೆ ಪುಷ್ಪ ಅರ್ಪಿಸಿದರು. ನಂತರ ಸಂವಿಧಾನ ಪೂರ್ವ ಪೀಠಿಕೆ ಓದಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನೆ ಸಂಚಾಲಕರಾದ ಶಿವಶರಣ ಯಾಳಗಿ, ಮುಖ್ಯ ಗುರುಗಳಾದ ಸಿದ್ದನಗೌಡ ಹೊಸಮನಿ, ಗೀತಾ ಮೇಡಂ ಮಾಲಿ ಪಾಟೀಲ್, ಶರಣು ಗೊಸಲ್,ಶಾರದ್ ಮೇಡಂ ವಸ್ತ್ರದ, ಶಂಕರ ಗುರಗಳು,ಸಂಜು, ಶಿಲ್ಪಾ ಕಲಕೇರಿ, ಸಂಗೀತ ಎವೂರ್, ಪ್ರಿಯಾ ಮೇಡಂ, ಮಲ್ಲಿಕಾರ್ಜುನ್ ನಾಗರಡ್ಡಿ, ಖಂಡಪ್ಪ ಯಾಳಗಿ,ಮಂಜು ಜಲಪುರ ,ರವಿ ನಾಗರಡ್ಡಿ, ಶಂಕರ್ ಜಲಾಪುರ್, ಅನೇಕರು ಇದ್ದರು.**

**ಕೆಂಭಾವಿ: ಶ್ರೀ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸಂವಿಧಾನ ಸಮರ್ಪಣೆ ದಿನ ಆಚರಿಸಲಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಶಾಲಾ ಸಿಬ್ಬಂದಿಗಳು ಶಿಕ್ಷಕರು ಇದ್ದರು.**

# ಪಡಿತರ ಅಕ್ಕಿ ಅಕ್ರಮ ದಂಧೆ ಕಡಿವಾಣಕ್ಕೆ ಸೂಚನೆ

### • ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಸಚಿವ ಆರ್.ಬಿ. ತಿಮ್ಮಾಪುರ

• **ಉದಯವಾಹಿನಿ ಬಾಗಲಕೋಟೆ**

ಜಿಲ್ಲೆಯಲ್ಲಿ ಪಡಿತರ ಅಕ್ಕಿಯ ಅಕ್ರಮ ಮಾರಾಟ ದಂಧೆ ರಾಜಾರೋಷವಾಗಿ ನಡೆಯುತ್ತಿದೆ. ಅವರಿಗೆ ಯಾರದ್ದೂ ಭಯವಿಲ್ಲ. ಒಬ್ಬರ ಕೊಲೆ ಆಗಿದೆ. ಅಧಿಕಾರಿಗಳು ಏನು ಮಾಡುತ್ತಿದ್ದೀರಿ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ತರಾಟೆಗೆ ತೆಗೆದುಕೊಂಡರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಪಂಚಾಯಿತಿ ಎರಡನೇ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿದ್ದ ಅವರು, ಕಾಳಸಂತೆಯಲ್ಲಿ ಪಡಿತರ ಧಾನ್ಯ ಮಾರಾಟವಾಗುತ್ತಿದ್ದರೂ, ಅಧಿಕಾರಿಗಳು ಸೂಕ್ತ ಕ್ರಮವಹಿಸದಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಆಹಾರ ಇಲಾಖೆ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ಜಿಲ್ಲೆಯಲ್ಲಿ ಎರಡು ವರ್ಷಗಳಲ್ಲಿ 25 ಪ್ರಕರಣಗಳನ್ನು 43 ಜನರ ವಿರುದ್ಧ ದಾಖಲಿಸಲಾಗಿದೆ' ಎಂದರು. ಸಚಿವ ತಿಮ್ಮಾಪುರ, ಅಕ್ರಮವಾಗಿ ಪಡಿತರ ಅಕ್ಕಿ ಮಾರಾಟ ಮಾಡುವವರಿಗೆ ಏನು ಶಿಕ್ಷೆ ಇದೆ' ಎಂದು ಪ್ರಶ್ನಿಸಿದರು. ಆಗ ಕಂಕಣವಾಡಿ, ಆರು ತಿಂಗಳ ಜೈಲು ಶಿಕ್ಷೆ ಇದೆ ಎಂದರು. ಇಲ್ಲಿಯವರೆಗೆ ಎಷ್ಟು ಜನರಿಗೆ ಶಿಕ್ಷೆಯಾಗಿದೆ ಎಂಬ ಸಚಿವರ ಪ್ರಶ್ನೆಗೆ ಅಧಿಕಾರಿ ನಿರುತ್ತರರಾದರು.

ಜಾಗೃತ ಸಮಿತಿ ಸಭೆಯಲ್ಲಿ ಎಷ್ಟು ಜನರಿದ್ದೀರಿ. ಎಷ್ಟು ಸಭೆಗಳನ್ನು ಮಾಡಿದ್ದೀರಿ ಎಂದು ಸಚಿವರು ಪ್ರಶ್ನಿಸಿದರು. ಅದಕ್ಕೆ ಕಂಕಣವಾಡಿ, ಸರ್ಕಾರದ ನಾಮನಿರ್ದೇಶನವಾಗಿಲ್ಲ ಎಂದರು. ಅದಕ್ಕೆ ಸಿಟ್ಟಿಗೆದ್ದ ಸಚಿವರು, ಸಭೆಯ ದಿಕ್ಕು ತಪ್ಪಿಸಬೇಡಿ. ಈಗಾಗಲೇ ಇರುವವರು ಏಷ್ಟು ಮಾಡಿದ್ದೀರಿ. ಅದನ್ನು ಮೊದಲು ಹೇಳಿ ಎಂದಾಗ, ಅಧಿಕಾರಿ ಯಾವುದೇ ಸಭೆ ಮಾಡಿಲ್ಲ ಎಂದರು. ಶಾಸಕ ಜೆ.ಟಿ. ಪಾಟೀಲ ಮಾತನಾಡಿ, ನಿಮಗೂ ಅಕ್ಕಿಯ ಕಾಳಸಂತೆಯ ಬಗ್ಗೆ ಗೊತ್ತಿದೆ. ಆದರೂ, ಕ್ರಮಕೈಗೊಳ್ಳಲು ಮುಂದಾಗುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

> **ಮುಧೋಳದಿಂದ ಸಚಿವರಾದವರು ಮುಧೋಳ ಮಾತ್ರ ಅಭಿವೃದ್ಧಿ ಮಾಡುತ್ತಾರೆ. ಜಿಲ್ಲೆಗೆ ಆದ್ಯತೆ ನೀಡದಿದ್ದರೆ ಜನ ಮನೆಗೆ ಕಳುಹಿಸುತ್ತಾರೆ. -ಸಿದ್ದು ಸವದಿ, ಶಾಸಕ**



ಉದಯವಾಹಿನಿ ಚಿತ್ರ

> **ಬಿಸಿಯೂಟಕ್ಕೆ ಕಳೆತ ತೊಗರಿ ಕೊಳೆತ ಮೊಟ್ಟೆ ನೀಡಲಾಗುತ್ತಿದೆ. ಅಂತವರ ವಿರುದ್ಧ ಕ್ರಮಕೈಗೊಳ್ಳಬೇಕು. -ಜೆ.ಟಿ. ಪಾಟೀಲ ಶಾಸಕ**

ಶ್ರೀಶೈಲ ಕಂಕಣವಾಡಿ, 'ದಾಳಿ ಮಾಡಿದ್ದೇವೆ' ಎಂದರು. ಆಗ ಮಧ್ಯಪ್ರವೇಶಿಸಿದ ಶಾಸಕ ಸಿದ್ದು ಸವದಿ, ಪಿ.ಎಚ್. ಪೂಜಾರ, ದಾಳಿ ಮಾಡಿದ್ದೇವೆ ಎಂದು ತೋರಿಸಲಿಕ್ಕೆ ಮಾಡಿದರೆ ಆಗುವುದಿಲ್ಲ, ಅಕ್ರಮ ಮಾರಾಟ ಸಂಪೂರ್ಣವಾಗಿ ಬಂದ್ ಆಗುವಂತೆ ಕ್ರಮಕೈಗೊಳ್ಳಬೇಕು' ಎಂದರು.

ಜೆ.ಟಿ. ಪಾಟೀಲ ಮಾತನಾಡಿ, 'ಕಾಳಸಂತೆಯ ಹುಲಿ ಹಿಡಿಯಲಿಕ್ಕೆ ತಯಾರಿಲ್ಲ, ಇಲಿ ಮಾತ್ರ ಹೊಡೆಯುತ್ತಿದ್ದೀರಿ. ಎದೆ ಮೇಲೆ ಕೈಯಿಟ್ಟುಕೊಂಡು ಹೇಳಿ. ಅಕ್ರಮ ನಡೆಯುವುದು ನಿಮಗೆ ಗೊತ್ತಿಲ್ಲವಾ' ಎಂದು ಪ್ರಶ್ನಿಸಿದರು. ಜಿಲ್ಲಾಧಿಕಾರಿ ಸಂಗಪ್ಪ, ಅಕ್ಕಿ ಅಕ್ರಮ ಮಾರಾಟದ ಬಗ್ಗೆ ಸಾರ್ವಜನಿಕರು ಮಾಹಿತಿ ನೀಡಿದರೆ ಗೋಪ್ಯವಾಗಿಡಲಾಗುವುದು' ಎಂದರು. ಆಗ ಶಾಸಕ ಪಾಟೀಲ, ಇವರೇ ಅಕ್ರಮ ಮಾರಾಟ ಮಾಡುವವರಿಗೆ ಫೋನ್ ಮಾಡಿ ಹೇಳುತ್ತಾರೆ' ಎಂದರು.ಸಚಿವ ತಿಮ್ಮಾಪುರ ಮಾತನಾಡಿ, 'ಪತ್ರಿಕೆಗಳಲ್ಲಿ ಅಕ್ರಮ ಪಡಿತರ ಬಗ್ಗೆ ಬರುತ್ತಿದೆ. ಆದರೂ, ಕ್ರಮವಹಿಸಿಲ್ಲ, ಸರ್ಕಾರದ ಇಮೇಜ್‌ಗೆ ಇದರಿಂದ ಧಕ್ಕೆಯಾಗುವುದಿಲ್ಲವೇ? ಆಹಾರ, ಪೊಲೀಸ್, ತಹಶೀಲ್ದಾರ್, ಉಪವಿಭಾಗಾಧಿಕಾರಿ ಎಲ್ಲರೂ ಸೇರಿ ಅಕ್ರಮ ತಡೆಯಿರಿ. ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕು' ಎಂದು ಜಿಲ್ಲಾಧಿಕಾರಿಗೆ ಸೂಚಿಸಿದರು.

**ಯಂತ್ರ ಬಳಕೆ ತಡೆಯಿರಿ**

**ಅಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಆಂಧ್ರಪ್ರದೇಶದಿಂದ ಬಂದ ಗುಂಪು ಮೀನುಗಾರಿಕೆ ನಡೆಸುವುದನ್ನು ತಡೆಯಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಸೂಚಿಸಿದರು. ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕಿ ಅಂಜನಾದೇವಿ ಟಿ ಮಾತನಾಡಿ ಆಂಧ್ರದಿಂದ ಬಂದು ಮೀನುಗಾರಿಕೆ ನಡೆಸುತ್ತಿರುವವರ ಆರು ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಮೀನುಗಾರಿಕೆ ನೀಡಲು ನಿಯಮಗಳಿವೆ. ಉಲ್ಲಂಘಿಸಿದರೆ ಕ್ರಮಕೈಗೊಳ್ಳಲು ಯಾವುದೇ ನಿಯಮಗಳಿಲ್ಲ. ಈ ಕುರಿತು ಸರ್ಕಾರಕ್ಕೆ ಪ್ರಸ್ತಾವ ಕಳುಹಿಸಿದ್ದೇನೆ ಎಂದರು.**

> **ಹಿನ್ನೀರಿನಲ್ಲಿ 26 ಸಾವಿರ ಟನ್ ಮೀನು ಹಿಡಿಯುತ್ತಿದ್ದು ಅಂದಾಜು ರೂ.265 ಕೋಟಿ ವಹಿವಾಟು ನಡೆಯುತ್ತಿದೆ. ಸರ್ಕಾರಕ್ಕೆ ಆದಾಯ ಬರುತ್ತಿಲ್ಲ ಎಂದು ಹೇಳಿದರು. ಸಚಿವ ತಿಮ್ಮಾಪುರ ಮೀನುಗಾರಿಕೆ ಇಲಾಖೆ ಹಿರಿಯ ಅಧಿಕಾರಿ ಕೆಬಿಜೆಎನ್ ಸೇರಿದಂತೆ ಸಂಬಂಧಿಸಿದಂತೆ ಅಧಿಕಾರಿಗಳ ಸಭೆ ಕರೆಯಿರಿ. ಚರ್ಚಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳೋಣ. -ಶಶಿಧರ ಕುರೇರ, ಜಿಲ್ಲಾ ಪಂ.ಸಿಇಒ**

ಶಾಂಘೈ ವಿಮಾನ ನಿಲ್ದಾಣದಲ್ಲಿ ಭಾರತೀಯ ಮಹಿಳೆಗೆ ಕಿರುಕುಳ ಘಟನೆ ಬಗ್ಗೆ ಚೀನಾಗೆ ಭಾರತ ಖಡಕ್ ಸಂದೇಶ

# ಅರುಣಾಚಲ ಪ್ರದೇಶ ಭಾರತದ ಅವಿಭಾಜ್ಯ ಅಂಗ

**ಹೊಸದಿಲ್ಲಿ:** ಲಂಡನ್‌ನಲ್ಲಿ ನೆಲೆಸಿರುವ ಅರುಣಾಚಲ ಮೂಲದ ಭಾರತೀಯ ಮಹಿಳೆಯನ್ನು ಚೀನಾ ಆಕೆಯ ಭಾರತೀಯ ಪಾಸ್ ಪೋರ್ಟ್ ಅಮಾನ್ಯ ಎಂದು ಹೇಳಿ 18 ಗಂಟೆಗಳ ಕಾಲ ಆಕೆಯನ್ನು ಬಂಧಿಸಿ, ಕಿರುಕುಳ ನೀಡಿದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮೊದಲಬಾರಿಗೆ ಅಧಿಕೃತ ಪ್ರತಿಕ್ರಿಯೆ ನೀಡಿರುವ ಭಾರತದ ವಿದೇಶಾಂಗ ಸಚಿವಾಲಯ ಚೀನಾದ ಈ ನಡೆಯನ್ನು ಖಂಡಿಸಿದ್ದು, ಅರುಣಾಚಲ ಪ್ರದೇಶ ಭಾರತದ ಅವಿಭಾಜ್ಯ ಅಂಗ ಎಂದು ಗಟ್ಟಿಯಾಗಿ ಪುನರುಚ್ಚರಿಸಿದೆ.

**ಅರುಣಾಚಲ ಪ್ರದೇಶ ಭಾರತದ ಅವಿಭಾಜ್ಯ ಅಂಗ ಎಂದು ಭಾರತದ ಖಡಕ್ ಸಂದೇಶ:** ಚೀನಾ ಅರುಣಾಚಲ ತನ್ನ ದೇಶದ ಭೂಭಾಗ ಎಂದು ಮತ್ತೊಮ್ಮೆ ಪುನರುಚ್ಚರಿಸುವ ಮೂಲಕ ಅರುಣಾಚಲ ಪ್ರದೇಶದ ಮೇಲಿನ ಭಾರತದ ಸಾರ್ವಭೌಮತ್ವವನ್ನು ಪ್ರಶ್ನಿಸಿ ವಿವಾದಕ್ಕೆ ಎಡೆ ಮಾಡಿಕೊಟ್ಟ ಬೆನ್ನಲ್ಲೆ, ಭಾರತದ ವಿದೇಶಾಂಗ ವ್ಯವಹಾರಗಳ ವಕ್ತಾರ ರಣಧೀರ್ ಜೈಸ್ವಾಲ್ ಅರುಣಾಚಲ ಪ್ರದೇಶ ಭಾರತದ ಅವಿಭಾಜ್ಯ, ಬೇರ್ಪಡಿಸಲಾಗದ ಭಾಗವಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಈ ಕುರಿತು ಮಾತನಾಡಿರುವ ಜೈಸ್ವಾಲ್ ಅರುಣಾಚಲ ಪ್ರದೇಶದ ಭಾರತೀಯ ಪ್ರಜೆಯೊಬ್ಬರು ಮಾನ್ಯ ಪಾಸ್‌ಪೋರ್ಟ್ ಹೊಂದಿದ್ದು, ಜಪಾನ್‌ಗೆ ಪ್ರಯಾಣ ಬೆಳೆಸುವಾಗ ಶಾಂಘೈ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಸಾಗುತ್ತಿದ್ದಾಗ ಅವರನ್ನು ಅನಿಯಂತ್ರಿತವಾಗಿ ಬಂಧಿಸಿದ ಬಗ್ಗೆ ಚೀನಾದ ವಿದೇಶಾಂಗ ಸಚಿವಾಲಯ ನೀಡಿದ ಹೇಳಿಕೆಗಳನ್ನು ನಾವು ಗಮನಿಸಿದ್ದೇವೆ ಎಂದು ಹೇಳಿದ್ದಾರೆ. ಅರುಣಾಚಲ ಪ್ರದೇಶ ಭಾರತದ ಅವಿಭಾಜ್ಯ, ಬೇರ್ಪಡಿಸಲಾಗದ ಭಾಗವಾಗಿದೆ, ಮತ್ತು ಇದು ಸ್ವಯಂ-ಸ್ಪಷ್ಟ ಸತ್ಯ. ಚೀನಾದ ಕಡೆಯಿಂದ ಯಾವುದೇ ನಿರಾಕರಣೆ ಬಂದರೂ ಈ ನಿರ್ವಿವಾದದ ವಾಸ್ತವವನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಅರುಣಾಚಲದ ಮೇಲೆ ಚೀನಾ ಸಾರ್ವಭೌಮತ್ವ ಸಾಧಿಸುವ ಪ್ರಯತ್ನವನ್ನು ಖಂಡಿಸಿದ್ದಾರೆ.



> ಅಲ್ಲದೆ, ಅಂತರರಾಷ್ಟ್ರೀಯ ವಿಮಾನ ಪ್ರಯಾಣವನ್ನು ನಿಯಂತ್ರಿಸುವ ಹಲವಾರು ಸಂಪ್ರದಾಯಗಳನ್ನು ಉಲ್ಲಂಘಿಸಿರುವ ತಮ್ಮ ಕ್ರಮಗಳನ್ನು ವಿವರಿಸಲು ಚೀನಾದ ಅಧಿಕಾರಿಗಳಿಗೆ ಇನ್ನೂ ಸಾಧ್ಯವಾಗಿಲ್ಲ. ಚೀನಾದ ಅಧಿಕಾರಿಗಳ ಕ್ರಮಗಳು ಎಲ್ಲಾ ದೇಶಗಳ ಪ್ರಜೆಗಳಿಗೆ 24 ಗಂಟೆಗಳವರೆಗೆ ವೀಸಾ ಮುಕ್ತ ಸಾರಿಗೆಯನ್ನು ಅನುಮತಿಸುವ ತಮ್ಮದೇ ಆದ ನಿಯಮಗಳನ್ನು ಉಲ್ಲಂಘಿಸಿದೆ ಎಂದು ಹೇಳಿದ್ದಾರೆ.

**ಅದು ಚೀನಾದ ಭೂಭಾಗ**

**ಚೀನಾ ಹೇಳೋದೇನು?:** ಇನ್ನು, ಈ ಘಟನೆ ಕುರಿತು ಪತ್ರಿಕಾಗೋಷ್ಠಿ ನಡೆಸಿರುವ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾವೋ ನಿಂಗ್ ಅರುಣಾಚಲ ಎಂದು ಭಾರತ ಉಲ್ಲೇಖಿಸುವ ಝಂಗ್ನಾನ್ ಚೀನಾದ ಪ್ರದೇಶವಾಗಿದೆ. ಭಾರತವು ಅಕ್ರಮವಾಗಿ ಸ್ಥಾಪಿಸಿದ ಅರುಣಾಚಲ ಪ್ರದೇಶವನ್ನು ಚೀನಾ ಎಂದಿಗೂ ಗುರುತಿಸಿಲ್ಲ ಎಂದು ಹೇಳಿದ್ದಾರೆ.

ಅಲ್ಲದೆ, ವಿಮಾನ ನಿಲ್ದಾಣದ ಅಧಿಕಾರಿಗಳು ಕಾನೂನು, ನಿಯಮಗಳ ಪ್ರಕಾರವೇ ಆಕೆಯನ್ನು ತಪಾಸಣೆ ಮಾಡಿದ್ದೇವೆ. ಆ ಸಮಯದಲ್ಲಿ ನಾವು ಆಕೆಗೆ ಯಾವುದೇ ಕಿರುಕುಳವನ್ನಾಗಲಿ, ದೌರ್ಜನ್ಯವನ್ನಾಗಿ ಮಾಡಿಲ್ಲ. ಬದಲಾಗಿ ನಾವು ಆಕೆಗೆ ಆಹಾರ ಹಾಗೂ ನೀರಿನ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿದ್ದಾರೆ.

ಲಂಡನ್‌ನಲ್ಲಿ ನೆಲೆಸಿರುವ ಅರುಣಾಚಲ ಮೂಲದ ಪೆಮಾ ವಾಂಗ್ ಥಾಂಗ್‌ಡೋಕ್ ಎಂಬ ಭಾರತೀಯ ಮಹಿಳೆ ಜನ್ಮಸ್ಥಳದ ಆಧಾರದ ಮೇಲೆ ಮಹಿಳೆಯ ಪೌರತ್ವವನ್ನೇ ಪ್ರಶ್ನಿಸಿ ಸುಮಾರು 18 ಗಂಟೆಗಳ ಕಾಲ ಆಕೆಯನ್ನು ಬಂಧಿಸಿರುವುದಲ್ಲದೆ, ಅರುಣಾಚಲ ಭಾರತದ ಭೂಭಾಗವಲ್ಲ ಬದಲಿಗೆ ಅದು ಚೀನಾದ ಭೂಭಾಗ ಎಂದು ಹೇಳಿ ಆಕೆಯನ್ನು ಚೀನಾದ ಪಾಸ್ ಪೋರ್ಟ್ ಪಡೆಯುವಂತೆ ಒತ್ತಾಯಿಸಿದೆ. ಈ ಮೂಲಕ ಚೀನಾ ಮತ್ತೆ ಗಡಿ ವಿಚಾರದಲ್ಲಿ ತನ್ನ ಬುದ್ದಿಯನ್ನು ತೋರಿಸಿದೆ. ಉಭಯ ದೇಶಗಳು ಸಂಬಂಧಗಳನ್ನು ಸಹಜ ಸ್ಥಿತಿಗೆ ತರಲು ಪ್ರಯತ್ನಿಸುತ್ತಿರುವ ಸಮಯದಲ್ಲಿ ಚೀನಾದ ಈ ವರ್ತನೆ ಮತ್ತೆ ಸಂಬಂಧವನ್ನು ಹದಗೆಡಿಸುವ ಸಾಧ್ಯತೆಗಳಿವೆ.

- ಚೀನಾದಲ್ಲಿ ಅರುಣಾಚಲ ಮೂಲದ ಭಾರತೀಯ ಮಹಿಳೆಯನ್ನು ಬಂಧಿಸಿ ಕಿರುಕುಳ ವಿಚಾರಕ್ಕೆ ಖಂಡನೆ ವ್ಯಕ್ತಪಡಿಸಿದ ಭಾರತ
- ಅರುಣಾಚಲ ಪ್ರದೇಶ ಭಾರತದ ಅವಿಭಾಜ್ಯ ಅಂಗ, ಅದನ್ನು ಭಾರತದಿಂದ ಬೇರ್ಪಡಿಸಲು ಸಾಧ್ಯವಿಲ್ಲ ಎಂದು ಚೀನಾಗೆ ಖಡಕ್ ಸಂದೇಶ ರವಾನೆ
- ಭಾರತ ಅರುಣಾಚಲ ಪ್ರದೇಶ ಎಂದು ಹೇಳುವ ಝಂಗ್ನಾನ್ ಚೀನಾದ ಭೂಭಾಗ ಎಂದ ಚೀನಾ ವಿದೇಶಾಂಗ ಸಚಿವಾಲಯ

**ದ್ವಿಪಕ್ಷೀಯ ಸಂಬಂಧಕ್ಕೆ ಅಡ್ಡಗಾಲು**

ಲಂಡನ್‌ನಲ್ಲಿರುವ ಅರುಣಾಚಲ ಮೂಲದ ಮಹಿಳೆಯನ್ನು ಚೀನಾ 18 ಗಂಟೆ ಬಂಧಿಸಿ, ಕಿರುಕುಳ ನೀಡಿದ್ದಕ್ಕೆ ಭಾರತ ತೀವ್ರ ಖಂಡನೆ ವ್ಯಕ್ತಪಡಿಸಿದೆ. ಅರುಣಾಚಲ ಪ್ರದೇಶ ಭಾರತದ ಅವಿಭಾಜ್ಯ ಅಂಗವಾಗಿದ್ದು ಇದನ್ನು ಭಾರತದಿಂದ ಬೇರ್ಪಡಿಸಲು ಸಾಧ್ಯವಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ವಕ್ತಾರ ರಣಧೀರ್ ಜೈಸ್ವಾಲ್ ಖಡಕ್ ಎಚ್ಚರಿಕೆ ನೀಡಿದ್ದಾರೆ. ಅಲ್ಲದೆ, ಚೀನಾದ ಈ ಕ್ರಮವು ಅಂತರಾಷ್ಟ್ರೀಯ ನಿಯಮಗಳನ್ನು ಉಲ್ಲಂಘಿಸಿದೆ ಎಂದು ಭಾರತ ಹೇಳಿದೆ. ಅತ್ತ ಚೀನಾ ಸಹ ಪತ್ರಿಕಾಗೋಷ್ಠಿ ನಡೆಸಿದ್ದು, ಅರುಣಾಚಲ ಪ್ರದೇಶ ಚೀನಾದ ಭೂಭಾಗ ಎಂದು ಮತ್ತೊಮ್ಮೆ ಹಗಲು ಕನಸು ಕಾಣುವ ಹೇಳಿಕೆ ನೀಡಿದೆ. ಹೀಗೆ ಚೀನಾ ತನ್ನ ಹಳೆಯ ವಾದವನ್ನು ಪುನರುಚ್ಚರಿಸಿದ್ದು, ಈಗ ತಾನೇ ಪುನಶ್ಚೇತನಗೊಳ್ಳುತ್ತಿರುವ ದ್ವಿಪಕ್ಷೀಯ ಸಂಬಂಧಕ್ಕೆ ಅಡ್ಡಗಾಲು ಹಾಕುವಂತಿದೆ.

## ಗೋವಾದಲ್ಲಿ ಹುಲಿ ಅಭಯಾರಣ್ಯ। ಸಿಇಸಿ ವರದಿ ಪರಿಶೀಲಿಸಿ ನಿರ್ಧಾರ: ಸಿಎಂ ಸಾವಂತ್

**ಪಣಜಿ:** ಮಹದಾಯಿ ವನ್ಯಜೀವಿ ಧಾಮವನ್ನು ಹೊರಗಿಟ್ಟು ನಾಲ್ಕು ವನ್ಯ ಜೀವಿಧಾಮಗಳನ್ನು ಸೇರಿಸಿ ಗೋವಾ ಹುಲಿ ಅಭಯಾರಣ್ಯ ಸ್ಥಾಪಿಸಬೇಕು ಎಂದು ಕೇಂದ್ರ ಉನ್ನತಾಧಿಕಾರ ಸಮಿತಿ ಶಿಫಾರಸು ಮಾಡಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ವರದಿಯನ್ನು ಪರಿಶೀಲಿಸಿದ ಬಳಿಕ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಕರ್ನಾಟಕದ ಕಾಳಿ ಹುಲಿ ಅಭಯಾರಣ್ಯದ ಕೇಂದ್ರ ಭಾಗಕ್ಕೆ ನೇರವಾಗಿ ಹೊಂದಿಕೊಂಡಿರುವ ಮತ್ತು ಕಡಿಮೆ ಮನೆಗಳನ್ನು ಹೊಂದಿರುವ ನೇತ್ರಾವಳಿ ವನ್ಯಜೀವಿ ಅಭಯಾರಣ್ಯ, ಕೋಟಿಗಾಂವ್ ವನ್ಯಜೀವಿ ಅಭಯಾರಣ್ಯಗಳನ್ನು ಮೊದಲ ಹಂತದಲ್ಲಿ ಪ್ರಸ್ತಾವಿತ ಗೋವಾ ಹುಲಿ ಅಭಯಾರಣ್ಯದ ವ್ಯಾಪ್ತಿಗೆ ಸೇರಿಸಲು ಪರಿಗಣಿಸಬೇಕು ಎಂದು ಸಿಇಸಿ ತನ್ನ ವರದಿಯಲ್ಲಿ ತಿಳಿಸಿದೆ. ಮಹದಾಯಿ–ಕೋಟಿಗಾಂವ್ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಚಟುವಟಿಕೆ ಅಥವಾ ಯೋಜನೆಗಳನ್ನು ಕೈಗೊಳ್ಳಬಾರದು ಎಂದು ಸುಪ್ರೀಂ ಕೋರ್ಟ್ ಸೆಪ್ಟೆಂಬರ್‌ನಲ್ಲಿ ನಿರ್ದೇಶನ ನೀಡಿತ್ತು. ಮಹದಾಯಿ ವನ್ಯಜೀವಿ ಅಭಯಾರಣ್ಯ, ಪಕ್ಕದ ಪ್ರದೇಶಗಳನ್ನು ಹುಲಿ ಸಂರಕ್ಷಿತ ಪ್ರದೇಶವೆಂದು ಅಧಿಸೂಚನೆ ಹೊರಡಿಸುವ ಸಂಬಂಧ ಆರು ವಾರಗಳಲ್ಲಿ ಸಿಇಸಿ ವರದಿ ಸಲ್ಲಿಸಬೇಕು ಎಂದು ಪೀಠ ನಿರ್ದೇಶಿಸಿತ್ತು. ಸಮಿತಿಯು 279 ಪುಟಗಳ ವರದಿಯನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದೆ. ಗೋವಾ ಹುಲಿ ಅಭಯಾರಣ್ಯ ಸ್ಥಾಪಿಸಿ ಗೋವಾ ಸರ್ಕಾರ ಮೂರು ತಿಂಗಳಲ್ಲಿ ಅಧಿಸೂಚನೆ ಹೊರಡಿಸಬೇಕು ಎಂದೂ ಸಿಇಸಿ ಶಿಫಾರಸುಮಾಡಿದೆ.

ಅಧಿಕ ಸಂಖ್ಯೆಯ ಮನೆಗಳು ಇರುವ ಭಗವಾನ್ ಮಹಾವೀರ ವನ್ಯಜೀವಿಧಾಮದ ದಕ್ಷಿಣ ಭಾಗ, ಮಹದಾಯಿ ವನ್ಯಜೀವಿಧಾಮವನ್ನು ಹುಲಿ ಅಭಯಾರಣ್ಯದ ವ್ಯಾಪ್ತಿಗೆ ಸೇರಿಸಿಲ್ಲ. ಈ ಪ್ರದೇಶಗಳನ್ನು ಸೇರಿಸುವ ಮುನ್ನ ನಿರಂತರ ಜಾಗೃತಿ ಮೂಡಿಸಿ ವಿಸ್ತೃತ ಸಮುದಾಯ ಸಮಾಲೋಚನೆಗಳನ್ನು ನಡೆಸುವ ಅಗತ್ಯ ಇದೆ ಎಂದು ಸಮಿತಿ ಸ್ಪಷ್ಟಪಡಿಸಿದೆ.



ಮಹದಾಯಿ ವನ್ಯಜೀವಿಧಾಮ, ಅಸುಪಾಸಿನ ಪ್ರದೇಶಗಳನ್ನು ಹುಲಿ ಅಭಯಾರಣ್ಯವೆಂದು ಘೋಷಿಸಲು ಮೂರು ತಿಂಗಳಲ್ಲಿ ಅಧಿಸೂಚನೆ ಹೊರಡಿಸಬೇಕು ಎಂದು ಬಾಂಬೆ ಹೈಕೋರ್ಟ್‌ನ ಗೋವಾ ಪೀಠವು ಗೋವಾ ಸರ್ಕಾರಕ್ಕೆ 2023ರಲ್ಲಿ ನಿರ್ದೇಶನ ನೀಡಿತ್ತು. ವನ್ಯಜೀವಿಧಾಮದ ಸಮೀಪ ಜನವಸತಿಗಳಿವೆ ಎಂಬ ಕಾರಣಕ್ಕೆ ಮೀಸಲು ಅರಣ್ಯವಾಗಿ ಘೋಷಿಸಲು ಗೋವಾ ಸರ್ಕಾರ ವಿರೋಧ ವ್ಯಕ್ತಪಡಿಸಿತ್ತು.

# 2029ರ ವೇಳೆಗೆ ನ್ಯಾಟೋ ಮೇಲೆ ರಷ್ಯಾ ದಾಳಿ

### ಉಕ್ರೇನ್ ಶಾಂತಿ ಒಪ್ಪಂದದ ನಡುವೆ ಎಚ್ಚರಿಕೆ ನೀಡಿದ ಜರ್ಮನಿ ಹೇಳಿದ್ದೇನು?

**ಬರ್ಲಿನ್:** ರಷ್ಯಾ ಹಾಗೂ ಉಕ್ರೇನ್ ನಡುವಿನ ಸುಮಾರು ಮೂರುವರೆ ವರ್ಷಗಳ ಸುದೀರ್ಘ ಯುದ್ಧ ಅಂತ್ಯಗೊಳಿಸುವ ನಿಟ್ಟಿನಲ್ಲಿ ಟ್ರಂಪ್ ಮಧ್ಯಸ್ಥಿಕೆ ವಹಿಸಿದ್ದು, ಶಾಂತಿ ಒಪ್ಪಂದ ಬಹುತೇಕ ಖಚಿತ ಎಂಬ ಮಾತುಕತೆಗಳು ಕೇಳಿ ಬರುತ್ತಿವೆ. ಈ ಬೆನ್ನಲ್ಲೇ, ಜರ್ಮನಿ ರಷ್ಯಾ ನ್ಯಾಟೋ ರಾಷ್ಟ್ರಗಳ ಮೇಲೆ 2029ರ ವೇಳೆಗೆ ಯುದ್ಧ ನಡೆಸಲು ಸಿದ್ಧತೆ ನಡೆಸುತ್ತಿದೆ ಎಂಬ ಬಾಂಬ್ ಸಿಡಿಸಿದೆ.

**2029ರ ವೇಳೆಗೆ ನ್ಯಾಟೋ ಮೇಲೆ ದಾಳಿಗೆ ರಷ್ಯಾ ಸಿದ್ಧತೆ**

ಈ ಕುರಿತು ಜರ್ಮನ್ ವಿದೇಶಾಂಗ ಕಚೇರಿ ತಮ್ಮ ಅಧಿಕೃತ x ಖಾತೆಯಿಂದ ಸರಣಿ ಪೋಸ್ಟ್‌ಗಳನ್ನು ಹಂಚಿಕೊಂಡಿದ್ದು, ಇದರಲ್ಲಿ ರಷ್ಯಾದ ದೀರ್ಘಕಾಲೀನ ಉದ್ದೇಶಗಳು ಉಕ್ರೇನ್‌ನ ಆಚೆಗೂ ವಿಸ್ತರಿಸಿದೆ ಎಂದು ಎಚ್ಚರಿಸಿದೆ. ಪುಟಿನ್ ಯುರೋಪಿಯನ್ ಒಕ್ಕೂಟ, NATO ಮೇಲೆ ಕಣ್ಣಿಟ್ಟಿದ್ದಾರೆ. ಈ ಕುರಿತು ನಮ್ಮ ಗುಪ್ತಚರ ಸೇವೆಗಳು ಈಗಾಗಲೇ ತುರ್ತು ಎಚ್ಚರಿಕೆಗಳನ್ನು ನೀಡುತ್ತಿವೆ. ಇದರ ಪ್ರಕಾರ, ಕನಿಷ್ಠ ಪಕ್ಷ, 2029 ರ ವೇಳೆಗೆ NATO ವಿರುದ್ಧ ಯುದ್ಧ ಮಾಡಲು ರಷ್ಯಾ ಸಿದ್ಧತೆ ನಡೆಸುತ್ತಿದೆ. ಹಾಗಾಗಿ ನಮ್ಮ ಪಾಲುದಾರರು, ಮಿತ್ರರಾಷ್ಟ್ರಗಳೊಂದಿಗೆ ನಾವು ಮತ್ತಷ್ಟು ರಷ್ಯಾದ ಆಕ್ರಮಣವನ್ನು ತಡೆಯಬೇಕು ಎಂದು ಹೇಳಿದೆ. ಇನ್ನೊಂದು ಪೋಸ್ಟ್‌ನಲ್ಲಿ ಅದೇ ಸಂದೇಶವನ್ನು ಪುನರುಚ್ಚರಿಸುತ್ತಾ ಜರ್ಮನಿ ತನ್ನ ವಿದೇಶಿ, ಭದ್ರತಾ ನೀತಿಯಲ್ಲಿ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಬಯಸುತ್ತದೆ ಮತ್ತು ಅದರ ಅಗತ್ಯವಿದೆ ಎಂದು ತಿಳಿಸಿದೆ.

**ಯುದ್ಧ ಮಾಡಲು ರಷ್ಯಾ ಸಿದ್ಧತೆ**

ಇದೇ ವೇಳೆ ಅಮೆರಿಕಾ ಸಿದ್ಧಪಡಿಸುತ್ತಿರುವ ಶಾಂತಿ ಮಾತುಕತೆಗಳ ಕುರಿತು ಉಲ್ಲೇಖಿಸಿ, ಈಗ ನಡೆಯುತ್ತಿರುವ ಬೆಳವಣಿಗೆಗಳು, ಎಲ್ಲಾ ಮಾತುಕತೆಗಳಿಗೆ ಆಧಾರವಾಗಿ ಉಳಿಯಬೇಕು. ತನ್ನ ನೆರೆಯವರ ಮೇಲೆ ಅಪ್ರಚೋದಿತ ದಾಳಿಯನ್ನು ದಿನದಿಂದ ದಿನಕ್ಕೆ ಮುಂದುವರಿಸಲು ಆಯ್ಕೆ ಮಾಡುವ ರಷ್ಯಾ, ತನ್ನ ಆಕ್ರಮಣಕ್ಕೆ ಜಯ ಸಿಗಬಾರದು ಎಂದು ಒತ್ತಾಯಸಿದೆ.




**ಉಕ್ರೇನ್ ಮೇಲೆ ದಾಳಿ ತೀವ್ರ**

ಇತ್ತ ಶಾಂತಿ ಮಾತುಕತೆಗಳು ನಡೆಯುತ್ತಿದ್ದಂತೆ ರಷ್ಯಾ ಉಕ್ರೇನ್ ಮೇಲೆ ತನ್ನ ಆಕ್ರಮಣವನ್ನು ಮುಂದುವರೆಸಿದ್ದು, ಮಧ್ಯರಾತ್ರಿ 1 ಗಂಟೆ ಸುಮಾರಿಗೆ ಡ್ರೋನ್‌ಗಳು ಮತ್ತು ಕ್ಷಿಪಣಿಗಳು ಕೀವ್‌ನ ವಸತಿ ಪ್ರದೇಶಗಳ ಮೇಲೆ ದಾಳಿ ನಡೆದಿದ್ದು, ಅಪಾರ್ಟ್‌ಮೆಂಟ್‌ಗಳಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, 7 ಸಾವುಗಳು ಸಂಭವಿಸಿವೆ, ಜಪೋರಿಝಿಯಾ ಮೇಲೆ ನಡೆದ ದಾಳಿಯಲ್ಲಿ ಕನಿಷ್ಠ 7 ಎತ್ತರದ ಕಟ್ಟಡಗಳಿಗೆ ಹಾನಿಯನ್ನುಂಟುಮಾಡಿದ್ದು, 12 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ವರದಿಯಾಗಿದೆ.

**ನಾವು ಶಾಂತಿ ಬಯಸುತ್ತೇವೆ ಆದರೆ ಅದು ರಷ್ಯಾದ ಮೇಲೆ ಅವಲಂಬನೆಯಾಗಿದೆ:** ಉಕ್ರೇನ್ ಶಾಂತಿಯನ್ನು ಬಯಸುತ್ತದೆ. ನಾವೆಲ್ಲರೂ ಶಾಂತಿಯನ್ನು ಬಯಸುತ್ತೇವೆ. ಆದರೆ ಈ ಆಸೆ ಈಡೇರುತ್ತದೆಯೇ – ಕನಿಷ್ಠ ಮೊದಲ ಹೆಜ್ಜೆಯಾಗಿ ತಕ್ಷಣದ, ಬೇಷರತ್ತಾದ ಕದನ ವಿರಾಮ ಇರುತ್ತದೆಯೇ ಎಂಬುವುದು ಸಂಪೂರ್ಣವಾಗಿ ಆಕ್ರಮಣಕಾರಿ ದೇಶವಾಗಿರುವ ರಷ್ಯಾವನ್ನು ಅವಲಂಬಿಸಿರುತ್ತದೆ ಎಂದು ಅಂತಿಮ ಪೋಸ್ಟ್‌ನಲ್ಲಿ ಬರೆದುಕೊಂಡಿದೆ. ಅಮೆರಿಕಾ ಮಧ್ಯಸ್ಥಿಕೆಯಲ್ಲಿ ಸಿದ್ಧತೆ ನಡೆಸುತ್ತಿರುವ ಶಾಂತಿ ಒಪ್ಪಂದಕ್ಕೆ ಉಕ್ರೇನ್ ಸಮ್ಮತಿ ನೀಡಿದ ಬೆನ್ನಲ್ಲೆ, ಈ ಎಚ್ಚರಿಕೆ ಬಂದಿದೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮೂಲ 28–ಅಂಶಗಳ ಚೌಕಟ್ಟಿನ ಶಾಂತಿ ಯೋಜನೆಗೆ ತಿದ್ದುಪಡಿಗಳನ್ನು ಸಮ್ಮತಿಸಿದ್ದು, ಅಲ್ಪಸ್ವಲ್ಪ ವಿವರಗಳನ್ನು ಅಂತಿಮಗೊಳಿಸುವುದು ಬಾಕಿ ಉಳಿದಿವೆ ಎಂದು ವರದಿಯಾಗಿದೆ. ಇತ್ತ, ಅಮೆರಿಕಾ ಉಕ್ರೇನ್, ರಷ್ಯಾದ ನಡುವಿನ ಸುದೀರ್ಘ ಯುದ್ಧವನ್ನು ಅಂತ್ಯಗೊಳಿಸಲು ಶಾಂತಿ ಒಪ್ಪಂದಗಳನ್ನು ಮಾಡುತ್ತಿದೆ.

ಆದರೆ ರಷ್ಯಾ ಮಾತ್ರ ತನ್ನ ಆಕ್ರಮಣವನ್ನು ಮುಂದುವರೆಸುತ್ತಿದ್ದು, ಇದರ ಬೆನ್ನಲ್ಲೇ, ಜರ್ಮನಿ ಸಹ ರಷ್ಯಾ ನ್ಯಾಟೋ ರಾಷ್ಟ್ರಗಳ ಮೇಲೆ 2029 ವೇಳೆಗೆ ಆಕ್ರಮಣಕಾರಿ ದಾಳಿ ನಡೆಸಲು ಸಿದ್ದತೆ ನಡೆಸುತ್ತಿದೆ ಎಂದು ಆರೋಪ ಮಾಡಿರುವುದು ಈ ಶಾಂತಿ ಒಪ್ಪಂದದ ಮೇಲೆ ಯಾವ ಪರಿಣಾಮ ಬೀಳಲಿದೆ ಎಂದು ನೋಡಬೇಕಿದೆ.


**ದಾಳಿಯಿಂದ 7 ಜನರು ಸಾವು**

ಅಮೆರಿಕಾ ಅಧ್ಯಕ್ಷ ಟ್ರಂಪ್ ಮಧ್ಯಸ್ಥಿಕೆಯಲ್ಲಿ ರಷ್ಯಾ–ಉಕ್ರೇನ್ ಶಾಂತಿ ಮಾತುಕತೆ ನಡೆಯುತ್ತಿರುವಾಗಲೇ, ಜರ್ಮನಿ ರಷ್ಯಾ 2029ರ ವೇಳೆಗೆ ನ್ಯಾಟೋ ರಾಷ್ಟ್ರಗಳ ಮೇಲೆ ಯುದ್ಧ ನಡೆಸಲು ಸಿದ್ಧತೆ ನಡೆಸುತ್ತಿದೆ ಎಂದು ಬಾಂಬ್ ಸಿಡಿಸಿದೆ. ಪುಟಿನ್ ಯುರೋಪಿಯನ್ ಒಕ್ಕೂಟ, ನ್ಯಾಟೋ ಮೇಲೆ ಕಣ್ಣಿಟ್ಟಿದ್ದು, ಗುಪ್ತಚರ ಇಲಾಖೆಗಳು ಎಚ್ಚರಿಕೆ ನೀಡಿವೆ. ಉಕ್ರೇನ್ ಹಾಗೂ ನ್ಯಾಟೋ ರಾಷ್ಟ್ರಗಳು ಶಾಂತಿ ಬಯಸಿದರೂ, ಅದು ರಷ್ಯಾದ ಮೇಲೆ ಅವಲಂಬಿತವಾಗಿದೆ ಎಂದು ಜರ್ಮನಿ ಹೇಳಿದೆ. ಇತ್ತ ರಷ್ಯಾ ಮಾತ್ರ ಉಕ್ರೇನ್ ಮೇಲೆ ತನ್ನ ದಾಳಿಯನ್ನು ತೀವ್ರಗೊಳಿಸಿದ್ದು, ಮಧ್ಯರಾತ್ರಿ ನಡೆಸಿದ ದಾಳಿಯಿಂದ 7 ಜನರು ಸಾವನ್ನಪ್ಪಿದ್ದಾರೆ.

## ಎಚ್-1ಬಿ ವೀಸಾದಲ್ಲಿ ಹಗರಣ: ಚೆನ್ನೈನಿಂದ 2 ಲಕ್ಷ ವಿತರಣೆ

**ವಾಷಿಂಗ್ಟನ್:** ಅಮೆರಿಕದಲ್ಲಿ ವೃತ್ತಿ ನಿರ್ವಹಿಸುವ ವಲಸಿಗರಿಗೆ ನೀಡಲಾಗುವ ಎಚ್-1ಬಿ ವೀಸಾ ಈಗ ಮತ್ತೊಮ್ಮೆ ವಿವಾದದಲ್ಲಿದೆ. ಚೆನ್ನೈನಲ್ಲಿರುವ ಅಮೆರಿಕನ್ ಕಾನ್ಸುಲೇಟ್‌ನಿಂದ ವಿತರಣೆಯಾದ 2.2 ಲಕ್ಷ ವೀಸಾಗಳಲ್ಲಿ ಹಗರಣ ನಡೆದಿದೆ ಎಂದು ಆರ್ಥಿಕ ತಜ್ಞ ಡಾ. ಡೇವ್ ಬ್ರಾಟ್ ಅವರ ಆರೋಪವು ಈಗ ಮತ್ತೊಮ್ಮೆ ಎಚ್-1ಬಿ ವೀಸಾ ಕುರಿತು ವಿವಾದವನ್ನು ಹುಟ್ಟುಹಾಕಿದೆ. ಚೆನ್ನೈಗೆ ನೀಡಲಾಗಿದ್ದ ಮಿತಿಗಿಂತ 2.5 ಪಟ್ಟು ಹೆಚ್ಚು ಎಚ್-1ಬಿ ವೀಸಾ ನೀಡಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ ಎಂಬ ಬ್ರಾಟ್ ಹೇಳಿಕೆ ಈಗ ಮತ್ತೆ ಅಮೆರಿಕದಲ್ಲಿ ನೆಲೆಸಿರುವ ಭಾರತೀಯ ವೃತ್ತಿಪರರಲ್ಲಿ ಆತಂಕ ಮೂಡಿಸಿದೆ. ಪಾಡ್‌ಕಾಸ್ಟ್‌ನಲ್ಲಿ ಮಾತನಾಡಿರುವ ಬ್ರಾಟ್, ಉದ್ಯಮಗಳು ನಡೆಸಿರುವ ದೊಡ್ಡ ಹಗರಣವನ್ನು ತಾನು ಪತ್ತೆ ಮಾಡಿರುವುದಾಗಿ ಹೇಳಿದ್ದಾರೆ.

ಅಮೆರಿಕ ನೀಡುವ ಎಚ್-1ಬಿ ವೀಸಾದ ಶೇ. 71ರಷ್ಟು ಭಾರತದವರೇ ಪಡೆದಿದ್ದಾರೆ. ಚೀನಾದವರು ಪಡೆದಿದ್ದು ಶೇ 12ರಷ್ಟು ಮಾತ್ರ. ಎಚ್-1ಬಿಇ ವೀಸಾ ಮಿತಿ ಇರುವುದೇ 85 ಸಾವಿರ. ಆದರೆ ಚೆನ್ನೈ ಕೇಂದ್ರದಿಂದ 2.2 ಲಕ್ಷ ವೀಸಾ ನೀಡಲು ಸಂಸತ್ತು ನಿರ್ಧರಿಸಿತ್ತು' ಎಂದು ಆರೋಪಿಸಿರುವ ಬ್ರಾಟ್ ರಿಪಬ್ಲಿಕನ್ ಪಕ್ಷದ ಮಾಜಿ ಸಂಸದ. ಕರ್ನಾಟಕ, ತಮಿಳುನಾಡು, ಕೇರಳ, ತೆಲಂಗಾಣವನ್ನು ಒಳಗೊಂಡ ಚೆನ್ನೈ ಕಾನ್ಸುಲೇಟ್ ಎಚ್-1ಬಿ ವೀಸಾ ವಿತರಣೆಯಲ್ಲೇ ಅತ್ಯಂತ ಒತ್ತಡದ ಕೇಂದ್ರಗಳಲ್ಲಿ ಅಗ್ರಸ್ಥಾನದಲ್ಲಿದೆ. ಅಮೆರಿಕ ಮೂಲದ ನೌಕರರಿಗೆ ಎದುರಾಗಿರುವ ಅಪಾಯದ ಕುರಿತು ಆರಂಭಿಸಲಾಗಿರುವ ಅಮೆರಿಕವನ್ನು ಮತ್ತೊಮ್ಮೆ ಶ್ರೇಷ್ಠ ರಾಷ್ಟ್ರವನ್ನಾಗಿಸುವ' ಅಭಿಯಾನಕ್ಕೆ ಪೂರಕವಾಗಿ ಬ್ರಾಟ್ ಅವರ ಆರೋಪ ಮಹತ್ವ ಪಡೆದುಕೊಂಡಿದೆ. ಎಚ್-1ಬಿ ವೀಸಾ ಎಂದು ನಾನು ಹೇಳುವಾಗ ನಿಮಗೆ ನಿಮ್ಮ ಸೋದರ ಸಂಬಂಧಿ, ಚಿಕ್ಕಮ್ಮ, ಚಿಕ್ಕಪ್ಪ, ಅಜ್ಜಿ, ಅಜ್ಜ ಎಲ್ಲರೂ ನೆನಪಾಗುತ್ತಾರೆ. ಅವರೆಲ್ಲರೂ ಕುಶಲಕರ್ಮಿಗಳು ಎಂದೇ ಹೇಳಲಾಗುತ್ತದೆ.




**ಯುಎಸ್ ಆರ್ಥಿಕ ತಜ್ಞನ ಆರೋಪ**

> ಮವಾಶ್ ಅವರು 2005ರಿಂದ 2007ರವರೆಗೆ ಚೆನ್ನೈ ಕಾನ್ಸುಲೇಟ್‌ನಲ್ಲಿ ಕೆಲಸ ಮಾಡಿದ್ದರು. 2024ರಲ್ಲಿ ಅಮೆರಿಕದ ಅಧಿಕಾರಿಗಳು ಸಾವಿರಾರು ವಲಸೆಯೇತರ ವೀಸಾಗಳನ್ನು ನೀಡಿದ್ದಾರೆ. ಇದರಲ್ಲಿ 2.2 ಲಕ್ಷ ಎಚ್-1ಬಿ ವೀಸಾ ಮತ್ತು ಅವರ ಕುಟುಂಬಗಳಿಗೆ ನೀಡಲಾಗುವ ಎಚ್-4 ವೀಸಾಗಳು 1.4 ಲಕ್ಷ ಜನರಿಗೆ ವಿತರಿಸಲಾಗಿದೆ ಎಂದು ಹೇಳಿದ್ದರು.

ಆದರೆ ಅವರು ಯಾರೂ ತಂತ್ರಜ್ಞರಲ್ಲ. ಅವರು ನಿಮ್ಮ ಹಾಗೂ ನಿಮ್ಮ ಕುಟುಂಬದ ಕೆಲಸವನ್ನು ಕಸಿಯುತ್ತಿದ್ದಾರೆ. ನಿಮ್ಮ ಮನೆ ಹಾಗೂ ನಿಮಗೆ ದೊರಕಬೇಕಾದ ಸೌಲಭ್ಯಗಳನ್ನು ಕಸಿಯುತ್ತಿದ್ದಾರೆ' ಎಂದು ಅಮೆರಿಕನ್ನರನ್ನು ಉದ್ದೇಶಿಸಿ ಮಾತನಾಡಿದ್ದಾರೆ.

ಎಚ್-1ಬಿ ವೀಸಾ ವಿತರಣೆಯಲ್ಲಿ ಭಾರತದಲ್ಲಿ ಉದ್ಯಮ ಕ್ಷೇತ್ರದಿಂದ ಈ ಹಗರಣದ ನಡೆದಿದೆ ಎಂದು ಭಾರತೀಯ ಮೂಲದ ಮವಾಶ್ ಸಿದ್ದಿಕಿ ಅವರು ಆರೋಪಿಸಿದ ಬೆನ್ನಲ್ಲೇ ಬ್ರಾಟ್ ಅವರ ಹೇಳಿಕೆಯೂ ಹೊರಬಿದ್ದಿದೆ.

## ಕಳೆದುಹೋಗಿದ್ದ ಯುವತಿಯನ್ನು ಹುಡುಕಿಕೊಟ್ಟ ಎಐ

**ಕರಾಚಿ:** ದಶಕಗಳ ಹಿಂದೆ ಕಳೆದು ಹೋಗಿದ್ದ ಪಾಕಿಸ್ತಾನದ ಬಾಲಕಿಯೊಬ್ಬಳು ಕೃತಕ ಬುದ್ಧಿಮತ್ತೆ (ಎಐ) ಮುಖ ಗುರುತು ಪತ್ತೆ ಹಚ್ಚುವ ತಂತ್ರಜ್ಞಾನದ ಸಹಾಯದಿಂದ ಈಗ ತನ್ನ ಕುಟುಂಬವನ್ನು ಸೇರಿಕೊಂಡಿದ್ದಾಳೆ.

2008ರಲ್ಲಿ ಕಿರಣ್ ಐಸ್‌ಕ್ರೀಮ್ ಖರೀದಿಸಲು ತೆರಳಿದ್ದಾಗ ಮನೆಯ ದಾರಿ ತಪ್ಪಿ, ಕಳೆದುಹೋಗಿದ್ದಳು. ಅವರನ್ನು ಬಿಲ್ಕಿಸ್ ಈದಿ ಎನ್ನುವವರು ಕರೆದೊಯ್ದಿದ್ದರು. ಕೆಲವು ದಿನಗಳ ನಂತರ ಕರಾಚಿಯಲ್ಲಿರುವ ಈಧಿ ಫೌಂಡೇಶನ್ ಎನ್‌ಜಿಓಗೆ ಸೇರಿಸಿದ್ದರು. ಕಿರಣ್‌ಗೆ ಈಗ 27 ವರ್ಷ. ಮನೆಯ ದಾರಿ ತಿಳಿಯದೆ ಅಳುತ್ತಾ ನಿಂತಿದ್ದೆ. ಆಗ ಒಬ್ಬ ಮಹಿಳೆ ಇಸ್ಲಾಮಾಬಾದ್‌ನಲ್ಲಿರುವ ಈಧಿ ಕೇಂದ್ರಕ್ಕೆ ಕರೆದೊಯ್ದಿದ್ದರು. ಅದನ್ನು ಹೊರತು ಬೇರೆ ಏನೂ ನೆನಪಿಲ್ಲ ಎಂದು ಈಗ 27ರ ಹರೆಯದಲ್ಲಿರುವ ಯುವತಿ ಹೇಳಿದ್ದಾಳೆ. ಅಲ್ಲಿಂದ ನಂತರ ಕಿರಣ್ ಬಿಲ್ಕಿಸ್ ಅವರ ಪೋಷಣೆಯಲ್ಲಿ ಬೆಳೆದಿದ್ದಾಳೆ.

ಹಲವು ಬಾರಿ ಇಸ್ಲಾಮಾಬಾದ್‌ಗೆ ಭೇಟಿ ನೀಡಿದರೂ ಕಿರಣ್ ಪೋಷಕರನ್ನು ಹುಡುಕಲು ಸಾಧ್ಯವಾಗಿರಲಿಲ್ಲ ಎಂದು ಫೌಂಡೇಶನ್‌ನ ಈಗಿನ ಮುಖ್ಯಸ್ಥೆ ಸಬಾ ಫೈಸಲ್ ಈದಿ ಹೇಳಿದ್ದಾರೆ. ಕೆಲವು ತಿಂಗಳ ಹಿಂದೆ ಫೌಂಡೇಶನ್, ಪಂಜಾಬ್ ಪ್ರಾಂತ್ಯದಲ್ಲಿ ಸೇಫ್ ಸಿಟಿ ಪ್ರಾಜೆಕ್ಟ್‌ನಲ್ಲಿ ಸೈಬರ್ ಭದ್ರತಾ ತಜ್ಞನಾಗಿ ಕೆಲಸ ಮಾಡುತ್ತಿರುವ ನಬೀಲ್ ಅಹಮದ್ ಅವರನ್ನು ಸಂಪರ್ಕಿಸಿತ್ತು.




ಅವರಿಗೆ ಕಿರಣ್‌ಳ ಇತ್ತೀಚಿನ ಫೋಟೊ ಮತ್ತು ಅಗತ್ಯ ಮಾಹಿತಿಯನ್ನು ನೀಡಲಾಗಿತ್ತು. ನಬೀಲ್ ಅವರು ಇಸ್ಲಾಮಾದ್‌ನಲ್ಲಿ ಕಳೆದುಹೋದ ಬಾಲಕಿಯರ ವರದಿಯನ್ನು ಆಧರಿಸಿ ಎಐ ಮೂಲಕ ಮುಖ ಗುರುತು, ಟ್ರ್ಯಾಕಿಂಗ್ ಸಾಫ್ಟ್‌ವೇರ್ ಮೂಲಕ ಬಾಲಕಿಯ ಕುಟುಂಬವನ್ನು ಪತ್ತೆ ಮಾಡಿದ್ದಾರೆ. ದರ್ಜಿಯಾಗಿರುವ ಕಿರಣ್ ತಂದೆ ಅಬ್ದುಲ್ ಮಜೀದ್ ಅವರಿಗೆ ಮಗಳ ಪತ್ತೆ ಬಗ್ಗೆ ಮಾಹಿತಿ ನೀಡಿದ ನಂತರ ಅವರು ಮಗಳನ್ನು ಕಾಣಲು ಕರಾಚಿಗೆ ಬಂದಿದ್ದಾರೆ.

ಕಿರಣ್‌ಳನ್ನು ಹಲವು ವರ್ಷಗಳ ಕಾಲ ಹುಡುಕಿದ್ದೇವೆ. ಪತ್ರಿಕೆಗಳಲ್ಲೂ ಫೋಟೊವನ್ನು ಹಾಕಿಸಿ ಹುಡುಕಿಸಿದ್ದೇವೆ. ಆದರೆ ಪ್ರಯೋಜನವಾಗಿರಲಿಲ್ಲ. ಪಂಜಾಬ್‌ನ ಸೇಫ್ ಸಿಟಿ ಪ್ರಾಜೆಕ್ಟ್‌ನ ತಂಡ ನಿಮ್ಮ ಮಗಳನ್ನು ಪತ್ತೆ ಮಾಡಿದ್ದೇವೆ ಎಂದಾಗ ಮಗಳು ಸಿಗುವುದಿಲ್ಲ ಎಂಬ ನಿರಾಶೆ ಮಾಯವಾಗಿ ಹೊಸ ಭರವಸೆ ಮೂಡಿತ್ತು ಎಂದಿದ್ದಾರೆ.

## ಮಿನಿ ನ್ಯೂಸ್


### ಅಂಬೇಡ್ಕರ್ ಪ್ರತಿಮೆಗೆ ಹಾನಿ: ದೂರು ದಾಖಲು

**ಉತ್ತರ ಪ್ರದೇಶ:** ಇಲ್ಲಿನ ಹಳ್ಳಿಯೊಂದರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಕಿಡಿಗೇಡಿಗಳು ಹಾನಿಮಾಡಿದ್ದಾರೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ. ಬೆಹಲರ್ ಪ್ರದೇಶದ ಮೈನಪುರಿಯಲ್ಲಿ ಈ ಘಟನೆ ನಡೆದಿದ್ದು, ಗ್ರಾಮಸ್ಥ ಗಂಗಾರಾಮ್ ಎಂಬುವರು ಈ ಕುರಿತು ದೂರು ದಾಖಲಿಸಿದ್ದಾರೆ. ಗ್ರಾಮಸ್ಥರು, ಪ್ರತಿಮೆಯು ಮೂಲ ಸ್ಥಳದಲ್ಲಿ ಇಲ್ಲದಿರುವುದನ್ನು ಗಮನಿಸಿ ಹುಡುಕಾಟ ನಡೆಸಿದಾಗ, ಹಾನಿಯಾದ ಸ್ಥಿತಿಯಲ್ಲಿ ಪ್ರತಿಮೆ ಪತ್ತೆಯಾಗಿದೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಯುತ್ತಿದ್ದು, ಈ ಕೃತ್ಯದಲ್ಲಿ ಭಾಗಿಯಾದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಮತ್ತು ಶೀಘ್ರವೇ ಹೊಸ ಪ್ರತಿಮೆ ನಿರ್ಮಿಸಲಾಗುವುದು ಎಂದು ಬೆಲಹರ್ ಠಾಣಾಧಿಕಾರಿ ಅನಿಲ್ ಕುಮಾರ್ ತಿಳಿಸಿದ್ದಾರೆ.

### ತಿರುಪತಿ ದೇವಸ್ಥಾನಕ್ಕೆ 9 ಕೋಟಿ ದೇಣಿಗೆ ನೀಡಿದ ಅಮೆರಿಕದ ಭಕ್ತ

**ತಿರುಪತಿ:** ಅಮೆರಿಕ ಮೂಲದ ಭಕ್ತರೊಬ್ಬರು ತಿರುಮಲ ತಿರುಪತಿ ದೇವಸ್ಥಾನಕ್ಕೆ 9ಕೋಟಿ ದೇಣಿಗೆ ನೀಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಎಂ.ರಾಮಲಿಂಗ ರಾಜು ಎಂಬುವವರು ಪಿಎಸಿ-1, ಪಿಎಸಿ-2 ಮತ್ತು ಪಿಎಸಿ-3 ಕಟ್ಟಡಗಳ ನವೀಕರಣಕ್ಕಾಗಿ 9 ಕೋಟಿ ದೇಣಿಗೆ ನೀಡಿದ್ದಾರೆ ಎಂದು ತಿರುಮಲ ತಿರುಪತಿ ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷ ಬಿ.ಆರ್.ನಾಯ್ಡು ತಿಳಿಸಿದ್ದಾರೆ. ಈ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ನಾಯ್ಡು ಪೋಸ್ಟ್ ಹಂಚಿಕೊಂಡಿದ್ದು, ಭಕ್ತರಿಗೆ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಟಿಟಿಡಿಗೆ ನೀಡಿದ ದೇಣಿಗೆಗಾಗಿ ಟಿಟಿಡಿ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಬರೆದುಕೊಂಡಿದ್ದಾರೆ.

ಈ ಹಿಂದೆಯೂ 2012ರಲ್ಲಿ ರಾಜು ಅವರು ಟಿಟಿಡಿಗೆ 16 ಕೋಟಿ ದೇಣಿಗೆ ನೀಡಿದ್ದರು ಎಂದೂ ಸ್ಮರಿಸಿದ್ದಾರೆ.



### ಐಪಿಎಸ್ ಅಧಿಕಾರಿ ಭಾಗಿ ಎಂದಿದ್ದ ಯುಟ್ಯೂಬರ್ ವಿರುದ್ಧ ಎಫ್‌ಐಆರ್

**ತಿರುವನಂತಪುರ:** ಶಬರಿಮಲೆ ದೇವಾಲಯದಲ್ಲಿನ ಚಿನ್ನ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಐಪಿಎಸ್ ಅಧಿಕಾರಿ ವಿರುದ್ಧ ಸುಳ್ಳು ಆಪಾದನೆ ಮಾಡಿದ್ದ ಆರೋಪದಡಿ ಯುಟ್ಯೂಬರ್ ವಿರುದ್ಧ ಪ್ರಕರಣದ ದಾಖಲಾಗಿದೆ. ಎಡಿಜಿಪಿ ಎಸ್. ಶ್ರೀಜಿತ್ ಅವರು ನೀಡಿರುವ ದೂರಿನ ಆಧಾರದಲ್ಲಿ ಶಬರಿಮಲೆ ಮ್ಯೂಸಿಯಂ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಪ್ರಕರಣ ದಾಖಲಾಗಿದೆ. ಶಬರಿಮಲೆ ದೇವಾಲಯದ ಮುಖ್ಯ ಸಂಘಟಕ ಶ್ರೀಜಿತ್, ಪೊಲೀಸರು, ಚಿನ್ನ ಕಳ್ಳತನದಲ್ಲಿ ಭಾಗಿ ಆಗಿದ್ದಾರೆ ಎಂಬುದಾಗಿ ಕೆ.ಎಂ.ಷಾಜಹಾನ್ ಅವರು ತಮ್ಮ ಯುಟ್ಯೂಬ್ ಚಾನೆಲ್‌ನಲ್ಲಿ ಸುಳ್ಳು ಆರೋಪಗಳನ್ನು ಮಾಡಿದ್ದಾರೆ ಎಂದು ಎಫ್ ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಧಾರ್ಮಿಕ ವಿಚಾರವನ್ನು ಮುಂದಿಟ್ಟು, ಸಮುದಾಯಗಳ ನಡುವೆ ದ್ವೇಷ ಉತ್ತೇಜಿಸುವ ಹೇಳಿಕೆಗಳನ್ನೊಳಗೊಂಡ ವಿಡಿಯೋಗಳನ್ನು ಪ್ರಸಾರ ಮಾಡಿದ ಆರೋಪವೂ ಷಾಜಹಾನ್ ಮೇಲಿದೆ. ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣದ ದಾಖಲಾಗಿದೆ. ಶಬರಿಮಲೆ ಅಯ್ಯಪ್ಪ ದೇವಸ್ಥಾನದಲ್ಲಿ ಚಿನ್ನ ನಾಪತ್ತೆಯಾಗಿದೆ ಎನ್ನಲಾದ ಪ್ರಕರಣವು ರಾಜ್ಯ ರಾಜಕೀಯದಲ್ಲಿ ವಿವಾದ ಎಬ್ಬಿಸಿದೆ. ಪ್ರಕರಣದ ತನಿಖೆ ಕೈಗೆತ್ತಿಕೊಂಡಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ), ತಿರುವಾಂಕೂರು ದೇವಸ್ವ ಮಂಡಳಿಯ ಇಬ್ಬರು ಮಾಜಿ ಅಧ್ಯಕ್ಷರು ಸೇರಿದಂತೆ ಹಲವರನ್ನು ಬಂಧಿಸಿದೆ.

### ಪ್ರತ್ಯೇಕ ಪ್ರಕರಣ: ಬಾಸ್ಕೆಟ್ ಬಾಲ್ ಕಂಬ ಉರುಳಿ ಆಟಗಾರರ ಸಾವು

**ಚಂಡೀಗಢ:** ಎರಡು ಪ್ರತ್ಯೇಕ ಘಟನೆಗಳಲ್ಲಿ ಬಾಸ್ಕೆಟ್ ಬಾಲ್ ಕಂಬ ಬಿದ್ದು ಹದಿಹರೆಯದ ಇಬ್ಬರು ಆಟಗಾರರು ಮೃತಪಟ್ಟಿದ್ದಾರೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ. ಹರಿಯಾಣದ ರೋಹಕ್‌ನಲ್ಲಿ ರಾಷ್ಟ್ರೀಯ ಮಟ್ಟದ ಆಟಗಾರ ಹಾರ್ದಿಕ್ ರಾಥಿ (16) ಅವರು ಏಕಾಂಗಿಯಾಗಿ ಅಭ್ಯಾಸದಲ್ಲಿ ತೊಡಗಿದ್ದ ವೇಳೆ, ಚೆಂಡನ್ನು ಬಾಸ್ಕೆಟ್‌ಗೆ ಹಾಕುವ ವೇಳೆ ಕಬ್ಬಿಣದ ಕಂಬ ಅವರ ಎದೆಯ ಮೇಲೆ ಬಿದ್ದಿದೆ. ಇತರ ಆಟಗಾರರು ಧಾವಿಸಿ ಆಸ್ಪತ್ರೆಗೆ ದಾಖಲಿಸಿದ್ದು, ಅಷ್ಟರೊಳಗೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಲಖನ್ ಮಜ್ರಾ ಗ್ರಾಮದ ಕ್ರೀಡಾ ಸಂಕೀರ್ಣದಲ್ಲಿ ನಡೆದ ಈ ಘಟನೆ ಸಿಸಿಟಿವಿಯಲ್ಲಿ ದಾಖಲಾಗಿದೆ. ಹಾರ್ದಿಕ್ ಅವರು ಕೆಲ ತಿಂಗಳ ಮೊದಲು ರಾಷ್ಟ್ರೀಯ ಸಬ್ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಆಡಿದ್ದರು. ಕಂಬ ತುಕ್ಕುಹಿಡಿದಿತ್ತು. ಈ ಬಗ್ಗೆ ಹಲವು ಬಾರಿ ಅಧಿಕಾರಿಗಳ ಗಮನಕ್ಕೆ ತರಲಾಗಿತ್ತು. ಅವರ ಬೇಜವಾಬ್ದಾರಿಯಿಂದಾಗಿ ಭರವಸೆ ಮೂಡಿಸಿದ್ದ ಆಟಗಾರನನ್ನು ನನ್ನ ಕುಟುಂಬ ಮಾತ್ರವಲ್ಲ, ದೇಶವೇ ಕಳೆದುಕೊಂಡಿದೆ ಎಂದು ಅವರ ಸೋದರ ಖಡಕ್ ಸಿಂಗ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ನಿಮ್ಮ ನಿಮ್ಮ ಕರ್ತವ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಿ; ಸಂವಿಧಾನ ದಿನದಂದು ದೇಶದ ನಾಗರಿಕರಿಗೆ ಪ್ರಧಾನಿ ಮೋದಿ ಕರೆ

# ವಿಕಸಿತ ಭಾರತ ನಿರ್ಮಾಣದ ಗುರಿಯತ್ತ ಸಾಗುವಂತೆ ಕರೆ

**ಹೊಸದಿಲ್ಲಿ:** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸಂವಿಧಾನ ದಿನದಂದು ದೇಶದ ನಾಗರಿಕರಿಗೆ ತಮ್ಮ ಕರ್ತವ್ಯಗಳಿಗೆ ಮೊದಲ ಆದ್ಯತೆ ನೀಡುವಂತೆ ಮತ್ತು 2047ರ ವೇಳೆಗೆ ವಿಕಸಿತ ಭಾರತ ನಿರ್ಮಾಣದ ಗುರಿಯತ್ತ ಸಾಗುವಂತೆ ಕರೆ ನೀಡಿದ್ದಾರೆ. ಸಂವಿಧಾನ ಅಂಗೀಕೃತವಾಗಿ 76 ವರ್ಷಗಳಾದ ಸಂದರ್ಭದಲ್ಲಿ ಬಿಡುಗಡೆ ಮಾಡಿದ ಪತ್ರದಲ್ಲಿ, ಪ್ರಜಾಪ್ರಭುತ್ವದ ಭವಿಷ್ಯಕ್ಕೆ ಮತದಾನ ಮತ್ತು ಯುವಕರ ಪಾಲ್ಗೊಳ್ಳುವಿಕೆಯಂತಹ ನಾಗರಿಕ ಜವಾಬ್ದಾರಿಗಳು ಅತ್ಯಂತ ಮುಖ್ಯ ಎಂದು ಒತ್ತಿ ಹೇಳಿದ್ದಾರೆ. ಮೋದಿ ಅವರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವುದೇ ಭಾರತದ ಪ್ರಗತಿಗೆ ಮೂಲಾಧಾರ ಎಂದು ಹೇಳಿದ್ದಾರೆ. ನಮ್ಮ ಪ್ರತಿಯೊಂದು ಕಾರ್ಯವೂ ಸಂವಿಧಾನವನ್ನು ಬಲಪಡಿಸಬೇಕು ಮತ್ತು ರಾಷ್ಟ್ರೀಯ ಗುರಿಗಳು ಹಾಗೂ ಹಿತಾಸಕ್ತಿಗಳನ್ನು ಮುಂದುವರಿಸಬೇಕು ಎಂದು ಅವರು ಬರೆದಿದ್ದಾರೆ. ದೇಶದ ಬಗ್ಗೆ ಕೃತಜ್ಞತಾ ಭಾವನೆಯನ್ನು ಬೆಳೆಸಿಕೊಳ್ಳುವಂತೆ ಅವರು ನಾಗರಿಕರಿಗೆ ಮನವಿ ಮಾಡಿದರು.



> ಭಾರತವು ಒಂದು ಮಹತ್ವದ ಹಂತದಲ್ಲಿದೆ, ಶತಮಾನದ 25 ವರ್ಷಗಳು ಈಗಾಗಲೇ ಕಳೆದಿವೆ ಮತ್ತು 2047ರಲ್ಲಿ ಸ್ವಾತಂತ್ರ್ಯದ ಶತಮಾನೋತ್ಸವ, 2049 ರಲ್ಲಿ ಸಂವಿಧಾನದ 100ನೇ ವರ್ಷದಂತಹ ಪ್ರಮುಖ ಮೈಲಿಗಲ್ಲುಗಳು ಬರಲಿವೆ. ಇಂದು ನಾವು ತೆಗೆದುಕೊಳ್ಳುವ ನಿರ್ಧಾರಗಳು ಬರಲಿರುವ ತಲೆಮಾರುಗಳ ಜೀವನವನ್ನು ರೂಪಿಸುತ್ತವೆ.
> – ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಈ ಭಾವನೆಯಿಂದ ನಾವು ಬದುಕಿದಾಗ, ನಮ್ಮ ಕರ್ತವ್ಯಗಳನ್ನು ನಿರ್ವಹಿಸುವುದು ನಮ್ಮ ಸ್ವಭಾವದ ಒಂದು ಭಾಗವಾಗುತ್ತದೆ ಎಂದು ಹೇಳಿದರು.

**ಸಂವಿಧಾನವು ಶಕ್ತಿ ನೀಡಿದೆ:** ತಮ್ಮಂತಹ ಲಕ್ಷಾಂತರ ಜನರಿಗೆ ಸಂವಿಧಾನವು ಶಕ್ತಿ ನೀಡಿದೆ ಎಂದು ಪ್ರಧಾನಿ ಮೋದಿ ಸ್ಮರಿಸಿದರು. ಸಂವಿಧಾನದ ಶಕ್ತಿ ಮತ್ತು ಪವಿತ್ರತೆ ತಮ್ಮ ಪಯಣವನ್ನು ಹೇಗೆ ರೂಪಿಸಿತು ಎಂಬುದನ್ನು ಅವರು ವಿವರಿಸಿದರು. ನಾನು, ಬಡ ಮತ್ತು ಆರ್ಥಿಕವಾಗಿ ಹಿಂದುಳಿದ ಕುಟುಂಬದಿಂದ ಬಂದ ವ್ಯಕ್ತಿಯು, ಸರ್ಕಾರದ ಮುಖ್ಯಸ್ಥನಾಗಿ ಸೇವೆ ಸಲ್ಲಿಸಲು ಸಾಧ್ಯವಾಗಿದ್ದು ನಮ್ಮ ಸಂವಿಧಾನದ ಶಕ್ತಿಯಿಂದಲೇ ಎಂದು ಅವರು ಬರೆದಿದ್ದಾರೆ. 2014 ರಲ್ಲಿ ಸಂಸತ್ತಿನ ಮೆಟ್ಟಿಲುಗಳಿಗೆ ನಮಸ್ಕರಿಸಿದ್ದು ಮತ್ತು 2019 ರಲ್ಲಿ ಸಂವಿಧಾನವನ್ನು ತಮ್ಮ ಹಣೆಗೆ ಇಟ್ಟುಕೊಂಡಿದ್ದು, ಪ್ರಜಾಪ್ರಭುತ್ವದ ಆದರ್ಶಗಳ ಬಗ್ಗೆ ತಮ್ಮ ಬದ್ಧತೆಯನ್ನು ತೋರಿಸುವ ಎರಡು ವೈಯಕ್ತಿಕ ಗೌರವದ ಕ್ಷಣಗಳು ಎಂದು ಉಲ್ಲೇಖಿಸಿದರು. ಸಂವಿಧಾನ ರಚನೆಕಾರರಿಗೆ ಪ್ರಧಾನಿ ಮೋದಿ ಗೌರವ ಸಲ್ಲಿಸಿದರು. ಡಾ. ರಾಜೇಂದ್ರ ಪ್ರಸಾದ್, ಡಾ. ಬಿ.ಆರ್. ಅಂಬೇಡ್ಕರ್ ಅವರಿಂದ ಹಿಡಿದು, ಸಂವಿಧಾನ ರಚನಾ ಸಭೆಯ ಮಹಿಳಾ ಸದಸ್ಯರವರೆಗೆ, ಅವರ ಆಲೋಚನಾತ್ಮಕ ಮಧ್ಯಸ್ಥಿಕೆಗಳು ಮತ್ತು ದೂರದೃಷ್ಟಿಯ ದೃಷ್ಟಿಕೋನಗಳು ಈ ಮಹತ್ವದ ಕರಡನ್ನು ರೂಪಿಸಿವೆ ಎಂದು ಅವರು ಹೇಳಿದರು. ಈ ವರ್ಷದ ಸಂವಿಧಾನ ದಿನವು ಕೆಲವು ಪ್ರಮುಖ ವಾರ್ಷಿಕೋತ್ಸವಗಳೊಂದಿಗೆ ಸೇರಿರುವುದು ವಿಶೇಷ ಮಹತ್ವವನ್ನು ಪಡೆದುಕೊಂಡಿದೆ. ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಬಿರ್ಸಾ ಮುಂಡಾ ಅವರ 150ನೇ ಜನ್ಮದಿನ, ವಂದೇ ಮಾತರಂನ 150ನೇ ವರ್ಷ, ಮತ್ತು ಗುರು ತೇಜ್ ಬಹದ್ದೂರ್ ಅವರ 350ನೇ ಹುತಾತ್ಮರ ದಿನಾಚರಣೆ ಇವುಗಳಲ್ಲಿ ಸೇರಿವೆ. ಈ ಮೈಲಿಗಲ್ಲುಗಳು, ನಮ್ಮ ಮೂಲಭೂತ ಕರ್ತವ್ಯಗಳ ಅಧ್ಯಾಯದಲ್ಲಿ ಪ್ರತಿಧ್ವನಿಸುವ ನಮ್ಮ ಕರ್ತವ್ಯಗಳ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತವೆ ಎಂದು ಪ್ರಧಾನಿ ಹೇಳಿದರು.




**ಸೇವೆ ಸಲ್ಲಿಸಲು ಸಾಧ್ಯ**

**ನಾಗರಿಕರ ಕರ್ತವ್ಯಗಳು**

ಪ್ರಧಾನಿ ಮೋದಿ ಅವರು ತಮ್ಮ ಭಾಷಣದಲ್ಲಿ, ಸಂವಿಧಾನದ ಮಹತ್ವವನ್ನು ಮತ್ತು ನಾಗರಿಕರ ಕರ್ತವ್ಯಗಳನ್ನು ನೆನಪಿಸಿದರು. ದೇಶದ ಅಭಿವೃದ್ಧಿಗೆ ಪ್ರತಿಯೊಬ್ಬರ ಕೊಡುಗೆಯೂ ಅಗತ್ಯ ಎಂದು ಅವರು ಹೇಳಿದರು. ಯುವಕರು ದೇಶದ ಭವಿಷ್ಯ ಎಂದು ಹೇಳುತ್ತಾ, ಅವರ ಸಕ್ರಿಯ ಪಾಲ್ಗೊಳ್ಳುವಿಕೆಯು ಅತ್ಯಗತ್ಯ ಎಂದು ಒತ್ತಿ ಹೇಳಿದರು. ಸಂವಿಧಾನವು ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡಿದೆ ಎಂಬುದನ್ನು ತಮ್ಮ ಜೀವನದ ಮೂಲಕ ತೋರಿಸಿಕೊಟ್ಟರು. ಸಂವಿಧಾನ ರಚನೆಕಾರರ ದೂರದೃಷ್ಟಿಯನ್ನು ಶ್ಲಾಘಿಸಿದರು. ದೇಶದ ಇತಿಹಾಸದಲ್ಲಿ ಮಹತ್ವದ ಘಟನೆಗಳೊಂದಿಗೆ ಸಂವಿಧಾನ ದಿನವನ್ನು ಜೋಡಿಸಿ, ಕರ್ತವ್ಯಗಳ ಮಹತ್ವವನ್ನು ಮತ್ತೊಮ್ಮೆ ಸಾರಿದರು. ಮತದಾನವನ್ನು ಪ್ರಜಾಪ್ರಭುತ್ವದ ಮೂಲಾಧಾರ ಎಂದು ಕರೆದರು. ದೇಶವು ಪ್ರಸ್ತುತ ಒಂದು ನಿರ್ಣಾಯಕ ಹಂತದಲ್ಲಿದೆ ಮತ್ತು ಮುಂದಿನ 25 ವರ್ಷಗಳು ದೇಶದ ಭವಿಷ್ಯವನ್ನು ನಿರ್ಧರಿಸಲಿವೆ ಎಂದು ಅವರು ಹೇಳಿದರು.

# ಸಮಯ ಕೊಡಿ ಇಲ್ಲ ಹಣ ಕೊಡಿ

ರಿಷಬ್ ಶೆಟ್ಟಿ ನಟಿಸಿ ನಿರ್ದೇಶಿಸಿರುವ 'ಕಾಂತಾರ: ಚಾಪ್ಟರ್ 1' ಸಿನಿಮಾ ಭಾರಿ ದೊಡ್ಡ ಹಿಟ್ ಆಗಿದೆ. ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಭಾರಿ ಸದ್ದು-ಸುದ್ದಿ ಮಾಡಿದೆ. 'ಕಾಂತಾರ: ಚಾಪ್ಟರ್ 1' ಸಿನಿಮಾದ ಬಳಿಕ ರಿಷಬ್ ಶೆಟ್ಟಿ ತೆಲುಗಿನ ಪ್ಯಾನ್ ಇಂಡಿಯಾ ಸಿನಿಮಾ 'ಜೈ ಹನುಮಾನ್' ಸಿನಿಮಾದ ಚಿತ್ರೀಕರಣದಲ್ಲಿ ತೊಡಗಿಕೊಳ್ಳುವವರಿದ್ದರು. ಆದರೆ ಆ ಸಿನಿಮಾ ನಿರ್ದೇಶನ ಮಾಡಲಿದ್ದ ಪ್ರಶಾಂತ್ ವರ್ಮಾ ಖುದ್ದು ವಿವಾದದಲ್ಲಿ ಸಿಲುಕಿದ್ದಾರೆ. ಕೆಲ ನಿರ್ಮಾಪಕರು ಪ್ರಶಾಂತ್ ವರ್ಮಾ ವಿರುದ್ಧ ನಿರ್ಮಾಪಕರ ಸಂಘಕ್ಕೆ ದೂರು ಸಲ್ಲಿಸಿದ್ದಾರೆ.

ಪ್ರಶಾಂತ್ ವರ್ಮಾ, ಅಡ್ವಾನ್ಸ್ ಹಣ ಪಡೆದು ಸಿನಿಮಾ ಪ್ರಾರಂಭ ಮಾಡುತ್ತಿಲ್ಲ, ಸಿನಿಮಾಕ್ಕೆ ಅತಿಯಾದ ಸಮಯ ತೆಗೆದುಕೊಳ್ಳುತ್ತಿದ್ದಾರೆ ಎಂಬ ದೂರುಗಳು ಕೆಲ ನಿರ್ಮಾಪಕರುಗಳಿಂದ ಕೇಳಿ ಬಂದಿದೆ. ಈ ಬಗ್ಗೆ ಸ್ವತಃ ಪ್ರಶಾಂತ್ ವರ್ಮಾ ಕೆಲ ವಾರಗಳ ಹಿಂದೆ ಅಧಿಕೃತವಾಗಿ ಹೇಳಿಕೆ ಬಿಡುಗಡೆ ಮಾಡಿ ಸ್ಪಷ್ಟನೆ ನೀಡುವ ಪ್ರಯತ್ನ ಮಾಡಿದ್ದರು. ಆದರೆ ನಿರ್ಮಾಪಕರ ಕಡೆಯಿಂದ ಒತ್ತಡ ಹೆಚ್ಚಾಗುತ್ತಲೂ ಪ್ರಶಾಂತ್, ಗೋವಾ ಸಿನಿಮೋತ್ಸವದಲ್ಲಿ ಹೇಳಿಕೆ ನೀಡಿದ್ದಾರೆ.



ಸಿನಿಮಾಗಳ ಪೋಸ್ಟ್ ಪ್ರೊಡಕ್ಷನ್ ಬಗ್ಗೆ ಮಾತನಾಡಿರುವ ಪ್ರಶಾಂತ್ ವರ್ಮಾ, 'ಸಿನಿಮಾಗಳ ಬಿಡುಗಡೆ ದಿನಾಂಕದ ಮೇಲೆ ನಿರ್ದೇಶಕನಿಗೆ ಹಕ್ಕು ಇರಬೇಕು. ಬಿಡುಗಡೆ ದಿನಾಂಕವನ್ನು ನಿರ್ದೇಶಕನೇ ನಿರ್ಧಾರ ಮಾಡಬೇಕು' ಎಂದಿದ್ದಾರೆ.

ಮುಂದುವರೆದು, 'ನನಗೆ ಅರ್ಥ ಆಗಿರುವುದೇನೆಂದರೆ ವಿಎಫ್‌ಎಕ್ಸ್ ಕಲಾವಿದರಿಗೆ ಸಾಕಷ್ಟು ಕೊಡಬೇಕಾಗುತ್ತದೆ. ಆದರೆ ನಿಮ್ಮಲ್ಲಿ ಹಣ ಇದ್ದರೆ ಅದನ್ನು ಯಾವುದಾದರೂ ಸಂಸ್ಥೆಗೆ ನೀಡಿ ಅವರ ಕೈಯಲ್ಲಿ ವಿಎಫ್‌ಎಕ್ಸ್ ಮಾಡಿಸಿಕೊಳ್ಳಿ' ಎಂದಿದ್ದಾರೆ ಪ್ರಶಾಂತ್ ವರ್ಮಾ. 'ನನ್ನ ಮೊದಲ ಕೆಲವು ಸಿನಿಮಾಗಳಲ್ಲಿ ಆದ ಕೆಟ್ಟ ಅನುಭವದ ಬಳಿಕ ಈಗ ಯಾವುದೇ ಹೊಸ ಸಿನಿಮಾಕ್ಕೆ ಒಪ್ಪಂದ ಮಾಡಿಕೊಳ್ಳುವಾಗಲೂ ಕಡ್ಡಾಯವಾಗಿ ಷರತ್ತು ಹಾಕುತ್ತೇನೆ, ಅದೇನೆಂದರೆ ನನ್ನ ಸಿನಿಮಾಗಳ ಬಿಡುಗಡೆ ದಿನಾಂಕವನ್ನು ನಾನೇ ನಿಗದಿ ಪಡಿಸುತ್ತೇನೆ ಎಂದು.




# ಜೂ ಎನ್‌ಟಿಆರ್ ಬಗ್ಗೆ ಪ್ರಭಾಸ್ ಸಿನಿಮಾ ನಿರ್ದೇಶಕನ ವ್ಯಂಗ್ಯ: ಫ್ಯಾನ್ಸ್ ವಾರ್ ಶುರು

ಪ್ರಭಾಸ್ ಸಿನಿಮಾ ನಿರ್ದೇಶಕ ಜೂ ಎನ್‌ಟಿಆರ್ ಅವರಿಗೆ ಪರೋಕ್ಷವಾಗಿ ಟಾಂಗ್ ಕೊಟ್ಟಿದ್ದು, ಜೂ ಎನ್‌ಟಿಆರ್ ಅಭಿಮಾನಿಗಳು ಸಹಜವಾಗಿಯೇ ಕೆರಳಿ ಕೆಂಡವಾಗಿದ್ದಾರೆ. ಪ್ರಭಾಸ್ ನಟನೆಯ 'ರಾಜಾ ಸಾಬ್' ಸಿನಿಮಾದ ಹಾಡೊಂದು ಇತ್ತೀಚೆಗೆ ಬಿಡುಗಡೆ ಆಯ್ತು. ಈ ಸಂದರ್ಭದಲ್ಲಿ ಮಾತನಾಡಿದ್ದ ಸಿನಿಮಾದ ನಿರ್ದೇಶಕ ಮಾರುತಿ, ಜೂ ಎನ್‌ಟಿಆರ್ ಬಗ್ಗೆ ಪರೋಕ್ಷ ಟಾಂಗ್ ನೀಡಿದ್ದರು. ಇದು ಜೂ ಎನ್‌ಟಿಆರ್ ಅಭಿಮಾನಿಗಳನ್ನು ಕೆರಳಿಸಿದ್ದು, ಜೂ ಎನ್‌ಟಿಆರ್ ಅಭಿಮಾನಿಗಳು ಈಗ ಪ್ರಭಾಸ್ ವಿರುದ್ಧ ಟ್ರೋಲಿಂಗ್ ಆರಂಭಿಸಿದ್ದು, 'ರಾಜಾ ಸಾಬ್' ಸಿನಿಮಾ ನೋಡದಂತೆ ಜೂ ಎನ್‌ಟಿಆರ್ ಅಭಿಮಾನಿಗಳಿಗೆ ಕರೆ ನೀಡಿದ್ದಾರೆ. ಅಷ್ಟಕ್ಕೂ ಮಾರುತಿ ಹೇಳಿದ್ದೇನು



'ರಾಜಾ ಸಾಬ್' ಹಾಡು ಬಿಡುಗಡೆ ವೇಳೆ, ನಿರ್ದೇಶಕ ಮಾರುತಿ ಪ್ರಭಾಸ್ ಅನ್ನು ವಿಪರೀತ ಕೊಂಡಾಡಿದರು. 'ನಾನು ರೆಬೆಲ್ ಯೂನಿವರ್ಸಿಟಿಯ ವಿದ್ಯಾರ್ಥಿ. ನನ್ನ ಪ್ರತಿಭೆ ನೋಡಿ ರೆಬೆಲ್ ಪ್ರಭಾಸ್ ಅವರು ತಮ್ಮ ಯೂನಿವರ್ಸಿಟಿಯಲ್ಲಿ ಅವಕಾಶ ನೀಡಿದ್ದಾರೆ. ಪ್ರಭಾಸ್ ಫೋಟೊವನ್ನು ಜೇಬಿನಲ್ಲಿ ಇರಿಸಿಕೊಂಡರೂ ಸಾಕು ಯಾರು ಬೇಕಾದರು ದೊಡ್ಡ ನಿರ್ದೇಶಕರಾಗಿಬಿಡುತ್ತಾರೆ' ಎಂದೆಲ್ಲ ವಿಪರೀತ ಹೊಗಳಿದರು. ಮುಂದುವರೆದು, 'ಈ ಸಂಕ್ರಾಂತಿ ಹಬ್ಬಕ್ಕೆ ಅಭಿಮಾನಿಗಳು ಕಾಲರ್ ಮೇಲೇರಿಸುತ್ತಾರೆ ಎಂದು ನಾನು ಹೇಳುವುದಿಲ್ಲ. ಏಕೆಂದರೆ ಕಾಲರ್ ಮೇಲೇರಿಸುವುದು ಪ್ರಭಾಸ್ ಪಾಲಿಗೆ ಅತ್ಯಂತ ಚಿಕ್ಕ ವಿಷಯ' ಎಂದು ಮಾರುತಿ ಹೇಳಿದರು. ಮಾರುತಿ ಅವರ ಈ ಮಾತೇ ಜೂ ಎನ್‌ಟಿಆರ್ ಅಭಿಮಾನಿಗಳನ್ನು ಕೆರಳಿಸಿರುವುದು.



# ಮಲಮಗನ ಪತ್ನಿ ಶೋಭಿತಾ ಜೊತೆ ಹೇಗಿದೆ ಸಂಬಂಧ ವಿವರಿಸಿದ ಅಕ್ಕಿನೇನಿ ಹೆಂಡತಿ



ನಾಗಾರ್ಜುನ ಪತ್ನಿ ಅಮಲಾ ಅವರು ಸಂದರ್ಶನ ಒಂದರಲ್ಲಿ ಮಾತನಾಡಿದ್ದಾರೆ. ಸೊಸೆಯನ್ನು ಅವರು ಹಾಡಿ ಹೊಗಳಿದ್ದಾರೆ. ಸೊಸೆಯನ್ನು ನಾಗಾರ್ಜುನ ಅವರು ಪ್ರೀತಿಯಿಂದ ಸ್ವಾಗತಿಸಿದ್ದಾರೆ. ಶೋಭಿತಾ ಹಾಗೂ ಮಗ ನಾಗ ಚೈತನ್ಯ ಜೊತೆ ಇರೋ ಫೋಟೋಗಳನ್ನು ಅವರು ಹಂಚಿಕೊಂಡಿದ್ದರು. ಈಗ ಅಮಲಾ ಶೋಭಿತಾ ಬಗ್ಗೆ ಮೆಚ್ಚುಗೆ ಮಾತನಾಡಿದ್ದಾರೆ. 'ಅತ್ತೆ ಆಗಿರೋದಕ್ಕೆ ಖುಷಿ ಇದೆ. ನನಗೆ ಇಬ್ಬರು ಮುದ್ದಿನ ಸೊಸೆಯರು' ಎಂದು ಅಮಲಾ ಮಾತು ಆರಂಭಿಸಿದ್ದಾರೆ. 'ಶೋಭಿತಾ ತುಂಬಾನೇ ಟ್ಯಾಲೆಂಟೆಡ್. ಎಲ್ಲಾ ಕೆಲಸವನ್ನು ಅವಳೇ ಮಾಡಿಕೊಳ್ಳುತ್ತಾಳೆ. ಅವರ ಬಗ್ಗೆ ತುಂಬಾನೇ ಪ್ರೀತಿ ಇದೆ. ಅವಳ ಜೊತೆ ಸಮಯ ಕಳೆಯಲು ಖುಷಿ ಆಗುತ್ತದೆ' ಎಂದು ಅಮಲಾ ಹೇಳಿದ್ದಾರೆ. ಅಖಿಲ್ ವಿವಾಹ ಆಗುತ್ತಿರುವುದು ಮುಸ್ಲಿಂ ಹುಡುಗಿಯನ್ನು. ಈ ಬಗ್ಗೆ ಅಮಲಾಗೆ ಖುಷಿ ಇದೆ. 'ನನ್ನ ತಾಯಿ ಕ್ಯಾಥೋಲಿಕ್ ಆಗಿ ಜನಿಸಿದರು. ನಂತರ ಸೂಫಿ ಧರ್ಮವನ್ನು ಅಳವಡಿಸಿಕೊಂಡರು. ನನ್ನ ತಂದೆ ಹಿಂದೂ. ನನ್ನ ಮಾವ ನಾಗೇಶ್ವರ ರಾವ್ ಅವರಿಗೆ ಯಾವುದೇ ಧರ್ಮವಿರಲಿಲ್ಲ. ನೀವು ಅವರನ್ನು ನಾಸ್ತಿಕ ಎಂದು ಕರೆಯಲು ಸಾಧ್ಯವಿಲ್ಲ. ಅವರು 'ಕೆಲಸವೇ ನನ್ನ ಪೂಜೆ' ಎಂದು ಹೇಳುತ್ತಿದ್ದರು. ಅವರು ಎಂದಿಗೂ ಪೂಜೆ ಮಾಡಲಿಲ್ಲ. ಅವರು ತುಂಬಾ ಮೌಲ್ಯಾಧಾರಿತರಾಗಿದ್ದರು, ಧಾರ್ಮಿಕರಲ್ಲ' ಎಂದಿದ್ದಾರೆ ಅಮಲಾ. ಅಕ್ಕಿನೇನಿ ನಾಗಾರ್ಜುನ ಅವರು ಈ ಮೊದಲು ಲಕ್ಷ್ಮೀ ದಗ್ಗುಬಾಟಿಯನ್ನು ವಿವಾಹ ಆದರು. ಈ ದಂಪತಿಗೆ ಜನಿಸಿದ್ದೇ ನಾಗ ಚೈತನ್ಯ.

# ಬಿಸ್ನೆಸ್‌ನಲ್ಲಿ ಭಾರೀ ಹೊಡೆತ ತಿಂದ ನಟಿ

**ದೀಪಿಕಾಗೆ ಕೋಟಿ ಕೋಟಿ ನಷ್ಟ**

ನಟಿ ದೀಪಿಕಾ ಪಡುಕೋಣೆ ಅವರು ಇತ್ತೀಚೆಗೆ ಹೆಚ್ಚು ಸುದ್ದಿಯಲ್ಲಿದ್ದಾರೆ. ಕೆಲವು ಸಿನಿಮಾಗಳಿಂದ ಅವರು ಹೊರ ಬಂದಿರೋದು ಚರ್ಚೆಗೆ ಕಾರಣ ಆಗಿದೆ. ಈ ಮಧ್ಯೆ, ದೀಪಿಕಾ ಪಡುಕೋಣೆ ಅವರು ಬಿಸ್ನೆಸ್‌ನಲ್ಲಿ ಸಾಕಷ್ಟು ನಷ್ಟ ಅನುಭವಿಸಿದ್ದಾರೆ. ಅವರ ಒಡೆತನದ ಸ್ಕಿನ್‌ಕೇರ್ ಕಂಪನಿ ನಷ್ಟದಲ್ಲಿ ಇದೆ. ಈ ಬಗ್ಗೆ ವರದಿ ಪ್ರಸಾರ ಆಗಿದೆ.

ದೀಪಿಕಾ ಪಡುಕೋಣೆ ಅವರು '82°ಇ' ಹೆಸರಿನ ಬ್ರ್ಯಾಂಡ್ ಹೊಂದಿದ್ದಾರೆ. 2024ರಲ್ಲಿ ಕಂಪನಿ 21.2 ಕೋಟಿ ರೂಪಾಯಿ ಬಿಸ್ನೆಸ್ ಮಾಡಿತ್ತು. ಅದು ಈಗ 14.7 ಕೋಟಿ ರೂಪಾಯಿಗೆ ಇಳಿಕೆ ಆಗಿದೆ. ವಿಶೇಷ ಎಂದರೆ ನಷ್ಟದಲ್ಲೂ ಇಳಿಕೆ ಕಂಡಿದೆ. 2024ರಲ್ಲಿ 23 ಕೋಟಿ ನಷ್ಟ ಆದರೆ ಈ ವರ್ಷ 12.3 ಕೊಟಿ ರೂಪಾಯಿ ನಷ್ಟ ಆಗಿದೆ. 2024ರಲ್ಲಿ 82°ಇ ಕಂಪನಿ 47 ಕೋಟಿ ರೂಪಾಯಿ ವೆಚ್ಚ ಮಾಡಿತ್ತು. ಈ ವರ್ಷ ಸಾಕಷ್ಟು ಕಾಸ್ಟ್ ಕಟಿಂಗ್ ಮಾಡಲಾಗಿದ್ದು, ಈ ಮೂಲಕ ಖರ್ಚನ್ನು 25 ಕೋಟಿಗೆ ಇಳಿಸಲಾಗಿದೆ. ಇದರಿಂದ ನಷ್ಟ ತಗ್ಗಿದೆ. 2024ರಲ್ಲಿ ಬ್ರ್ಯಾಂಡ್‌ಗೆ ಸಾಕಷ್ಟು ಮಾರ್ಕೆಟಿಂಗ್ ಮಾಡಲಾಗಿತ್ತು. ಇದನ್ನು 2025ರಲ್ಲಿ ಕಡಿಮೆ ಮಾಡಲಾಗಿದೆ.

ದೀಪಿಕಾ ಅವರಿಗೆ ಸೋಶಿಯಲ್ ಮೀಡಿಯಾದಲ್ಲಿ ದೊಡ್ಡ ಅಭಿಮಾನಿ ಬಳಗ ಇದೆ. ಇದನ್ನು ಬಳಸಿಕೊಂಡು ಉತ್ಪನ್ನಗಳನ್ನು ಪ್ರಚಾರ ಮಾಡಿದ್ದರು. ಆದರೆ, ಬ್ರ್ಯಾಂಡ್ ನಷ್ಟ ಅನುಭವಿಸುವುದು ತಪ್ಪಿಲ್ಲ. 82°ಇ ಬ್ರ್ಯಾಂಡ್‌ನ ಉತ್ಪನ್ನಗಳು ಸಾಕಷ್ಟು ದುಬಾರಿಯಾಗಿವೆ.ಈ ಸಂಸ್ಥೆಗೆ ಸಾಕಷ್ಟು ದೊಡ್ಡ ಸ್ಪರ್ಧೆ ಇದ್ದು,ಇದರಲ್ಲಿ ಗೆಲುವು ಕಾಣೋದು ಅಷ್ಟು ಸುಲಭದಲ್ಲಿ ಇಲ್ಲ ಎನ್ನಲಾಗುತ್ತಿದೆ.

# ಡ್ರಗ್ಸ್ ಕೇಸ್ ವಿಚಾರಣೆಗೆ ಬಂದ ಒರಿ

ಹಿಂದಿ ಚಿತ್ರರಂಗದ ಬಹುತೇಕ ಸೆಲೆಬ್ರಿಟಿಗಳಿಗೆ ಒರಿ ಅಲಿಯಾಸ್ ಒರ್ಹಾನ್ ಅವತ್ರಮಣಿ ಬೆಸ್ಟ್ ಫ್ರೆಂಡ್ ಆಗಿದ್ದಾರೆ. ಎಲ್ಲಾ ಸೆಲೆಬ್ರಿಟಿಗಳ ಪಾರ್ಟಿಯಲ್ಲಿ ಒರಿ ಹಾಜರಿ ಹಾಕುತ್ತಾರೆ. ಆ ಮೂಲಕ ಅವರು ಸಿಕ್ಕಾಪಟ್ಟೆ ಪ್ರಚಾರ ಪಡೆಯುತ್ತಾರೆ. ಈಗ ಒರಿ ಹೆಸರು ಡ್ರಗ್ಸ್ ಕೇಸ್‌ನಲ್ಲಿ ತಳುಕುಹಾಕಿಕೊಂಡಿದೆ. 252 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಒರಿ ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಅಧಿಕಾರಿಗಳ ಎದುರು ಹಾಜರಾಗಲು ಬಂದ ಒರಿ ಅವರನ್ನು ನೋಡಲು ಅಭಿಮಾನಿಗಳು ಮುಗಿಬಿದ್ದಿದ್ದಾರೆ.



ಮುಂಬೈ ಪೊಲೀಸರ ಆಯಂಟಿ ನಾರ್ಕೋಟಿಕ್ ಸೆಲ್ ಅಧಿಕಾರಿಗಳು ಒರಿ ಅವರಿಗೆ ನೋಟಿಸ್ ನೀಡಿದ್ದರು. ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಕಳಿಸಲಾಗಿತ್ತು. ವಿಚಾರಣೆಗೆ ಹಾಜರಾಗಲು ಸಮಯಾವಕಾಶ ಬೇಕು ಎಂದು ಅವರು ಈ ಮೊದಲು ಮನವಿ ಮಾಡಿಕೊಂಡಿದ್ದರು. ನವೆಂಬರ್ 26 ಒರಿ ಅವರು ಖುದ್ದಾಗಿ ಬಂದು ವಿಚಾರಣೆ ಎದುರಿಸಿದ್ದಾರೆ. ಆಂಟಿ ನಾರ್ಕೋಟಿಕ್ ಸೆಲ್ ಕಚೇರಿಗೆ ಒರಿ ಅವರು ಬಂದಾಗ ಅಪಾರ ಸಂಖ್ಯೆಯ ಜನರು ಜಮಾಯಿಸಿದ್ದರು. ಒರಿ ಜೊತೆ ಫೋಟೋ ತೆಗೆದುಕೊಳ್ಳಬೇಕು ಎಂಬ ಆಸೆಯಿಂದ ಅಭಿಮಾನಿಗಳು ಮುಗಿಬಿದ್ದರು. ಜನರು ಹಾಗೂ ಪಾಪರಾಜಿಗಳು ಒರಿ ಅವರನ್ನು ಮುತ್ತಿಕೊಂಡರು. ಅವರಿಗೆ ಎಷ್ಟು ಜನಪ್ರಿಯತೆ ಇದೆ ಎಂಬುದಕ್ಕೆ ಈ ಘಟನೆಯೇ ಸಾಕ್ಷಿ ಆಗಿದೆ. ಒರಿ ಅವರ ಅನೇಕ ವಿಡಿಯೋಗಳು ವೈರಲ್ ಆಗಿವೆ.

# ಆಫ್ರಿಕಾ ವಿರುದ್ಧ ಭಾರತಕ್ಕೆ ಹೀನಾಯ ಸೋಲು; ಪಾಕಿಸ್ತಾನಕ್ಕೆ ಲಾಭ

ಕೇವಲ ಒಂದು ವರ್ಷದ ಅವಧಿಯಲ್ಲಿ, ಟೀಂ ಇಂಡಿಯಾ ತವರಿನಲ್ಲಿ ಎರಡನೇ ಟೆಸ್ಟ್ ಸರಣಿ ಸೋಲನ್ನು ಅನುಭವಿಸಿದೆ. ಕೇವಲ ಸೋಲಲ್ಲ, ಎರಡನೇ ವೈಟ್‌ವಾಶ್. 2024 ರಲ್ಲಿ ನ್ಯೂಜಿಲೆಂಡ್ ಸಾಧಿಸಿದ್ದನ್ನು, ವಿಶ್ವ ಟೆಸ್ಟ್ ಚಾಂಪಿಯನ್ ದಕ್ಷಿಣ ಆಫ್ರಿಕಾ ಈಗ 2025 ರಲ್ಲಿ ಪುನರಾವರ್ತಿಸಿದೆ. ಗುವಾಹಟಿಯಲ್ಲಿ ನಡೆದ ಎರಡನೇ ಟೆಸ್ಟ್ ಪಂದ್ಯದಲ್ಲಿ, ದಕ್ಷಿಣ ಆಫ್ರಿಕಾ ಭಾರತವನ್ನು 408 ರನ್‌ಗಳ ಬೃಹತ್ ಅಂತರದಿಂದ ಸೋಲಿಸಿ, ಸರಣಿಯನ್ನು 2-0 ಅಂತರದಿಂದ ಗೆದ್ದುಕೊಂಡಿದೆ. ಟೀಂ ಇಂಡಿಯಾ ತವರಿನಲ್ಲಿ ಅವಮಾನಕರ ಸೋಲನ್ನು ಅನುಭವಿಸಿದ್ದಲ್ಲದೆ, ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಪಾಯಿಂಟ್ ಪಟ್ಟಿಯಲ್ಲಿ ಐದನೇ ಸ್ಥಾನಕ್ಕೆ ಕುಸಿದಿದೆ.

**5ನೇ ಸ್ಥಾನಕ್ಕೆ ಕುಸಿದ ಟೀಂ ಇಂಡಿಯಾ:** ಜೂನ್‌ನಲ್ಲಿ ಇಂಗ್ಲೆಂಡ್ ಪ್ರವಾಸ ಮಾಡುವುದರೊಂದಿಗೆ ಟೀಂ ಇಂಡಿಯಾ ನಾಲ್ಕನೇ ಆವೃತ್ತಿಯ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಭಿಯಾನವನ್ನು ಆರಂಭಿಸಿತ್ತು. ಆ ಪ್ರವಾಸದ ನಂತರ, ಟೀಂ ಇಂಡಿಯಾ ಒಟ್ಟು ಒಂಬತ್ತು ಟೆಸ್ಟ್ ಪಂದ್ಯಗಳನ್ನು ಆಡಿದೆ.

ಅದರಲ್ಲಿ ಕೇವಲ ನಾಲ್ಕರಲ್ಲಿ ಗೆದ್ದು ನಾಲ್ಕರಲ್ಲಿ ಸೋತಿದ್ದು, ಒಂದು ಪಂದ್ಯ ಡ್ರಾ ಆಗಿದೆ. ಪರಿಣಾಮವಾಗಿ, ಟೀಂ ಇಂಡಿಯಾ ಈ ಒಂಬತ್ತು ಟೆಸ್ಟ್ ಪಂದ್ಯಗಳಿಂದ 52 ಅಂಕಗಳನ್ನು ಹೊಂದಿದ್ದು, ಅದರ ಗೆಲುವಿನ ಶೇಕಡಾವಾರು 48.15 ಕ್ಕೆ ಇಳಿದಿದೆ. ಇದರಿಂದಾಗಿ ಟೀಂ ಇಂಡಿಯಾ ನಾಲ್ಕನೇ ಸ್ಥಾನದಿಂದ ಐದನೇ ಸ್ಥಾನಕ್ಕೆ ಕುಸಿದಿದೆ.



**ಸರಣಿ ಗೆದ್ದು ಬೀಗಿದ ಸೌತ್ ಆಫ್ರಿಕಾ**

ಈ ಟೆಸ್ಟ್ ಸರಣಿಗೂ ಮುನ್ನ ಟೀಂ ಇಂಡಿಯಾ ಮೂರನೇ ಸ್ಥಾನದಲ್ಲಿತ್ತು, ಆದರೆ ಕೋಲ್ಕತ್ತಾ ಟೆಸ್ಟ್ ಸೋಲಿನ ನಂತರ, ಅದರ ಗೆಲುವಿನ ಶೇಕಡಾವಾರು 54.17 ಆಗಿದ್ದು, ನಾಲ್ಕನೇ ಸ್ಥಾನಕ್ಕೆ ಕುಸಿದಿತ್ತು. ಇದೀಗ ಗುವಾಹಟಿ ಟೆಸ್ಟ್ ಪಂದ್ಯವನ್ನು ಭಾರತ ಭಾರಿ ಅಂತರದಿಂದ ಸೋತಿರುವ ಕಾರಣ ಪಾಕಿಸ್ತಾನವು 50 ಗೆಲುವಿನ ಶೇಕಡಾವಾರುವಿನೊಂದಿಗೆ ನಾಲ್ಕನೇ ಸ್ಥಾನಕ್ಕೇರಿದೆ.

**ನಂಬರ್ 1 ಆಗದ ಆಫ್ರಿಕಾ:** ದಕ್ಷಿಣ ಆಫ್ರಿಕಾ ವಿಷಯದಲ್ಲಿ, 25 ವರ್ಷಗಳ ನಂತರ ಭಾರತದಲ್ಲಿ ಸರಣಿ ಗೆದ್ದು ಕ್ಲೀನ್ ಸ್ವೀಪ್ ಪೂರ್ಣಗೊಳಿಸಿದರೂ ಅದರ ಸ್ಥಾನ ಬದಲಾಗಿಲ್ಲ. ಟೆಂಬಾ ಬವುಮಾ ನೇತೃತ್ವದ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ತಂಡವು ನಾಲ್ಕು ಟೆಸ್ಟ್‌ಗಳಲ್ಲಿ ಮೂರು ಗೆಲುವುಗಳೊಂದಿಗೆ ಪ್ರಸ್ತುತ ಎರಡನೇ ಸ್ಥಾನದಲ್ಲಿದೆ, 36 ಅಂಕಗಳು ಮತ್ತು 75 ಗೆಲುವಿನ ಶೇಕಡಾವಾರು ಗಳಿಸಿದೆ. ಆಸ್ಟ್ರೇಲಿಯಾ 100 ಪ್ರತಿಶತ ಗೆಲುವಿನೊಂದಿಗೆ ಮೊದಲ ಸ್ಥಾನದಲ್ಲಿದ್ದರೆ, ಶ್ರೀಲಂಕಾ 66.17 ಪ್ರತಿಶತ ಗೆಲುವಿನೊಂದಿಗೆ ಮೂರನೇ ಸ್ಥಾನದಲ್ಲಿದೆ.

# ನಿರ್ಧಾರ ಬಿಸಿಸಿಐಗೆ ಬಿಟ್ಟಿದ್ದು

ದಕ್ಷಿಣ ಆಫ್ರಿಕಾ ವಿರುದ್ಧದ ಎರಡು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ವೈಟ್‌ವಾಶ್ ಆದ ನಂತರ, ಟೀಂ ಇಂಡಿಯಾದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರ ಭವಿಷ್ಯದ ಬಗ್ಗೆ ಪ್ರಶ್ನೆಗಳು ಎದ್ದಿವೆ. ಗುವಾಹಟಿಯಲ್ಲಿ ನಡೆದ ಎರಡನೇ ಟೆಸ್ಟ್ ಪಂದ್ಯದಲ್ಲಿ ಭಾರತ 408 ರನ್‌ಗಳ ಸೋಲು ಅನುಭವಿಸಿತು. ಇದು ರನ್‌ಗಳ ವಿಷಯದಲ್ಲಿ ಭಾರತದ ಅತಿದೊಡ್ಡ ಟೆಸ್ಟ್ ಸರಣಿ ಸೋಲು. ದಕ್ಷಿಣ ಆಫ್ರಿಕಾ 25 ವರ್ಷಗಳ ನಂತರ ಭಾರತದಲ್ಲಿ ಟೆಸ್ಟ್ ಸರಣಿಯನ್ನು ಗೆದ್ದಿದೆ. ಈ ಅವಮಾನಕರ ಪ್ರದರ್ಶನದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್, ತನ್ನ ಭವಿಷ್ಯವನ್ನು ಬಿಸಿಸಿಐ ನಿರ್ಧರಿಸಬೇಕಾಗುತ್ತದೆ ಎಂದಿದ್ದಾರೆ. ಇದರ ಜೊತೆಗೆ ಗಂಭೀರ್ ತಮ್ಮ ಹಿಂದಿನ ಸಾಧನೆಗಳನ್ನು ಸಹ ಪಟ್ಟಿ ಮಾಡಿದ್ದಾರೆ.

**ಅವಮಾನಕರ ಸೋಲಿಗೆ ಗಂಭೀರ್ ಹೇಳಿದ್ದಿದು**

ದಕ್ಷಿಣ ಆಫ್ರಿಕಾ ಸರಣಿಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಗಂಭೀರ್, 'ಬಿಸಿಸಿಐ ನನ್ನ ಭವಿಷ್ಯವನ್ನು ನಿರ್ಧರಿಸಬೇಕಾಗುತ್ತದೆ. ಭಾರತೀಯ ಕ್ರಿಕೆಟ್ ಮುಖ್ಯ, ನಾನು ಮುಖ್ಯವಲ್ಲ ಎಂದು ನಾನು ಮುಖ್ಯ ಕೋಚ್ ಆಗಿ ಅಧಿಕಾರವಹಿಸಿಕೊಂಡಾಗಲೇ ಹೇಳಿದ್ದೆ. ಮರೆಯಬೇಡಿ, ಇಂಗ್ಲೆಂಡ್‌ನಲ್ಲಿ ಟೆಸ್ಟ್ ಸರಣಿಯನ್ನು ಡ್ರಾ ಮಾಡಲು, ಚಾಂಪಿಯನ್ಸ್ ಟ್ರೋಫಿ ಮತ್ತು ಏಷ್ಯಾಕಪ್ ಗೆಲ್ಲಲು ತಂಡವನ್ನು ಮುನ್ನಡೆಸಿದ ಅದೇ ವ್ಯಕ್ತಿ ನಾನು. ಟೀಂ ಇಂಡಿಯಾ ಪರಿವರ್ತನೆಯ ಹಂತದ ಮೂಲಕ ಸಾಗುತ್ತಿದ್ದು, ಪ್ರಸ್ತುತ ತಂಡದಲ್ಲಿ ಅನುಭವದ ಕೊರತೆಯಿದೆ.

ಇದಲ್ಲದೆ, ನಾವು ಟೆಸ್ಟ್ ಕ್ರಿಕೆಟ್‌ನಲ್ಲಿ ನಂಬರ್ ಒನ್ ತಂಡವಾಗಲು ಬಯಸಿದರೆ, ಈ ಸ್ವರೂಪಕ್ಕೆ ಆದ್ಯತೆ ನೀಡಬೇಕು. ನಾವು ಉತ್ತಮವಾಗಿ ಆಡಬೇಕಾಗಿದೆ. ಒಂದು ಹಂತದಲ್ಲಿ 95 ರನ್‌ಗಳಿಗೆ 1 ವಿಕೆಟ್ ಕಳೆದುಕೊಂಡಿದ್ದ ತಂಡ 122 ರನ್‌ಗಳಿಗೆ 7 ವಿಕೆಟ್ ಕಳೆದುಕೊಳ್ಳುವುದು ಸ್ವೀಕಾರಾರ್ಹವಲ್ಲ. ಇಲ್ಲಿ ನೀವು ಯಾವುದೇ ಒಬ್ಬ ಆಟಗಾರ ಅಥವಾ ಯಾವುದೇ ಒಂದು ಶಾಟ್ ಅನ್ನು ದೂಷಿಸಲು ಸಾಧ್ಯವಿಲ್ಲ. ನಾನು ಯಾರನ್ನೂ ಎಂದಿಗೂ ದೂಷಿಸಿಲ್ಲ, ಮತ್ತು ನಾನು ಅದನ್ನು ಎಂದಿಗೂ ಮಾಡುವುದಿಲ್ಲ' ಎಂದಿದ್ದಾರೆ.



# ಸ್ಮೃತಿ-ಪಲಾಶ್ ಮದುವೆ ಮುಂದೂಡಲು ಇದುವೇ ಕಾರಣ



**ವಿಷಯ ಬಹಿರಂಗಪಡಿಸಿದ ಅಮಿತಾ ಮುಚ್ಚಲ್**

ಟೀಮ್ ಇಂಡಿಯಾ ಆಟಗಾರ್ತಿ ಸ್ಮೃತಿ ಮಂಧಾನ ಹಾಗೂ ಸಂಗೀತ ನಿರ್ದೇಶಕ ಪಲಾಶ್ ಮುಚ್ಚಲ್ ಅವರ ವಿವಾಹ ನವೆಂಬರ್ 23 ರಂದು ನೆರವೇರಬೇಕಿತ್ತು. ಆದರೆ ಮದುವೆ ಸಮಾರಂಭದ ನಡುವೆ ಸ್ಮೃತಿ ಮಂಧಾನ ಅವರ ತಂದೆಗೆ ಹೃದಯಾಘಾತವಾಗಿದ್ದರಿಂದ ವಿವಾಹವನ್ನು ಮುಂದೂಡಲಾಯಿತು. ಹೀಗೆ ಮದುವೆ ಮುಂದೂಡುವ ನಿರ್ಧಾರ ತೆಗೆದುಕೊಂಡಿದ್ದು ವರ ಪಲಾಶ್ ಮುಚ್ಚಲ್.

ಈ ಬಗ್ಗೆ ಪ್ರಮುಖ ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿರುವ ಪಲಾಶ್ ಮುಚ್ಚಲ್ ಅವರ ತಾಯಿ ಅಮಿತಾ ಮುಚ್ಚಲ್, ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ ಸ್ಮೃತಿ ಮಂಧಾನ ಹಾಗೂ ಪಲಾಶ್ ವಿವಾಹ ಮುಗಿದಿರುತ್ತಿತ್ತು. ಆದರೆ ಶ್ರೀನಿವಾಸ್ ಮಂಧಾನ ಅವರಿಗೆ ಹೃದಯಾಘಾತವಾಗಿದ್ದರಿಂದ ಮದುವೆಯನ್ನು ಮುಂದೂಡುವ ನಿರ್ಧಾರ ಮಾಡಲಾಗಿದೆ.

ಮದುವೆ ಮುಂದೂಡುವ ನಿರ್ಧಾರವನ್ನು ತೆಗೆದುಕೊಂಡಿದ್ದು ಪಲಾಶ್ ಮುಚ್ಚಲ್. ಪಲಾಶ್ ಹಾಗೂ ಶ್ರೀನಿವಾಸ್ ಮಂಧಾನ ತುಂಬಾ ಆಪ್ತರು. ಅವರಿಗೆ ಹೃದಯಾಘಾತವಾಗಿ ಆಯಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕೊಂಡೊಯ್ಯುತ್ತಿದ್ದಂತೆ ಪಲಾಶ್ ವಿವಾಹ ಸಮಾರಂಭವನ್ನು ಮುಂದೂಡಬೇಕೆಂದು ಆಗ್ರಹಿಸಿದರು.

ಏಕೆಂದರೆ ಪಲಾಶ್ ಮುಚ್ಚಲ್ ಶ್ರೀನಿವಾಸ್ ಮಂಧಾನ ಅವರ ಸಮ್ಮುಖದಲ್ಲಿ ವಿವಾಹವಾಗಲು ಬಯಸಿದ್ದರು. ಅವರು ಆಸ್ಪತ್ರೆಯಲ್ಲಿರುವಾಗ ಶುಭ ಸಮಾರಂಭ ಮಾಡುವುದು ಸರಿಯಲ್ಲ ಎಂದು ಮದುವೆಯ ಆಚರಣೆಗಳು ಮತ್ತು ಇತರ ಸಮಾರಂಭಗಳನ್ನು ಮುಂದೂಡಲು ಪಲಾಶ್ ಕೇಳಿಕೊಂಡರು. ಹೀಗಾಗಿ ವಿವಾಹವನ್ನು ಮುಂದೂಡಲಾಗಿದೆ.

ಶ್ರೀನಿವಾಸ್ ಮಂಧಾನ ಅವರೊಂದಿಗೆ ಪಲಾಶ್ ಅತ್ಯುತ್ತಮ ಆಪ್ತತೆಯನ್ನು ಹೊಂದಿದ್ದಾರೆ. ಸ್ಮೃತಿ ಮಂಧಾನಗಿಂತ ಪಲಾಶ್ ತನ್ನ ಮಾವನೊಂದಿಗೆ ಆತ್ಮೀಯತೆ ಬೆಳೆಸಿದ್ದಾರೆ. ಹೀಗಾಗಿ ಮಾವ ಚೇತರಿಸಿಕೊಳ್ಳುವವರೆಗೆ ಮದುವೆ ಬೇಡ ಎಂಬ ನಿರ್ಧಾರ ತೆಗೆದುಕೊಂಡಿದ್ದಾರೆ. ಇದೇ ಕಾರಣದಿಂದಾಗಿ ಮದುವೆಯನ್ನು ಪೋಸ್ಟ್‌ಪೋನ್ ಮಾಡಲಾಯಿತು ಎಂದು ಅಮಿತಾ ಮುಚ್ಚಲ್ ತಿಳಿಸಿದ್ದಾರೆ.

ಇನ್ನು ಶ್ರೀನಿವಾಸ್ ಮಂಧಾನ ಅವರು ಸಂಗೀತ್ ಕಾರ್ಯಕ್ರಮದಂದು ತುಂಬಾ ಹೊತ್ತು ಡ್ಯಾನ್ಸ್ ಮಾಡಿದ್ದರು. ಇದರಿಂದಾಗಿ ಮರುದಿನ ಅಸ್ವಸ್ಥರಾಗಿದ್ದರು. ಇದಾಗ್ಯೂ ಅವರು ಯಾರಿಗೂ ಹೇಳಿರಲಿಲ್ಲ.

ಆದರೆ ಪರಿಸ್ಥಿತಿ ಕೈ ಮೀರುತ್ತಿರುವುದು ಗೊತ್ತಾದ ಬಳಿಕ ಆಯಂಬುಲೆನ್ಸ್ ಕರೆಸಲಾಯಿತು ಎಂದು ಪಲಾಶ್ ಮುಚ್ಚಲ್ ಅವರ ತಾಯಿ ತಿಳಿಸಿದ್ದಾರೆ.

ಇನ್ನು ಸ್ಮೃತಿ ಮಂಧಾನ ಅವರ ತಂದೆ ಅನಾರೋಗ್ಯಕ್ಕೆ ಒಳಗಾದ ಬೆನ್ನಲ್ಲೇ, ಪಲಾಶ್ ಅವರ ಆರೋಗ್ಯವೂ ಹದಗೆಟ್ಟಿತು. ವೈರಲ್ ಸೋಂಕು ಮತ್ತು ಅಸಿಡಿಟಿಯಿಂದಾಗಿ ಅವರನ್ನು ಸಹ ಆಸ್ಪತ್ರೆಗೆ ದಾಖಲಿಸಬೇಕಾಯಿತು. ಪಲಾಶ್ ಈಗ ಮುಂಬೈ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ. ಸದ್ಯ ಪಲಾಶ್ ಮುಚ್ಚಲ್ ಹಾಗೂ ಸ್ಮೃತಿ ಮಂಧಾನ ಅವರ ವಿವಾಹವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ.

ಶ್ರೀನಿವಾಸ್ ಮಂಧಾನ ಅವರು ಸಂಪೂರ್ಣ ಚೇತರಿಸಿಕೊಂಡ ಬಳಿಕವಷ್ಟೇ ಹೊಸ ವಿವಾಹ ದಿನಾಂಕವನ್ನು ನಿಗದಿ ಮಾಡಲಿದ್ದಾರೆ.

# ಹೀಗಾದಲ್ಲಿ ಭಾರತ ಮತ್ತು ಪಾಕಿಸ್ತಾನ್ ನಡುವೆ 3 ಬಾರಿ ಮುಖಾಮುಖಿ

ಟಿ20 ವಿಶ್ವಕಪ್ 2026 ವೇಳಾಪಟ್ಟಿ ಪ್ರಕಟವಾಗಿದೆ. ಭಾರತ ಮತ್ತು ಶ್ರೀಲಂಕಾ ಜಂಟಿಯಾಗಿ ಆಯೋಜಿಸುತ್ತಿರುವ ಈ ಬಾರಿಯ ಟಿ20 ವಿಶ್ವಕಪ್‌ನಲ್ಲಿ ಒಟ್ಟು 20 ತಂಡಗಳು ಕಣಕ್ಕಿಳಿಯಲಿವೆ. ಈ ಇಪ್ಪತ್ತು ತಂಡಗಳನ್ನು ನಾಲ್ಕು ಗ್ರೂಪ್‌ಗಳಾಗಿ ವಿಂಗಡಿಸಲಾಗಿದೆ.

ಇತ್ತ ಭಾರತ ಮತ್ತು ಪಾಕಿಸ್ತಾನ್ ತಂಡಗಳು ಗ್ರೂಪ್-1 ರಲ್ಲಿದ್ದು, ಹೀಗಾಗಿ ಮೊದಲ ಸುತ್ತಿನಲ್ಲೇ ಸಾಂಪ್ರದಾಯಿಕ ಎದುರಾಳಿಗಳು ಮುಖಾಮುಖಿಯಾಗಲಿದೆ. ಅದರಂತೆ ಫೆಬ್ರವರಿ 15 ರಂದು ನಡೆಯಲಿರುವ ಟಿ20 ವಿಶ್ವಕಪ್‌ನ 27ನೇ ಪಂದ್ಯದಲ್ಲಿ ಭಾರತ-ಪಾಕಿಸ್ತಾನ್ ಕಣಕ್ಕಿಳಿಯಲಿದೆ. ಈ ಪಂದ್ಯದ ಬಳಿಕ ಪಾಕಿಸ್ತಾನ್ ಹಾಗೂ ಟೀಮ್ ಇಂಡಿಯಾ ಸೂಪರ್-8 ಹಂತಕ್ಕೇರಿದರೆ ಮತ್ತೊಮ್ಮೆ ಎದುರು ಬದುರಾಗಲಿದೆ.

**ಇಂಡೊ-ಪಾಕ್ ಕದನಕ್ಕೆ ಶ್ರೀಲಂಕಾ ಆತಿಥ್ಯ**

ಇನ್ನು ಸೂಪರ್-8 ಹಂತದಲ್ಲೂ ಎರಡು ತಂಡಗಳು ಅಂಕಪಟ್ಟಿಯಲ್ಲಿ ಟಾಪ್-4 ನಲ್ಲಿ ಕಾಣಿಸಿಕೊಂಡರೆ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗಬಹುದು.

ಅಂದರೆ ಸೂಪರ್-8 ಅಂಕ ಪಟ್ಟಿಯಲ್ಲಿ ಭಾರತ ತಂಡ ಮೊದಲ ಸ್ಥಾನ ಅಲಂಕರಿಸಿ, ಪಾಕಿಸ್ಥಾನ್ 4ನೇ ಸ್ಥಾನ ಪಡೆದರೆ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗಲಿದೆ.

ಒಂದು ವೇಳೆ ಉಭಯ ತಂಡಗಳು ಸೆಮಿಫೈನಲ್‌ನಲ್ಲಿ ಬೇರೆ ತಂಡಗಳ ವಿರುದ್ಧ ಕಣಕ್ಕಿಳಿದು ಗೆದ್ದರೂ ಫೈನಲ್‌ನಲ್ಲಿ ಮುಖಾಮುಖಿಯಾಗಲಿದೆ. ಅದರಂತೆ ಕೇವಲ 29 ದಿನಗಳ ನಡುವೆ ಭಾರತ-ಪಾಕಿಸ್ತಾನ್ ನಡುವಣ ಮೂರು ಹೈವೋಲ್ಟೇಜ್ ಪಂದ್ಯಗಳನ್ನು ವೀಕ್ಷಿಸುವ ಅವಕಾಶ ಕ್ರಿಕೆಟ್ ಪ್ರೇಮಿಗಳಿಗೆ ದೊರಕಲಿದೆಯಾ ಕಾದು ನೋಡಬೇಕಿದೆ.

ಆದರೆ ಈ ಬಾರಿ ಉಭಯ ತಂಡಗಳು ಮುಖಾಮುಖಿಯಾಗುತ್ತಿರುವುದು ಶ್ರೀಲಂಕಾದಲ್ಲಿ ಎಂಬುದು ವಿಶೇಷ. ಅಂದರೆ ಪಾಕಿಸ್ತಾನ್ ತಂಡವು ಭಾರತದಲ್ಲಿ ಟೂರ್ನಿಯ ಆಡಲು ನಿರಾಕರಿಸಿದೆ. ಹೀಗಾಗಿ ಪಾಕಿಸ್ತಾನದ ಎಲ್ಲಾ ಪಂದ್ಯಗಳನ್ನು ಶ್ರೀಲಂಕಾದಲ್ಲಿ ಆಯೋಜಿಸಲಾಗುತ್ತಿದೆ.

ಅದರಂತೆ ಇಂಡೊ-ಪಾಕ್ ಕದನಕ್ಕೆ ಈ ಬಾರಿ ಶ್ರೀಲಂಕಾದ ಆರ್. ಪ್ರೇಮದಾಸ ಸ್ಟೇಡಿಯಂ ಆತಿಥ್ಯವಹಿಸಲಿದೆ.



**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**